## MYSORE COTTON CONTROL BILL, 1963.

*(Introduction.)*

Sri G. NARAYANA GOWDA (Minister for Agriculture).—I beg to introduce the Mysore Cotton Control Bill, 1963.

Mr. SPEAKER.—The Bill is introduced.

---

## MYSORE IRRIGATION BILL, 1963.

*(Motion to consider—Debate continued.)*

Sri S. SIVAPPA.—I just want to know whether this maintenance cess is in addition to irrigation cess which is already there as also betterment levy and wet assessment.

Sri VEERENDRA PATIL (Minister for Public Works).—Maintenance cess has nothing to do with betterment contribution and water rate. This cess is only to meet the expenditure for maintaining the irrigation works.

Sri S. SIVAPPA.—May I know the anticipated income from this maintenance cess ?

Sri VEERENDRA PATIL.—It depends upon irrigation acreage. It is at the rate of Rs. 5 per acre.

Sri S. SIVAPPA.—You must have some figure as to what would be the revenue out of this cess.

Sri VEERENDRA PATIL.—I cannot say off-hand what will be the revenue. I will have to find out the total acreage under irrigation and then calculate on that basis. If he wants correct information, I would supply. But off-hand I cannot give it.

Sri S. SIVAPPA.—Does it apply only to wet area which is going to be irrigated in future or to the existing areas also ?

Sri VEERENDRA PATIL.—This maintenance cess would be collected only from the landholders who are going to be benefited by the irrigation works.

Sri S. SIVAPPA.—That is in future ?

Sri VEERENDRA PATIL.—I shall read out the relevant clause. Clause 44 says:

> "That State Government shall levy a maintenance cess at rupees five per acre per annum on all lands in the area benefited by any irrigation work maintained by the State Government, the Tungabhadra Board or a Taluk Development Board."

The beneficiaries will pay this maintenance cess and not others.

† Sri S. SIVAPPA.—That means that land which is already irrigated will also have to pay cess. I oppose this Bill.

ಸಭಾಪತಿಯವರೆ, ನಾನು ಈ ವಿಧೇಯಕವನ್ನು ವಿರೋಧಿಸಲು ನಿಂತಿದ್ದೇನೆ. ಇದರ ಧ್ಯೇಯ ಮತ್ತು ಕಾರಣಗಳಲ್ಲಿ ಹೇಳಿರುವಂತೆ ಮೈಸೂರು ದೇಶದಲ್ಲಿ ಒಂದೇ ವಿಧವಾದ ಕಾನೂನಿನ ಅಗತ್ಯ

ವಿದೆ. ಈ ದೃಷ್ಟಿಯಿಂದ ನೀರಾವರಿ ಪ್ರದೇಶಗಳಿಗೆ ಸಂಬಂಧಪಟ್ಟ ಹಾಗೆ ದೇಶದಲ್ಲೆಲ್ಲ ಒಂದೇ ರೀತಿಯ ನಿಯಮಗಳಿರಬೇಕೆಂಬ ಉದ್ದೇಶದಿಂದ ತಂದಿರುವುದಾಗಿ ಹೇಳಿದ್ದಾರೆ. ಏಕರೂಪತೆ ಮೈಸೂರು ದೇಶದಲ್ಲೆಲ್ಲಾ ಬರಬೇಕೆಂದು ಹೇಳಿ ವ್ಯವಸಾಯಕ್ಕಾಗಿ ನೀರಾವರಿಯನ್ನವಲಂಬಿಸಿರುವ ರೈತರಮೇಲೆ ಹೆಚ್ಚು ತೆರಿಗೆಯ ಹೊರೆಯನ್ನು ಹಾಕುವುದನ್ನು ತೀವ್ರವಾಗಿ ವಿರೋಧಿಸಬೇಕಾಗಿದೆ. ಈಗಾಗಲೇ ಬೇರೆ ಬೇರೆ ರಾಜ್ಯಗಳಿಂದ ಬಂದಿರುವ ಐದು ಪ್ರದೇಶಗಳಲ್ಲಿದ್ದ ಕಾನೂನುಗಳನ್ನು ಒಂದೆ ರೀತಿ ಮಾಡಬೇಕೆಂಬ ದೃಷ್ಟಿಯಿಂದ ಏಕರೂಪತೆಯನ್ನು ತರುತ್ತಿದ್ದಾರೆ. ಈ ದೇಶದಲ್ಲಿ ತೆರಿಗೆಯ ಹೊರೆಯನ್ನು ಹೆಚ್ಚು ಮಾಡಬೇಕೆಂಬ ಉದ್ದೇಶವುಳ್ಳ ಯಾವುದೇ ಕಾಯಿದೆಯನ್ನು ಈ ರೂಪ ದಲ್ಲಿ ತಂದು ತಮ್ಮ ಉದ್ದೇಶವನ್ನು ನಡೆಸುತ್ತ ಬಂದಿದ್ದಾರೆ. ಮಾರಾಟ ತೆರಿಗೆ ಬೊಂಬಾಯಿ ಮತ್ತು ಮದರಾಸಿನಲ್ಲಿ ಜಾಸ್ತಿಯಿದೆ. ಆದುದರಿಂದ ಇಲ್ಲಿಯೂ ಅಷ್ಟೇ ಇರಬೇಕೆಂದು ಇಲ್ಲಿ ಹೆಚ್ಚು ಮಾಡಿದರು. ಹೀಗೆ ಹೊರಗಡೆ ಹೆಚ್ಚಾಗಿದೆಯೆಂದು ಹೇಳಿ ಇತರ ಅನೇಕ ತೆರಿಗೆಗಳನ್ನು ಹೆಚ್ಚು ಮಾಡಿದರು. ಸ್ಕೂಲು, ಕಾಲೇಜುಗಳ ಫೀ ಬೇರೆ ಕಡೆಗಳಲ್ಲಿ ಕಡಿಮೆ ಇದ್ದರೂ ಬೊಂಬಾಯಿನಲ್ಲಿಲ್ಲ ಹೆಚ್ಚಾಗಿದೆಯೆಂದು ಹೇಳಿ ಇಲ್ಲಿನ ಮಟ್ಟಕ್ಕೆ ಅದನ್ನು ತರುವ ಬದಲು ಅಲ್ಲಿನ ಮಟ್ಟಕ್ಕೆ ಇಲ್ಲಿಯ ದರವನ್ನು ಏರಿಸಿ ವಿದ್ಯಾಭ್ಯಾಸದಿಂದಲೂ ಆದಾಯ ಪಡೆಯುವ ಮಾರ್ಗವನ್ನು ಅನುಸರಿಸಿದರು. ಅದೇ ರೀತಿ ನೀರಾವರಿ ಕಾನೂನು ತರುವ ವಿಚಾರದಲ್ಲಿಯೂ ಕೂಡ ಮಾಡಲು ಹೊರಟಿದ್ದಾರೆ. ನಮ್ಮ ದೇಶದಲ್ಲಿ ಶತಮಾನಗಳ ಕಾಲದಿಂದಲೂ ನೀರಾವರಿ ಕಲ್ಪಿಸಿಕೊಟ್ಟ ಪ್ರದೇಶದಲ್ಲಿಯೂ ಕೂಡ ಅದನ್ನು ನೋಡಿಕೊಳ್ಳುವುದಕ್ಕೆ ಎಕರೆಗೆ 5 ರೂಪಾಯಿನಂತೆ ಹೆಚ್ಚಾಗಿ ಕೊಡಿ ಎಂದು ಸರಕಾರ ಕೇಳುವುದಕ್ಕೆ ಯಾವ ಸಮರ್ಥನೆ ಇದೆ ?

ಹಿಂದಿನಿಂದಲೂ ನೋಡುವುದಾದರೆ ದೇಶದಲ್ಲಿ 30 ಸಾವಿರ ಕೆರೆಗಳಿವೆ ಮತ್ತು ಅನೇಕ ದೊಡ್ಡ ದೊಡ್ಡ ಆಣೆಕಟ್ಟುಗಳಿವೆ. ಈ ಆಣೆಕಟ್ಟುಗಳಿಗೋಸ್ಕರವಾಗಿ ಹಿಂದೆ ಕಂಟ್ರಿಬ್ಯೂಷನ್ ತೆಗೆದುಕೊಂಡಿದ್ದಾರೆ. ಬೆಟರ್‌ಮೆಂಟ್ ಲೆವಿ ಕೂಡ ಹಾಕಿದ್ದಾರೆ. ನೀರಾವರಿ ಕಂದಾಯವನ್ನು ಎಲ್ಲಾ ಪ್ರದೇಶಗಳಿಗೂ ಕೊಡುತ್ತಿದ್ದೇವೆ. ಇವತ್ತು ಕೆರೆಗಳಿಂದ, ಕಾಲುವೆಗಳಿಂದ ಮತ್ತು ನೀರಾವರಿ ಕಡೆಗಳಿಂದ ರೈತನಾದವನು ತನ್ನ ಭೂಮಿಗೆ ತಿರುಗಿಸಿಕೊಳ್ಳುವುದಕ್ಕೋಸ್ಕರ ಮತ್ತು ತನ್ನ ಜಮೀನಿಗೆ ತೆಗೆದುಕೊಂಡು ಹೋಗುವುದಕ್ಕೆ ಪುನಃ 5 ರೂಪಾಯಿಗಳನ್ನು ಜಾಸ್ತಿ ಕೊಡಬೇಕು ಎಂಬುದಾಗಿ ಒಂದು ಕಾನೂನನ್ನು ಇಟ್ಟಿದ್ದೀರಿ. ಈಗ ಅನುಪಯುಕ್ತವಾಗಿ ಆದಾಯವಿಲ್ಲದೇ ಇರುವ ಭೂಮಿಮೇಲೆ ಕಂದಾಯದ ಹೊರೆಯನ್ನು ತೆಗೆದುಕೊಳ್ಳುವುದು ಸರಿಯೇ ? ಯಾವಾಗಲೂ ಭೂಮಿಯ ಆದಾಯವನ್ನು ಸಮರ್ಥನೆ ಮಾಡಿ ಭೂಮಿಯ ಹಿಡುವಳಿಯ ಮೇಲೆ ಕಂದಾಯವನ್ನು ಹಾಕಬೇಕು ; ಎನ್ನುವುದನ್ನು ಬಿಟ್ಟು ಸಮಗ್ರವಾಗಿ ಕೇವಲ ಅರ್ಧ ಎಕರೆ ಅಥವಾ ಒಂದು ಎಕರೆ ಜಮೀನು ಇರತಕ್ಕವರಮೇಲೆಲ್ಲಾ ಭೂಮಿ ಕಂದಾಯವನ್ನು ಹಾಕಬೇಕೆಂಬ ತತ್ವವನ್ನು ಈಗ ಸರ್ಕಾರದವರು ದೇಶದ ಮುಂದೆ ಇಡುತ್ತಿದ್ದಾರೆ. ಮೊನ್ನೆ ತಾನೇ ಶೇಕಡ ನೂರರಷ್ಟು ಸರ್‌ಚಾರ್ಜು ಫೀ ಯೆಂದು ಬೇರೆ ಹಾಕಿದ್ದಾರೆ. ನಿಜವಾಗಿ ಇದಕ್ಕಿಂತ ಪಾಪಕೃತ್ಯ ದೇಶದಲ್ಲಿ ಮತ್ತೊಂದು ಇಲ್ಲವೆಂದು ನಾನು ಹೇಳಬಹುದು. ಇವತ್ತು ನಮಗೆಲ್ಲರಿಗೂ ಅತ್ಯವಶ್ಯವಾಗಿ ಬೇಕಾದಂಥ ಅನ್ನವನ್ನು ಉತ್ಪತ್ತಿ ಮಾಡಿಕೊಡತಕ್ಕ ಯೋಧನಿಗೆ ನಮ್ಮ ಸರ್ಕಾರದವರು ಕೊಡು ತ್ತಿರುವ ಸೌಕರ್ಯಗಳಾದರೂ ಏನು ಇವತ್ತು ಹಿಮಾಲಯ ಪರ್ವತದಡಿಯಲ್ಲಿ ನಿಂತು ಯುದ್ಧ ಮಾಡತಕ್ಕ ನಮ್ಮ ಸೈನಿಕರಿಗೆ ಅನ್ನ ಸಾಕಷ್ಟು ಬೇಕು, ಯುದ್ಧದಲ್ಲಿ ಹೋರಾಡುವ ನಮ್ಮ ಸೈನಿಕರಿಗೆ ಜೀವಕಳೆ ಬರುವುದಕ್ಕೆ ಅನ್ನದ ಶಕ್ತಿಯನ್ನುಂಟುಮಾಡುವವನು ಅವನು, ದೇಶದ ಶಕ್ತಿಯನ್ನು ಹೆಚ್ಚಿಸುವಂಥ ಮತ್ತು ದೇಶದ ಸಂಪತ್ತನ್ನೇ ಹೊಂದಿರತಕ್ಕ ಕಾಡುಗಳನ್ನು ಸಂರಕ್ಷಣೆ ಮಾಡುತ್ತಾ ಹಗಲಿರಳು ಕಾಯುತ್ತಿರತಕ್ಕ ಸೈನಿಕನಿಗೆ ಅನ್ನವನ್ನು ಕೊಡಬೇಕಾಗಿದೆ. ಅತನೇ ಇವರಿಗೆ ಜೀವ ಕಳೆ ಕೊಡಬೇಕಾಗಿದೆ. ನೇಗಿಲು ಹಿಡಿದು ದಿನವೆಲ್ಲಾ ಭೂಮಿಯನ್ನೇ ಅವಲಂಬಿಸಿ ಇವತ್ತಿನ ದಿವಸ ತನ್ನ ಜೀವನವನ್ನು ಸಾಗಿಸುತ್ತಾ ಇರುವಂತಹವನಿಗೆ ಸರ್ಕಾರದವರು ಕೊಟ್ಟಿರತಕ್ಕ ಮರ್ಯಾದೆ ಯಾದರೂ ಏನು ? ಅದೂ ಅಲ್ಲದೆ ಯುದ್ಧಭೂಮಿಯಲ್ಲಿರತಕ್ಕ ಯೋಧನಿಗೆ, ಅವನ ಹೆಂಡತಿ ಮತ್ತು ಮಕ್ಕಳಿಗೆ ಇಲ್ಲಿ ಎಲ್ಲಾ ಸೌಕರ್ಯಗಳನ್ನು ಕೊಡಬೇಕಾದುದು ನಮ್ಮ ಕರ್ತವ್ಯ. ಅದು ದೇಶದ ಪವಿತ್ರ ಕರ್ತವ್ಯವೂ ಹೌದು. ಅಷ್ಟೇ ಪವಿತ್ರತೆಯನ್ನು ನಮ್ಮಲ್ಲಿ ಒಳ್ಳೆಯ ಕೆಲಸಮಾಡುವ ರೈತನಿಗೆ ಸರ್ಕಾರದವರು ಕೊಟ್ಟು ಇದುವರೆಗೆ ಅವರಿಗೆ ಮಾಡಿರತಕ್ಕ ಬಹುಮಾನವಾದರೂ ಏನೆಂಬುದಾಗಿ ನಾನು ಈ ಕಾಂಗ್ರೆಸ್ ಸರ್ಕಾರದವರನ್ನು ಕೇಳುತ್ತೇನೆ. ಇವತ್ತಿನ ದಿವಸ ಇವರಲ್ಲಿ ಈ ಬಗ್ಗೆ ಏನಾದರೂ ಆಧಾರವಿದ್ದರೆ ಕೊಡಲಿ. ಶೇಕಡ ನೂರರಷ್ಟು ಕಂದಾಯ ಕೊಡತಕ್ಕ ಅನ್ನದಾತನಮೇಲೆ ಈ ಸರ್ಕಾರಕ್ಕೆ ಕರುಣೆಯಿಲ್ಲವೇ ? ಮಳೆ ಬಂದರೆ ಅವನ ಚೆಲ್ಲಾಟ. 365 ದಿವಸಗಳೂ ಬೆವರನ್ನು ಸುರಿಸಿ ಕಷ್ಟಪಡುತ್ತಿರುವ ಅವನು ಒಂದು ವೇಳೆ ಪ್ರತಿಭಟನೆ ಮಾಡಿದರೆ ನಿಜವಾಗಿ ಇವರ ಗತಿಯೇನಾಗುತ್ತದೆಂಬುದನ್ನು ಈ ಸಂದರ್ಭದಲ್ಲಿ ಗಮನಿಸಬೇಕು.

(SRI S. SIVAPPA)

[MR. DEPUTY SPEAKER in the Chair.]

ಏಕೆಂದರೆ ಇವತ್ತು ರೈತನಾದವನು ನಿಜವಾಗಿ ಇಷ್ಟು ಕಂದಾಯವನ್ನು ಕೊಡುವ ಸ್ಥಿತಿಯಲ್ಲಿಲ್ಲ. ರೈತನ ಮಕ್ಕಳಮೇಲೆ ಇವರಿಗೆ ಕರುಣೆ ಎಂಬುದೇ ಇಲ್ಲವೇ ? ಓಟು ಕೊಡುವ ಕಾಲದಲ್ಲಿ ಅವನನ್ನು ಹೊಗಳುವುದು, ಅವನಿಂದ ಓಟನ್ನು ಗಳಿಸಿದಮೇಲೆ ಅವನನ್ನು ಮರೆತುಬಿಡುವುದು, ಇದು ಇವರಿಗೆ ನ್ಯಾಯವೇ? ಅವನ ಒಂದು ಕಷ್ಟಕ್ಕೆ ಇವರಲ್ಲಿ ಲೇಸು ಮಾತ್ರ ಕರುಣೆ ಇಲ್ಲವಲ್ಲ ಎಂದು ನಾನು ಬಹಳ ದುಃಖದಿಂದ ಇಲ್ಲಿ ಹೇಳುತ್ತಿದ್ದೇನೆ. ಈಗಾಗಲೇ ಸರ್‌ಛಾರ್ಜು ಕೊಡುವ ಶಕ್ತಿಯೇ ನಮ್ಮ ರೈತರಿಗೆ ಇಲ್ಲ. ಶೇಕಡ 75 ಭಾಗದಷ್ಟು ಜನ ಸರ್‌ಛಾರ್ಜು ಕೊಡುವುದು ಕಷ್ಟ. ಭೂಕಂದಾಯ ಕೊಡುವ ಶಕ್ತಿಯೇ ಸಾಕಷ್ಟು ಇಲ್ಲದೇ ಇರುವಾಗ ಇನ್ನು ಈ ಸರ್‌ಛಾರ್ಜು ಮತ್ತು ಅದರಮೇಲೆ ಇವತ್ತಿನ ದಿವಸ ತಂದಿರುವ ಈ ಮಸೂದೆಯ ಪ್ರಕಾರ ರೈತನಾದವನು ಮತ್ತೆ ಎಕರೆಗೆ 5 ರೂಪಾಯಿಗಳನ್ನು ಜಾಸ್ತಿ ಮೇಂಟಿನೆನ್ಸ್ ಸೆಸ್ ಎಂಬುದಾಗಿ ಕೊಡಬೇಕೆಂದು ಹೇಳುತ್ತಿದ್ದಾರೆ. ಇದೇನು ಅವರ ಒಂದು ಭಂಡತನವೋ ಏನೋ ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳೇ ಹಿಂದೆ ಒಂದು ಸಾರಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ತೆರಿಗೆಯ ವಿಚಾರದಲ್ಲಿ ಬಹಳ ಸುಳ್ಳು ಹೇಳಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅವೇನೆಂದರೆ ಈ ದೇಶದಲ್ಲಿ ಹೊಸ ತೆರಿಗೆಗಳನ್ನು ಮತ್ತೆ ಯಾವುದೂ ಹಾಕುವುದಿಲ್ಲವೆಂಬುದಾಗಿ. ಅದು ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬಂತು. ಆದರೆ ಈ ಮಾತನ್ನು ಈಗ ಮರುಚುನಾವಣೆಯ ಸಮಯವೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರು ಹೇಳಿರಬೇಕೆಂದು ನಾನು ಭಾವಿಸುತ್ತೇನೆ. ಇದನ್ನು ಮೊನ್ನೆ ತಾನೇ ಹೇಳಿದರು. ಆ ರೀತಿ ಹೇಳಿ ಒಂದು ವಾರ ಕೂಡ ಆಗಿಲ್ಲ. ಈಗಾಗಲೇ ಈ ಇರ್ರಿಗೇಷನ್ ಸೆಸ್ ಬಂತು. ವಾಹನಗಳ ತೆರಿಗೆಯ ಹೊರೆ ಜನಗಳಮೇಲೆ ವಿಧಿಸುವ ಕಾನೂನು ನಿನ್ನೆ ಚರ್ಚೆಯಾಯಿತು. ಇವತ್ತು ಎಕರೆಗೆ 5 ರೂಪಾಯಿಗಳನ್ನು ಜಾಸ್ತಿಯಾಗಿ ಮೇಂಟಿನೆನ್ಸ್ ಗೋಸ್ಕರ ಕೊಡಬೇಕೆಂದು ಈ ಮಸೂದೆಯನ್ನು ಬೇರೆ ತಂದಿದ್ದಾರೆ. ಎಷ್ಟು ಎಕರೆಗೆ ಈ ಸೆಸ್ಸನ್ನು ಹಾಕುತ್ತೀರಿ, ಇದರಿಂದ ಎಷ್ಟು ಆದಾಯ ಸರ್ಕಾರಕ್ಕೆ ಬರುತ್ತದೆಂಬ ಬಗ್ಗೆ ಸರ್ಕಾರದಲ್ಲಿ ಯಾವ ಲೆಕ್ಕವೂ ಇಲ್ಲ. ಸಾಮಾನ್ಯವಾಗಿ ಒಂದು ಶಾಸ್ತ್ರೀಯವಾದ ಅಂದಾಜನ್ನೇ ಇಟ್ಟುಕೊಳ್ಳದೇ ಇರುವ ಸರ್ಕಾರ......

† ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಈ ಮೇಂಟಿನೆನ್ಸ್ ಸೆಸ್ಸನ್ನು ಯಾವುದೋ ಒಂದು ಹೊಸ ತೆರಿಗೆಯೆಂದು ವಾದ ಮಾಡುತ್ತಿದ್ದಾರೆ. ಅದು ನಿಜವಾದುದು ಅಲ್ಲ. ಇದು ಹೊಸದೂ ಅಲ್ಲ. ಹಳೇ ಮೈಸೂರಿನಲ್ಲಿದೆ. ಹೊಸ ಮೈಸೂರಿನ ಭಾಗದಲ್ಲಿ ಎಲ್ಲಾ ಕಡೆಯೂ ಈ ಸೆಸ್ಸನ್ನು ಕೊಡುತ್ತಿದ್ದಾರೆ. ಮೊದಲಿನಿಂದಲೂ ರೈತರಿಗೆ ಸಣ್ಣ ಪುಟ್ಟ ಕೆಲಸ ಕಾರ್ಯಗಳನ್ನು ಮೇಂಟಿನೆನ್ಸ್ ಮಾಡುವುದಕ್ಕೆ ಯಾವ ಏಜೆನ್ಸಿಯೂ ಇಲ್ಲ. ಹಳೆಯ ಮೈಸೂರಿನ ಭಾಗದಲ್ಲಿ ಕೆರೆಯ ಕೆಳಗಿನ ಜಮೀನಿಗೆ 3 ರೂಪಾಯಿಗಳಂತೆ ಕಂದಾಯವನ್ನು ಕೊಡುತ್ತಿದ್ದಾರೆ. ಹೊಸ ಮೈಸೂರಿನ ಬೊಂಬಾಯಿ ಮುಂತಾದ ಪ್ರದೇಶಗಳಲ್ಲಿ ಇರ್ರಿಗೇಷನ್ ಸೆಸ್ ಎಂದು ಕೊಡುತ್ತಿದ್ದಾರೆ. ಆದ್ದರಿಂದ ಇದೇನೂ ಹೊಸದಲ್ಲ. ರೈತರು ತಮ್ಮ ಜಮೀನು ಸಾಗುವಾಡುವ ಕಾಲದಲ್ಲಿ ಕೆಲವಾರು ಸಣ್ಣಪುಟ್ಟ ಕೆಲಸಕಾರ್ಯಗಳ ಮೇಂಟನೆನ್ಸ್‌ಗೋಸ್ಕರ ಈ ಒಂದು ಮಸೂದೆಯನ್ನು ತಂದಿದ್ದೇವೆ. ಇದಕ್ಕಾಗಿ ಕೇವಲ 5 ರೂಪಾಯಿಗಳನ್ನು ಮೇಂಟನೆನ್ಸ್ ಸೆಸ್‌ಎಂದು ಹಾಕುತ್ತಿದ್ದೇವೆ. ಇದರಿಂದ ಎಷ್ಟು ವರಮಾನ ಬರುತ್ತದೆ ಮತ್ತು ಇದರಿಂದ ನೀರಾವರಿ ನಮ್ಮಲ್ಲಿ ಎಷ್ಟು ಎಕರೆಗಳಾಗುತ್ತವೆ ಎಂಬ ಬಗ್ಗೆ ನಾನು ತಿಳಿದಮಟ್ಟಿಗೆ ಹೇಳುವುದಾದರೆ ನನ್ನಲ್ಲಿ ಕರಾರುವಾಕ್ಕಾದ ಅಂಕಿಅಂಶಗಳಿಲ್ಲ. ಆ ಒಂದು ಆಧಾರವನ್ನು ಇಟ್ಟುಕೊಂಡು ಸ್ವಲ್ಪ ತಡಮಾಡಿ ಮಾಹಿತಿಯನ್ನು ಬೇಕಾದರೆ ಕೊಡಬಲ್ಲೆ. ಈಗ ಎಕರೆಗೆ 5 ರೂಪಾಯಿಗಳನ್ನು ತೆರಿಗೆಯ ರೂಪವಾಗಿ ವಿಧಿಸುವುದರಿಂದ ಸುಮಾರು 25ಲಕ್ಷ ಎಕರೆ ಇರ್ರಿಗೇಷನ್ ಏರಿಯಾಕ್ಕೆಲ್ಲಾ ಲೆಕ್ಕಹಾಕಿದರೆ ಸುಮಾರು 1 ಕೋಟಿ 25 ಲಕ್ಷ ರೂಪಾಯಿಗಳಷ್ಟು ವರಮಾನ ಮೇಂಟನೆನ್ಸ್ ಸೆಸ್ ರೂಪವಾಗಿ ನಮಗೆ ಬರುತ್ತದೆ. ಇರ್ರಿಗೇಷನ್‌ಸೆಸ್ ಜೊತೆಗೆ ಈ ತೆರಿಗೆಯನ್ನು ಹಾಕಿ ಒಳ್ಳೆಯ ರೀತಿಯಲ್ಲಿ ಜಮೀನುಗಳನ್ನು ಮೇಂಟೇನ್ ಮಾಡಬೇಕೆಂಬುದೇ ಸರ್ಕಾರದ ಉದ್ದೇಶ. ಆದ್ದರಿಂದ ಇದೇನೂ ಹೊಸ ತೆರಿಗೆಯೆನೂ ಅಲ್ಲ.

ಶ್ರೀ ಎಸ್. ಶಿವಪ್ಪ.—ಮಾನ್ಯ ಮಂತ್ರಿಗಳು ಏನೂ ಹೊಸದಾಗಿ ವರಮಾನ ಬರುವುದಿಲ್ಲ ಎಂಬುದಾಗಿ ಒಂದು ನಿಜವನ್ನು ಹೇಳಿದರು. ಆದರೂ ಕೇವಲ 1 ಕೋಟಿ 25 ಲಕ್ಷ ರೂಪಾಯಿಗಳು ಬರುತ್ತವೆಂಬುದಾಗಿ ಹೇಳಿದರು. ಅವರಿಗೆ ಲಕ್ಷ ಎಂಬುದು ಲಕ್ಷ್ಯವೇ ಇಲ್ಲ, ಇನ್ನು ಕೋಟಿ ಎಂಬುದು ಅವರಿಗೆ ಲೆಕ್ಕಕೇ ಇಲ್ಲ. ಈಗ 3 ರೂಪಾಯಿಗಳು ಇದ್ದುದನ್ನು 5 ರೂಪಾಯಿಗಳಾಗಿ ಮಾಡುತ್ತೇವೆಂದು

ಹೇಳುತ್ತಿದ್ದಾರೆ. ಇದರಿಂದ ರೈತನಿಗೆ ತೆರಿಗೆ ಹೊರೆ ಜಾಸ್ತಿಯಾಗುವುದು ಖಂಡಿತ. ಈ ತೆರಿಗೆ ಹೊರೆಯನ್ನು ಸರ್ಕಾರದವರು ದೇಶದ ಜನಗಳಮೇಲೆ ಹಾಕಿ ದೇಶದ ಸಂಪನ್ಮೂಲಗಳನ್ನು ಜಾಸ್ತಿ ಮಾಡುತ್ತಿದ್ದಾರೆ. ಮಾರಾಟ ತೆರಿಗೆ, ವರಮಾನತೆರಿಗೆ ಮತ್ತು ಇತರ ಅನೇಕ ವಿಧವಾದ ತೆರಿಗೆಗಳನ್ನು ಹಾಕಿ ಬರತಕ್ಕ ಆದಾಯದಿಂದ ರೈತನಿಗೆ ಸಾಕಷ್ಟು ಪ್ರಯೋಜನ ದೊರಕುವ ಹಾಗೆ ಏನೊಂದು ವ್ಯವಸ್ಥೆಯನ್ನೂ ಮಾಡುತ್ತಿಲ್ಲ. ದೇಶದ ನಾನಾ ಕಡೆಗಳಲ್ಲಿ ಅಣೆಕಟ್ಟುಗಳನ್ನು ಕಟ್ಟಿ ಆಹಾರಸಂಪತ್ತನ್ನು ಜಾಸ್ತಿ ಮಾಡಬೇಕೆಂಬ ಉದ್ದೇಶದಿಂದ 2 ಕೋಟಿ 40 ಲಕ್ಷ ಜನಗಳಮೇಲೆ ಅನೇಕ ರೀತಿಯಲ್ಲಿ ತೆರಿಗೆಗಳನ್ನು ಹಾಕುತ್ತಿದ್ದಾರೆ. ಆದರೆ ಇದರಲ್ಲಿ ಹಣ ವ್ಯಥಾ ಪೋಲಾಗುತ್ತಿದೆಯೇ ಹೊರತು ನಮಗೆ ಸಾಕಷ್ಟು ಆಹಾರವನ್ನು ಬೆಳೆದು ಕೊಡತಕ್ಕ ರೈತನಿಗೆ ಏನೂ ಉಪಯೋಗವಾಗುತ್ತಿಲ್ಲ. ರೈತನಾದವನು ತಾನು ಕಷ್ಟಪಟ್ಟು ಸಂಪಾದಿಸಿದ ಅನೇಕ ವಸ್ತುಗಳನ್ನು ಮಾರಿ ಇಂತಹ ಅನೇಕ ತರಹ ತೆರಿಗೆಗಳನ್ನು ಸರ್ಕಾರದ ಬೊಕ್ಕಸಕ್ಕೆ ಕೊಡುತ್ತಿದ್ದಾನೆ. ನಾವು ಕೊಡತಕ್ಕ ತೆರಿಗೆಗಳೂ ಸಹ ರೈತರ ಅನುಕೂಲಕ್ಕಾಗಿ ಎಂದು ಹೇಳುತ್ತಾರೆ. ನೂರಾರು ಕೋಟಿ ರೂಪಾಯಿಗಳನ್ನು ತೆರಿಗೆಯಮೂಲಕ ಸರ್ಕಾರದ ಬೊಕ್ಕಸಕ್ಕೆ ತುಂಬುತ್ತಿದ್ದರೂ ಜಮೀನಿಗೆ ನೀರನ್ನು ಒದಗಿಸುವುದಕ್ಕೋಸ್ಕರ ಮತ್ತು ಅದರ ಮೇಂಟನೆನ್ಸ್ ಮಾಡುವುದಕ್ಕೋಸ್ಕರ ಹೊಸದಾಗಿ ಈ ಸೆಸ್ಸನ್ನು ಹಾಕುತ್ತಿದ್ದೇವೆ ಎಂಬುದಾಗಿ ಹೇಳುತ್ತಿದ್ದಾರೆ. ಇದರಿಂದೇನು ಗೊತ್ತಾಗುತ್ತದೆಂದರೆ ಸರ್ಕಾರದಲ್ಲಿ ಶಾಶ್ವತವಾದ ತೆರಿಗೆಯ ನೀತಿಯೆನ್ನುವುದೇ ಇಲ್ಲವೆಂಬ ದು. ನಾವು ಎಷ್ಟು ಹೇಳಿದರೂ ಅವರಿಗೆ ಅರ್ಥವಾಗುತ್ತಿಲ್ಲ. ನಿಜವಾಗಿ ಇವರಿಗೆ ಸಾಕಷ್ಟು ಶಕ್ತಿಯೇ ಇಲ್ಲವೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಮಾತೆತ್ತಿದರೆ ತೆರಿಗೆಗಳನ್ನು ಹೆಚ್ಚುಮಾಡುವುದು, ತಮ್ಮ ಬೊಕ್ಕಸಕ್ಕೆ ಅದರಿಂದ ಬರತಕ್ಕ ಆದಾಯವನ್ನು ಬರಮಾಡಿಕೊಳ್ಳುವುದು ಒಂದೇ ದಾರಿ, ಬೇರೆ ವಿಧವಾಗಿಯಾದರೂ ರೈತರಿಗೆ ರಿಯಾಯಿತಿ ಕೊಡುವ ಮನಸ್ಸೇ ಇಲ್ಲ. ಈ ವಿಚಾರವನ್ನು ನಾನು ವರ್ಷಂಪ್ರತಿ ಒಂದಲ್ಲ ಒಂದುರೀತಿಯಲ್ಲಿ ಈ ಸಭೆಯಲ್ಲಿ ಹೇಳುತ್ತಲೇ ಬಂದಿದ್ದೇನೆ. ಆದರೂ ತೆರಿಗೆ ಭಾರವೇನೋ ಜಾಸ್ತಿಯಾಗುತ್ತಲೇ ಇದೆ. ಶೇಕಡ ನೂರರಷ್ಟು ಸರ್‌ಛಾರ್ಜು ತೆರಿಗೆಯನ್ನು ವಿಧಿಸಿದಂಥ ಈ ಸರ್ಕಾರ ನಿಜವಾಗಿ ರೈತರಿಗೆ ಯಾವುದಾದರೂ ಒಂದು ರೂಪದಲ್ಲಿ ರಿಯಾಯಿತಿಯನ್ನು ಈ ವರ್ಷ ಕೊಡತಕ್ಕಂತಹ ಒಂದು ಮಸೂದೆಯನ್ನು ಈ ಸಭೆಯಲ್ಲಿ ತರಬಹುದು ಎಂಬುದಾಗಿ ನಾನು ಬಹಳವಾಗಿ ನಿರೀಕ್ಷಣೆ ಮಾಡಿಕೊಂಡಿದ್ದೆ. ಆದರೆ ಆ ಒಂದು ನಿರೀಕ್ಷಣೆ ಇದುವರೆಗೂ ಸರ್ಕಾರದಿಂದ ಬರಲಿಲ್ಲ. ರೈತನ ಮೇಲೆ ಹಾಕತಕ್ಕ ಕರ ಇನ್ನೂ ಜಾಸ್ತಿ ಮಾಡುವ ರೂಪದಲ್ಲಿ ಇವತ್ತಿನ ದಿವಸ ಈ ಮಸೂದೆ ಬಂದಿದೆ. ಅವರು ಹೇಳಿದ ಅಂಕಿಅಂಶಗಳನ್ನು ನೋಡಿದರೆ ಸುಮಾರು ಒಂದು ಕೋಟಿ ರೂಪಾಯಿಗಳ ತೆರಿಗೆಯಭಾರ ರೈತರುಗಳ ಮೇಲೆ ಬೀಳುತ್ತದೆ. ಇಡೀ ಮೈಸೂರುದೇಶದಲ್ಲಿ ಕಂದಾಯರೂಪವಾಗಿ ಕೊಡುವುದು ಸುಮಾರು ನಾಲ್ಕೂವರೆ ಕೋಟಿ ರೂಪಾಯಿಗಳಾಗುತ್ತವೆ.

2-30 P.M.

ಹೋದ ವರ್ಷ ಸರ್‌ಛಾರ್ಜ್ ಮುಖಾಂತರ ಕಂದಾಯವನ್ನು ಒಂದಕ್ಕೆ ಎರಡರಷ್ಟು ಹೆಚ್ಚಿಸಿ ಸುಮಾರು 10 ಕೋಟಿ ರೂಪಾಯಿ ಆದಾಯವನ್ನು ಭೂಮಿಯಿಂದ ಆಹಾರ ಪದಾರ್ಥಗಳನು ಬೆಳೆಯತಕ್ಕಂಥ ರೈತರಿಂದ ಪಡೆಯುತ್ತಿದ್ದೀರಿ. ಭೂಮಿ ಕಷ್ಟಪಟ್ಟು ಉತ್ತು ಅನ್ನ ಕೊಡತಕ್ಕಂಥ ರೈತನಿಂದ ದಂಡದ ರೀತಿಯಲ್ಲಿ 5 ಕೋಟಿ ರೂಪಾಯಿ ಹೆಚ್ಚು ಕಂದಾಯ ಹೋದಸಲ ತೆಗೆದುಕೊಂಡಿದ್ದೀರಿ. ಇದನ್ನು ಸಮರ್ಥನೆ ಮಾಡಿಕೊಳ್ಳಲು ನಿಮ್ಮ ವಾದವೇನು? ಸರ್‌ಛಾರ್ಜನ್ನು ಹೊರಪ್ರಾಂತ್ಯಗಳಲ್ಲಿ ಕೆಲವು ಕಡೆ ಲೆವಿ ಮಾಡಿಲ್ಲ ಅಥವ ಹಾಕಿದ್ದನ್ನು ಕಡಿಮೆ ಮಾಡಿದ್ದಾರೆ. ಪ್ರಚಂಡ ಹೋರಾಟ ನಡೆದ ಮೇಲೆ ಯು. ಪಿ. ಯಲ್ಲಿ ಸರ್‌ಛಾರ್ಜನ್ನು ಕಡಿಮೆಮಾಡಿದ್ದಾರೆ. ನೀರಿನ ಅನುಕೂಲವನ್ನು ಜಾಸ್ತಿಮಾಡಿಕೊಡುತ್ತೇವೆ ಎಂಬ ನೆವದಲ್ಲಿ ಸೆಸ್ಸನ್ನು ಬೇರೆ ರೀತಿಯಲ್ಲಿ ಜಾಸ್ತಿಮಾಡುವ ಸಾಹಸ ಮಾಡಿದ್ದೀರಿ. ಈ ಮಸೂದೆಯಿಂದ ವ್ಯವಸಾಯಗಾರನಿಗೆ, ಬಹಳ ಕಷ್ಟ ಸಂಕಷ್ಟಗಳಿರುವ ರೈತನಿಗೆ ಬಹಳ ಹೊರೆಯಾಗುತ್ತದೆ. ಅವನ ಮೇಲಿರುವ ಹುಣ್ಣಿಗೆ ಪುನಃ ಹೊಡೆಯತಕ್ಕಂಥ ಸಾಹಸ ಮಾಡಿದ್ದೀರಿ. ಈ ಒಂದು ಇರ್‍ರಿಗೇಷನ್ ಸೆಸ್ಸನ್ನು ಸರ್‌ಛಾರ್ಜ್ ರೀತಿಯಲ್ಲಿ ಜಾಸ್ತಿ ಮಾಡುತ್ತಿದ್ದೀರಿ. ನೀವು ಈ ರೀತಿ ರೈತನ ಮೇಲೆ ಹೊರೆ ಹಾಕುತ್ತಾ ಹೋದರೆ, ರೈತ ಬೇಜಾರಾಗಿ ಈ ಭೂಮಿಯ ವ್ಯವಸಾಯವೇ ಬೇಡ, ಈ ಭೂಮಿಯಿಂದ ಏನೂ ಪ್ರತಿಫಲವಿಲ್ಲದಿರುವಾಗ ಇದರ ಕಷ್ಟವೇಕೆ ಎಂದು ಅದರ ಕೈಯನ್ನೇ ಬಿಡುತ್ತಾನೆ. ನೀವು ಅವನ ಮನಸ್ಸಿನ ಮೇಲೆ ಜುಗುಪ್ಸೆ ಬರುವ ಹಾಗೆ ಮಾಡುತ್ತಾ ಇದ್ದೀರಿ. ದೇಶದಲ್ಲಿ ಆಹಾರದ ಅಭಾವ, ಕೊರತೆ ಇರುವಾಗ, ಹೊರಗಡೆ ದೇಶಗಳಿಗೆ ಕೋಟ್ಯಂತರ ರೂಪಾಯಿ ಸುರಿದು ಆಹಾರ ಕೊಳ್ಳುತ್ತಿರುವಾಗ, ಆಹಾರದ ಪರಿಸ್ಥಿತಿ ಸಮರ್ಪಕವಾಗಿಲ್ಲದಿರುವಾಗ, ರೈತನಿಗೆ ಒಳ್ಳೆಯ ಉತ್ತೇಜನವನ್ನು ಕೊಡಬೇಕು. ಅವನು ಜಾಸ್ತಿ ಉತ್ಸಾಹವನ್ನು ವ್ಯವಸಾಯದಲ್ಲಿ ತೋರಿಸಿ ಹೆಚ್ಚು ಬೆಳೆಯುವಂತೆ ಆಕರ್ಷಕ ರೀತಿಯಲ್ಲಿ ನೀವು ವರ್ತಿಸಬೇಕು. ಅವನಿಗೆ ಆಕರ್ಷಣೆಯನ್ನು ಒದಗಿ

(ಶ್ರೀ ಎಸ್. ಶಿವಪ್ಪ)

ಸುವ ಬದಲು ಅವನ ಮೇಲೆ ಹೆಚ್ಚುಹೆಚ್ಚು ತೆರಿಗೆ ಭಾರವನ್ನು ಹಾಕಿ ಈ ವಿಧವಾಗಿ ಚಿತ್ರಹಿಂಸೆ ಕೊಡುತ್ತಿದ್ದೀರಿ. ದೇಶದಲ್ಲಿ ರೈತನಿಗೆ ಬಹಳ ಕಷ್ಟವಿದೆ ಎಂದು ಎಲ್ಲರೂ ಅರಿತಿದ್ದಾರೆ. ಭೂಮಿಯಿಂದ ಹೆಚ್ಚು ಆಹಾರ ಉತ್ಪನ್ನವಾಗಬೇಕು, ವ್ಯವಸಾಯಗಾರನಿಗೆ ಹೆಚ್ಚಿನ ಸಹಾಯ ಮಾಡಬೇಕು ಎಂದು ಭಾರತ ಸರಕಾರ ಮತ್ತು ಎಲ್ಲ ರಾಜ್ಯ ಸರಕಾರಗಳೂ ಬರೀ ಮಾತಿನಲ್ಲಿ ಆಡಿವರೆ ಸಾರ್ಥಕವಾಗುವುದಿಲ್ಲ. ವ್ಯವಸಾಯಗಾರನಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು ; ವ್ಯವಸಾಯ ಪ್ರಥಮ ಸ್ಥಾನ ಹೊಂದಬೇಕು ಎಂದು ಮೊನ್ನೆ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ವ್ಯವಸಾಯ ಶಾಖೆ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಎಲ್ಲ ಶಾಖೆಗಳನ್ನೂ ಕೂಡ ರಾಜ್ಯದ ಮುಖ್ಯಮಂತ್ರಿಗಳೇ ಇಟ್ಟುಕೊಳ್ಳಲಿ, ವ್ಯವಸಾಯಕ್ಕೆ ಒಂದ ಪ್ರಾಶಸ್ತ್ಯ, ಯೋಗ್ಯತೆ, ಮರ್ಯಾದೆ ಬರಲಿ ಎಂದು ಅವರು ಹೇಳಿದರು. ಆದರೆ ಅದು ಬರೀ ಮಾತಿನಿಂದಲೆ ಬರುವುದಿಲ್ಲ. ಮಾತಿನಿಂದ ಕೃತಿಗೆ ಇಳಿಯಬೇಕು. ವ್ಯವಸಾಯಗಾರನಿಗೆ ಎಷ್ಟುಮಟ್ಟಿನ ಪ್ರೋತ್ಸಾಹ ಕೊಡಬೇಕೆಂದಿದ್ದೀವೆಯೂ ಅದನ್ನು ಕಾರ್ಯತ: ಕೊಡಬೇಕು. ಆಹಾರ ಉತ್ಪತ್ತಿಯನ್ನು ಕೇವಲ ಕಾಯಿದೆ ಕಾನೂನುಗಳಿಂದ ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ಬರಿ ಬಾಯಿ ಮಾತಿನಲ್ಲಿ ಸಾಧ್ಯವಾಗುವುದಿಲ್ಲ. ಅದಕ್ಕೆ ಬದಲಾಗಿ ರೈತರಿಗಿರುವ ಬಾಧೆಗಳನ್ನು ತಪ್ಪಿಸಬೇಕೆಂದು ಅನೇಕ ಸಲ ಹೇಳಿದ್ದೇನೆ.

ಈ ಇರ್ರಿಗೇಶನ್ ಬಿಲ್ ಮುಖಾಂತರ ತಾವು ಭೂಮಿಯ ಮೇಲೆ ಮೇಂಟೆನೆನ್ಸ್ ಸೆಸ್ ಅಂತ ಏನೊಂದು ಹೆಚ್ಚಿಗೆ ಕಂದಾಯದ ಹೊರೆಯನ್ನು ಹಾಕಿದ್ದೀರೋ ಅದನ್ನು ಕಿತ್ತೊಗೆಯಬೇಕು. ಈ ನೀರಿನ ಯೋಗಕ್ಷೇಮವನ್ನು ನೋಡುವುದಕ್ಕೆ ಕೆನಾಲ್ ಆಫೀಸರು, ಚೀಫ್ಇಂಜನಿಯರು, ಇರ್ರಿಗೇಶನ್ ಆಫೀಸರು, ಇತ್ಯಾದಿ, ಚಾನಾಲ್ಸ್, ಇತ್ಯಾದಿ ಬಗ್ಗೆ ಬೇಕಾದಷ್ಟು ಕಲಮ್ಮುಗಳನ್ನು ಹಾಕಿದ್ದೀರಿ. ಇವೆಲ್ಲಕ್ಕಿಂತ ಮುಖ್ಯವಾಗಿ ಈ ದೇಶದಲ್ಲಿ ಭೂಮಿಯನ್ನು ಅವಲಂಬಿಸಿರತಕ್ಕ ರೈತನಿಗೆ ಎಷ್ಟು ನೀರಿನ ಸೌಕರ್ಯವನ್ನು ಒದಗಿಸಬೇಕೋ ಅಷ್ಟನ್ನು ಒದಗಿಸಿಲ್ಲ ಅನ್ನುವುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಇವತ್ತು ನೀರಾವರಿ ಅಂಕಿಸಂಖ್ಯೆಗಳನ್ನು ತೆಗೆದುಕೊಂಡರೆ, ಮದ್ರಾಸ್ ರಾಜ್ಯದಲ್ಲಿ ಇವತ್ತು ಶೇಕಡ 38 ಭಾಗ ನೀರಾವರಿ ಪ್ರಯೋಜನ ಹೊಂದಿದೆ ; ಆಂಧ್ರಪ್ರದೇಶದಲ್ಲಿ 28 ರಷ್ಟು ಭಾಗ ನೀರಾವರಿ ಪ್ರಯೋಜನ ಹೊಂದಿದೆ. ದಕ್ಷಿಣಭಾರತದಲ್ಲಿ ಮೈಸೂರು ದೇಶ ಇದುವರೆಗೆ ಸುಮಾರು ಶೇಕಡ 8ರಷ್ಟು ಮಾತ್ರ ನೀರಿನ ಪ್ರಯೋಜನ ಹೊಂದಿದ ಪ್ರದೇಶ. ನಮ್ಮ ರಾಜ್ಯ 10 ರಷ್ಟಾನ್ನಾದರೂ ಮುಟ್ಟುವುದು ಹೇಗೆ ಮತ್ತು ಯಾವಾಗ ? ಈ ನೀರಾವರಿ ಸೌಕರ್ಯವನ್ನು ಒದಗಿಸತಕ್ಕಂಥ ಕಾರ್ಯದಲ್ಲಿ ಸರಕಾರ ವಿಫಲವಾಗಿದೆ. ನಮ್ಮ ಮೈಸೂರು ದೇಶದಲ್ಲಿ ನೀರಾವರಿ ಕೆಲಸ ಹೆಚ್ಚಾಗಿ ಆಗಬೇಕಾಗಿದ್ದರೆ ನಮ್ಮ ದೊಡ್ಡದೊಡ್ಡ ನದಿಗಳ ಪ್ರಯೋಜನವನ್ನು ಹೆಚ್ಚಿನ ರೂಪದಲ್ಲಿ ಪಡೆಯಬೇಕು. ಈ ಸರಕಾರ ಮೈಸೂರು ದೇಶದಲ್ಲಿ ನೀರಾವರಿಯನ್ನು ಹೆಚ್ಚಿಗೆ ಮಾಡುವುದಕ್ಕೆ ಏನು ಪ್ರಯತ್ನ ಮಾಡುತ್ತಿದೆ ? ತಾವು ಕೃಷ್ಣ—ಗೋದಾವರಿ ನೀರಿನ ಹಂಚಿಕೆ ಬಗ್ಗೆ ಎಷ್ಟು ನೀರನ್ನು ಹೊಂದಬೇಕೊ ಅಷ್ಟು ಹೊಂದುವುದಕೆ ಸಾಕಷ್ಟು ಕೆಲಸ ಮಾಡಿಲ್ಲ. ಕೃಷ್ಣ ನದಿಯಿಂದ ಕೇವಲ ಸುಮಾರು 600 ಟಿ. ಎಂ. ಸಿ. ನೀರು ಕೊಟ್ಟಿದ್ದಾರೆ, ಇದು ಮೈಸೂರಿಗೆ ಬರತಕ್ಕಂಥಾ ನೀರಿನಲ್ಲಿ ಅರ್ಧದಷ್ಟಿಲ್ಲ. ನಮಗೆ 1,000 ಟಿ.ಎಂ.ಸಿ. ಬರಬೇಕು ಎಂದು ನಮ್ಮ ವಾದವನ್ನು ಮುಂದಿಟ್ಟರೂ ಕೇಂದ್ರಸರಕಾದವರು ನಮಗೆ 600 ಮಾತ್ರ ಕೊಟ್ಟಿದ್ದಾರೆ ; ಹೀಗೆ ಕಡಿಮೆ ಕೊಟ್ಟು ನಿಮ್ಮ ಬಾಯಿ ಮುಚ್ಚಿಸಿದ್ದಾರೆ. ನಮಗೆ ಹೆಚ್ಚು ನೀರು ಒದಗಿಸತಕ್ಕಂಥ ಹೊಳೆಗಳು ಅಂದರೆ ಕೃಷ್ಣ, ಗೋದವರಿ ಮಾತ್ರ. ಈ ಎರಡು ಹೊಳೆಗಳನ್ನು ಬಿಟ್ಟರೆ ಬೇರೆ ಇರತಕ್ಕಂಥವು ಸಣ್ಣವು. ಸಣ್ಣಸಣ್ಣ ನೀರಾವರಿ ಪ್ರದೇಶಗಳ ಮಾತು ಇರಲಿ. ಈ ಒಂದು ದೊಡ್ಡ ಕೃಷ್ಣ ಗೋದಾವರಿ ಪ್ರಶ್ನೆಯಲ್ಲಿ ಮೈಸೂರು ಸರಕಾರ ಕೇಂದ್ರಸರಕಾರದೊಡನೆ ಎಷ್ಟು ಧೈರ್ಯವಾಗಿ ಹೋರಾಟ ಮಾಡಬೇಕೊ ಅಷ್ಟು ಧೈರ್ಯವಾಗಿ ಮಾಡಲಿಲ್ಲ ಎಂದು ನಾವು ಈ ಶಾಸನಸಭೆಯಲ್ಲಿ ಹೇಳಿದರೆ ನಾವು ಇಂಡಿಯ ಸರಕಾರದವರೊಡನೆ ಸಂಧಾನದ ಮುಖಾಂತರ ಪ್ರಯತ್ನ ಮಾಡಿ ಪರಿಹಾರವನ್ನು ಪಡೆಯುವ ಅಭಿಲಾಷೆಯುಳ್ಳವರಾಗಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈ ಒಂದು ಇರ್ರಿಗೆಷನ್ ಸೆಸ್ ಹಾಕತಕ್ಕಂಥ ಸಂದರ್ಭವಲ್ಲಿ, ಇರ್ರಿಗೇಷನ್ ಫೆಸಿಲಿಟಿ ಜಾಸ್ತಿಮಾಡಿಕೊಡಬೇಕು ಎಂದು ಹೇಳತಕ್ಕಂಥ ಸಮಯದಲ್ಲಿ ಈ ಒಂದು ಇರ್ರಿಗೇಷನ್ ಮಸೂದೆಗೂ, ಕೃಷ್ಣ ಗೋದಾವರಿ ನೀರಿಗೂ ಏನು ಸಂಬಂಧ ಎಂದು ತಾವು ಕೇಳಬಹುದು. ಈ ನೀರಾವರಿ ಮಸೂದೆಯನ್ನು ತಂದಾಗ ಅದರ ಬಗ್ಗೆ ನಿರ್ದಿಷ್ಟ ಅಭಿಪ್ರಾಯ ಹೊಂದಿರಬೇಕು, ಮತ್ತು ಹೆಚ್ಚಾಗಿ ಬೇಕಾಗುವ ನೀರನ್ನು ಒದಗಿಸುವ ಸ್ಥಿತಿಯಲ್ಲಿರಬೇಕು. ಅದಿಲ್ಲದೆ ಇರತಕ್ಕಂಥ ನೀರನ್ನೇ ಒದಗಿಸಿ ಮೇಂಟನೆನ್ಸ್ ಸೆಸ್ ಕೇಳುವುದರಲ್ಲಿ ಅರ್ಥವೇನು ? ಹಿಂದೆ ಪಾಳೆಗಾರರು ಯಾವ ಸೆಸ್ಸುಗಳನ್ನೂ ಹಾಕದೆ ಸಹಸ್ರಾರು ಕೆರೆಗಳನ್ನು ಕಟ್ಟಿದ್ದಾರೆ. ನೀವೂ ಈ ನೀರಾವರಿ ಅನುಕೂಲವನ್ನು ಆ ಒಂದು ದೃಷ್ಟಿಯಿಂದ ಒದಗಿಸಬೇಕು. ಈ ದಿವಸ ದೇಶದಲ್ಲಿ ಅನ್ನ ಜಾಸ್ತಿಯಾಗಬೇಕು, ಆಹಾರ ಹೆಚ್ಚು ಬೆಳೆಯಬೇಕು ಅಂತ ಹೇಳ

ತಕ್ಕ ಕಾಲದಲ್ಲಿ 5 ರೂಪಾಯಿ ಮೇಂಟೆನೆನ್ಸ್ ಸೆಸ್ ಹಾಕಿದರೆ ವ್ಯವಸಾಯಗಾರರ ಮೇಲೆ ಎಂಥ ಪ್ರತಿಕ್ರಿಯೆ ಮಾಡುವುದೆಂಬುದನ್ನು ತಿಳಿದುಕೊಳ್ಳಬೇಕು. ಈ ಮೇಂಟನೆನ್ಸ್ ಸೆಸ್ ಜನಗಳಿಗೆ ಇಲ್ಲದಂತೆ ಮಾಡಿ ಈ ಮಸೂದೆಯನ್ನು ಪಾಸ್ ಮಾಡಬೇಕು. ಈ ಮಸೂದೆಯಲ್ಲಿ ಸುಮಾರು 70 ಕ್ಲಾಜುಗಳಿವೆ. ಇದು ಬಹಳ ಕ್ಲಿಷ್ಟವಾದ ಮಸೂದೆ. ಇದನ್ನು ತಾವು ಆತುರಆತುರವಾಗಿ ಈ ಸಭೆಯಲ್ಲಿಯೇ ಪಾಸಾಗಬೇಕು ಅನ್ನತಕ್ಕಂಥ ಉತ್ಸಾಹ ಇಟ್ಟುಕೊಳ್ಳದೆ, ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಅಲ್ಲಿ ಎಲ್ಲ ಕಲಂಗಳನ್ನೂ ಕೂಲಂಕಷವಾಗಿ ಚರ್ಚೆ ಮಾಡಿ, ಅವುಗಳಲ್ಲಿರುವ ಅನೇಕ ಸಾಧಕಬಾಧಕಗಳನ್ನು ನೋಡಿ, ಸೂಕ್ತವಾಗಿ ತಿದ್ದುಪಡಿಮಾಡಿ ಪುನಃ ಈ ಸಭೆಗೆ ತರಲಿ. ಉದಾಹರಣೆಗೆ ಶಿಕ್ಷೆಮಾಡತಕ್ಕ ಕಲಂಗಳಿಂದ ರೈತನಿಗೆ ಬಹಳ ಕಷ್ಟವಾಗುತ್ತದೆ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಇದು ಪಾಸಾಗುವುದು, ವಿಧಾನವಾದರೂ ಪರವಾಗಿಲ್ಲ, ಇದು ಮುಂದಿನ ಸಭೆಗೆ ಬರಲಿ. ಅದಕ್ಕೆ ಅವಕಾಶ ಮಾಡಿಕೊಡಿ. ಇದರಲ್ಲಿರುವ ಮೇಂಟೆನೆನ್ಸ್ ಸೆಸ್ಸನ್ನು ರದ್ದು ಮಾಡಬೇಕು. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಗುರ್ರೆಡ್ಡಿ (ಮುದ್ದೆಬಿಹಾಳ).—ಸ್ವಾಮಿ, ಈಗ ನಮ್ಮ ಮುಂದಿರತಕ್ಕ ಮೈಸೂರು ಇರ್ರಿಗೇಷನ್ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ. ಇದು ಬಹಳ ಮಹತ್ವವಾದುದು. ಈಗ ನಮ್ಮ ರಾಜ್ಯದಲ್ಲಿ ಆಹಾರದ ಕೊರತೆ ಹೆಚ್ಚಾಗಿರುವುದರಿಂದ, ನಮ್ಮ ರಾಜ್ಯದಲ್ಲಿ ನೀರಾವರಿ ಹೆಚ್ಚಬೇಕಾಗಿದೆ. ಅದಕ್ಕೆ ಸೈಂಟಿಫಿಕ್ ಆಗಿ ರಿಸರ್ಚ್ ಮಾಡಬೇಕಾಗಿದೆ—ಯಾವ ರೀತಿ, ಯಾವ ತರಹ ಇರ್ರಿಗೇಷನ್ ಮಾಡಬೇಕು ಆಹಾರ ಹೆಚ್ಚು ಉತ್ಪತ್ತಿಯಾಗಬೇಕಾದರೆ ಎಂದು. ಈ ಮಸೂದೆಯನ್ನು ತಂದಿರುವುದು ರಾಜ್ಯದಲ್ಲಿ ಆಹಾರದ ಪರಿಸ್ಥಿತಿ ಉತ್ತಮಪಡಿಸುವುದಕ್ಕೆ ಹೊರತು, ರೈತರಿಗೆ ಸೆಸ್ ಲೆವಿ ಮಾಡಿ ಅವರ ಬರ್ಡನ್ ಹೆಚ್ಚಿಸಬೇಕೆಂದಲ್ಲ. ರೈತರಿಗೆ ಯಾವ ಪ್ರಕಾರವೂ ಭಾರವಾಗದ ರೀತಿಯಲ್ಲಿ ಕರ ವಸೂಲು ಮಾಡಬೇಕು.

ಈ ಬಿಲ್ಲಿನಲ್ಲಿ ಮುಖ್ಯವಾಗಿ ಅಳವಡಿಸಿದ್ದನ್ನೂ ತಾವು ನೋಡಬೇಕಾಗಿದೆ. ಈಗ field canals ತೆಗೆದು ಎಷ್ಟೋ ಕಡೆ ನೀರಾವರಿ ಕೆರೆಗಳನ್ನೂ ಕಟ್ಟಿದ್ದಾಗಿದೆ. ಆದರೂ ರೈತರು ತಮ್ಮ ಹೊಲಗಳಿಗೆ ನೀರನ್ನು ಉಪಯೋಗ ಮಾಡುತ್ತಿಲ್ಲ. ಅದನ್ನು ಉಪಯೋಗಮಾಡುವುದಕ್ಕೆ ಶಕ್ತಿ ಇಲ್ಲದ್ದರಿಂದಲೋ ಅಥವಾ ಯಾವುದೋ ಒಂದು ಕಾರಣದಿಂದ ಅವರು ಬಿಟ್ಟಿದ್ದಾರೆ. ಅದಕ್ಕಾಗಿ ನಾವು ಕಡ್ಡಾಯವಾಗಿ field canals ಅವರ ಹೊಲಗಳಿಗೆ ತೆಗೆದುಕೊಂಡು ಹೋಗಿ ಬಿಡುತ್ತೇವೆಂದರೆ ಅದರಿಂದ ಯಾವ ಸಹಾಯವನ್ನು ಮಾಡಿದಂತೆ ನನಗನ್ನಿಸುವುದಿಲ್ಲ.

ಸಂಬಂಧಪಟ್ಟಂಥ ಮಂತ್ರಿಗಳು ಇವತ್ತು ಒಂದು ಎಕರೆಗೆ ಐದು ರೂಪಾಯಿ maintenance charge ಮಾಡುತ್ತೇವೆಂದು ಹೇಳಿದ್ದಾರೆ. ಇದರಿಂದಲೂ ಕೂಡ maintenance ಗಾಗಿ ಖರ್ಚು ಮಾಡುವುದು ಸರಿಹೋಗುತ್ತದೆಯೋ ಇಲ್ಲವೋ? Maintenance ಖರ್ಚು ಕೋಟ್ಯಾನುಕೋಟಿ ರೂಪಾಯಿಗಳಾಗುತ್ತವೆ. ಆದಕಾರಣ ಈಗ maintenance cess ಬೇಡ, ಅಥವಾ betterment levy ಬೇಡ, irrigation cess ಹಾಕುತ್ತಿರುವುದನ್ನು ಬಿಟ್ಟು ಬಿಡಿ ಎಂದರೆ ನಮ್ಮ ರಾಜ್ಯಕ್ಕೆ ನೀರಾವರಿಯೇ ಬೇಡ ಎನ್ನುವ ಪ್ರಶ್ನೆ ಬರುತ್ತದೆ. ನೀರಾವರಿ ಅಚ್ಚುಕಟ್ಟಿಗೆ ಬಂದಂಥ ಜಮೀನಿನಲ್ಲಿ ಮೊದಲು 50-100 ರೂಪಾಯಿ ಉತ್ಪನ್ನ ಬರುತ್ತಿದ್ದುದು. ಇವತ್ತು ಆದರಿಂದ ಸಾವಿರ ರೂಪಾಯಿ ಉತ್ಪನ್ನ ತೆಗೆದುಕೊಳ್ಳಲಿಕ್ಕೆ ಹತ್ತಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಎಲ್ಲ ಈ ರೀತಿ ತೆಗೆದುಕೊಳ್ಳುತ್ತಿದ್ದಾರೆ. ಒಂದು ಎಕರೆಗೆ ಎಷ್ಟು yield ಬರುತ್ತದೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಎಂ. ಗುರ್ರೆಡ್ಡಿ.—ಅದನ್ನೇ ನಾನು ಹೇಳುತ್ತಿದ್ದೇನೆ. ಈಗ wet land ನಲ್ಲಿ ಕಾಲುವೆಗಳಿಂದ ಯಾರು ನೀರನ್ನು ತೆಗೆದು ಕೊಂಡು ಸರಿಯಾಗಿ ದುಡಿಯುತ್ತಾರೆಯೋ ಅಂಥ ಕಡೆ ಉತ್ಪನ್ನ ಜಾಸ್ತಿ ಯಾಗಿದೆ. ತುಂಗಭದ್ರ ಅಣೇ ಕಟ್ಟೆಯಲ್ಲಿ, ಹೊಸ ಪೇಟೆಯಲ್ಲಿ ದುಡಿಯುವ ಸಲುವಾಗಿ ಹೋಗುತ್ತಿದ್ದವರು. ಇವತ್ತು ಒಂದು ಸಣ್ಣ ಹಳ್ಳಿಯವರ ಪರಿಸ್ಥಿತಿಯೂ ಕೂಡ ಸುಧಾರಿಸಿದೆ. ಅಂಥ ಕಡೆ ಹೀಗೆ ಬಹಳ ಹೆಚ್ಚಿನ ಪ್ರಮಾಣದಲ್ಲಿ ಉತ್ಪನ್ನ ಜಾಸ್ತಿಯಾಗಿದೆ. ಒಟ್ಟು ರಾಜ್ಯವನ್ನು ತೆಗೆದುಕೊಂಡರೆ ಶೇಕಡಾವಾದ ಪ್ರಮಾಣ ಕಡಮೆ ಬರಬಹುದು. ಎಲ್ಲಿ ನೀರಾವರಿ ಮಾಡುತ್ತಾರೆ, ಎಲ್ಲಿ field channels ಒದಗಿಸಿ ಕೊಡುತ್ತಿದ್ದಾರೆ ಅಲ್ಲಿ ರೈತರನ್ನು ಹೀನ ಸ್ಥಿತಿಗೆ ಒಯ್ಯುವಂಥ ಮಾತು ಸತ್ಯಕ್ಕೆ ಬಹಳ ದೂರವಾದುದು. ಕಾರಣ ಎಲ್ಲ ಸದಸ್ಯರೂ ನೀರಾವರಿ ಸಲುವಾಗಿ ಹೆಚ್ಚು ಆಸಕ್ತಿವಹಿಸಿ, ರೈತರಿಗೆ ಹೆಚ್ಚು initiative ತೆಗೆದುಕೊಳ್ಳುವುದಕ್ಕೆ ತಿಳಿಸಬೇಕೆ ಹೊರತು ಸರ್ಕಾರ ಮಾಡುವುದಕ್ಕೆ discourage ಮಾಡುವುದು ಸರಿಯಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಈ ಬಿಲ್ಲಿನಲ್ಲಿ ಕೆಲವೊಂದು ಕ್ಲಾಜುಗಳು ಹೀಗೆ ಇವೆ. power ಹೆಚ್ಚಾಗಿ ನಾವು ಅಧಿಕಾರಿಗಳ ಕೈಯಲ್ಲಿ ಕೊಡಲಿಕ್ಕೆ ಹೊರಟಿದ್ದೇವೆ ಎನ್ನುವಂತೆ ಭಾಸವಾಗುತ್ತದೆ. ಇದನ್ನು ತಡೆಗಟ್ಟಬೇಕು.

(ಶ್ರೀ ಎಸ್. ಎಂ. ಗುರೆಡ್ಡಿ)

ಕೆಲವೊಂದು ಬೆಳೆ ಬೆಳೆಯು ಬೇಕಾದರೆ crop pattern ಕೂಡ ಆ ಅಧಿಕಾರಿ ನಿರ್ಣಯ ಮಾಡಬೇಕೋ ಏನೋ ಎನ್ನುವಂಥ ಕ್ಲಾಜಿದೆ. ಇದು ಎಷ್ಟರ ಮಟ್ಟಿಗೆ ಸರಿಹೊಂದುತ್ತದೆಂದು ನೋಡಬೇಕು. ಒಂದೊಂದು ಕಾಲದಲ್ಲಿ ಒಂದೊಂದು ಬೆಳೆಯನ್ನು ಬೆಳೆಯುತ್ತಾರೆ. ಬೇಸಿಗೆಯಲ್ಲಿ ಬೆಳೆಯುವಂಥ ಬೆಳೆಗೆ ಒಂದು ತಿಂಗಳ ನಂತರ ಮಳೆ ಬಾರದೆ ಇದ್ದರೆ fail ಆಗುವ ಸಂಭವವಿದೆ. ಪ್ರತಿ ತಾಲ್ಲೂಕಿನಲ್ಲಿಯೂ ತಾಲ್ಲೂಕು ಬೋರ್ಡುಗಳಿವೆ. ಸಂಬಂಧ ಪಟ್ಟಂಥ ಅಧಿಕಾರಿಗಳಿಗೆ ಸಲಹೆ ಕೊಡುವಂಥ ಒಂದು ಬೋರ್ಡ್ ಅಥವಾ ಕಮಿಟಿ ಇರಬೇಕು. ಆ ಕಮಿಟಿಯ ಮುಖಾಂತರ ಯಾವ ಬೆಳೆ ಬೆಳೆದರೆ ಒಳ್ಳೆಯದು ಎಂಬುದನ್ನು ನಿರ್ಧರಿಸಲು ಆ ತಾಲ್ಲೂಕಿಗೆ ಸಂಬಂಧ ಪಟ್ಟವರಿಗೆ ಬಿಡಬೇಕು. ಅಧಿಕಾರಿಗಳಿಗೆ ಬಿಡುವುದು ಸರಿಯಲ್ಲವೆಂದು ನನಗನ್ನಿಸುತ್ತದೆ.

ಒಂದು ಕೆರೆ ಕಟ್ಟಿದನಂತರ ಆ ಅಚ್ಚುಕಟ್ಟಿಗೆ ಸೇರಿದ ಪ್ರತಿಯೊಂದು ಪ್ರದೇಶಕ್ಕೂ ಎಕರೆಗೆ ಐದು ರೂಪಾಯಿ ಪ್ರಕಾರ maintenance cess ವಿಧಿಸುವಂಥ ಕ್ಲಾಜಿದೆ. ಅಚ್ಚುಕಟ್ಟಿಗೆ ಬರುವ ಪ್ರದೇಶ ಯಾವುದೇ ಇರಲಿ ಅಲ್ಲಿ 100 ಎಕರೆ, 200 ಎಕರೆ, ಸಾವಿರ ಎಕರೆ ಆಗುತ್ತದೆಂದು ತಿಳಿದುಕೊಂಡರೆ ಅಲ್ಲಿ ಕೆಲವು ಜನ ರೈತರು ನೀರನ್ನು ತಮ್ಮ ಹೊಲಗಳಿಗೆ ಒಯ್ಯುವಂಥ ಪರಿಸ್ಥಿತಿ ಇರುವುದಿಲ್ಲ. ನೀರನ್ನು ಒಯ್ದರೆ ಹೊಲ ಕೆಡುವಂಥ ಪರಿಸ್ಥಿತಿ ಹೆಚ್ಚಾಗಿರುತ್ತದೆ. ಕೆಲವು ಕಡೆ ಭೂಮಿ saltish ಆಗಿ irrigation fail ಆಗುವ ಸಂಭವವಿರುತ್ತದೆ. ಆದ್ದರಿಂದ ನಾವು ಏನು ಮಾಡಬೇಕು ಎಂದರೆ, ಎಲ್ಲರಿಗೂ ತೆರಿಗೆಯನ್ನೂ ವಿಧಿಸುವಂಥ ಒಂದು ಕ್ಲಾಜನ್ನು ಅಳವಡಿಸಿರುವುದರಿಂದ ರೈತರಿಗೆ ಹಾನಿಯಾಗುವ ಸಂದರ್ಭವಿರುವುದರಿಂದ, ಯಾವ ರೈತ ನೀರನ್ನು ತೆಗೆದುಕೊಳ್ಳುವುದಿಲ್ಲವೋ ಅವನನ್ನೂ ಇದರಿಂದ exclude ಮಾಡಬೇಕು ಎಂದು ಹೇಳುತ್ತಿದ್ದೇನೆ.

ಕೆರೆಗಳನ್ನು ಕಟ್ಟುವಾಗ, ಅಥವಾ ಯಾವುದೇ ರೀತಿಯ ನೀರಾವರಿ ಸೌಕರ್ಯಗಳನ್ನೂ ಒದಗಿಸಬೇಕೆಂದು ಹೊರಟಾಗ ಆ ವಿಷಯದಲ್ಲಿ ಕೆಲವು ವಿಚಾರಗಳಿಗೆ ಹೆಚ್ಚು ಗಮನ ಕೊಡಬೇಕು. ಕೆರೆ ಕಟ್ಟಬೇಕು ಎಂದರೆ ಕೆರೆ ಅಚ್ಚುಕಟ್ಟಿಗೆ ಬರುವಂಥ ಜಮೀನಿನ ಶಕ್ತಿ ಏನಿದೆ, ನೀರನ್ನು ಹಿಡಿಯುವುದಕ್ಕೆ ಶಕ್ತಿ ಇದೆಯೇ ಎಂದು ಪರಿಶೀಲಿಸುವುದಕ್ಕೆ ಪ್ರಯತ್ನಿಸಬೇಕು. ಅನೇಕ ವೇಳೆ ಇಂಜಿನಿಯರುಗಳು ಆಯ ಕಟ್ಟಿನ ಸ್ಥಳದಲ್ಲಿ ಅಣೆಯನ್ನು ಕಟ್ಟಿದರೆ ಆಯಿತು ಎನ್ನುವ ದೃಷ್ಟಿಯನ್ನಿಟ್ಟು ಕೊಂಡು ಕೆರೆ ಕಟ್ಟುತ್ತಾರೆ. ಆ ಕೆರೆಯನ್ನು ಕಟ್ಟಿದನಂತರ ಅಚ್ಚು ಕಟ್ಟಿಗೆ ಬರುವ ಪ್ರದೇಶವೇನಿದೆ ಅದು ನೀರಾವರಿಗೆ ಸರಿ ಹೊಂದುತ್ತದೆಯೇ ಇಲ್ಲವೇ ಎನ್ನುವುದನ್ನು ಸರಿಯಾಗಿ ವಿಚಾರ ಮಾಡುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಬಿಜಾಪುರದ ಮಟ್ಟಿಗೆ ಹೇಳಬೇಕಾದರೆ ಕೆಲವೊಂದು ಕೆರೆಗಳಿಂದ ಎಷ್ಟೋ ರೈತರು ನೀರನ್ನೂ ತೆಗೆದುಕೊಳ್ಳುವುದಿಲ್ಲ ಡೆಪ್ಯುಟಿಕಮಿಷನರೂ, ಇಂಜನಿಯರೂ ಹೋಗಿ ಹೇಳಿದ್ದಾರೆ. ಅವರು ತೆಗೆದುಕೊಂಡು ಪರಿಕ್ಷೆ ಮಾಡಿದರೆ ಅದು saltish ಆಗಿ ಭೂಮಿ ಕೂಡ ಕೆಟ್ಟು ಹೋಗಿದೆ. ಇಂಥ ಪರಿಸ್ಥಿತಿ ಈ ಕೆರೆಗಳನ್ನು ಕಟ್ಟುವಾಗ ಆಗುತ್ತದೆ. ಇದನ್ನು ಸರಿಪಡಿಸಿದರೆ ಮತ್ತು ಅಚ್ಚುಕಟ್ಟಿನಲ್ಲಿ ಬರುವ ಜಮೀನಿನವರೆಲ್ಲ ನೀರನ್ನೂ ತೆಗೆದುಕೊಳ್ಳುವಂತೆ ಮಾಡಿದರೆ ಹೆಚ್ಚಿಗೆ tax ಬರುವ ಸಂಭವವಿದೆ.

Canals ಹೋಗುವಾಗ culverts ಆಗಲೀ, brid ges ಆಗಲಿ ನಿರ್ಮಾಣ ಮಾಡುತ್ತಿಲ್ಲ. ಕಾಲುವೆಯನ್ನು ತೆಗೆದುಕೊಂಡು ಹೋದನಂತರ ಅಲ್ಲಿ culverts ಮತ್ತು bridges ಹಾಕುತ್ತಿದ್ದಾರೆ. ಹೀಗಾಗಿ ಎಷ್ಟೋ ಕಡೆ ರೈತರಿಗೆ ನಾಲ್ಕೈದು ಮೈಲಿ ಸುತ್ತು ಹಾಕಿ ಹೊಲಗಳಿಗೆ ಹೋಗುವಂಥ ಸಂಭವವಿದೆ. ಅದನ್ನು ತಪ್ಪಿಸುವ ಸಲುವಾಗಿ ತಾವು ಕಾಲುವೆಯನ್ನು ಒಯ್ಯುವಾಗ ಅದರ ಜೊತೆಯಲ್ಲಿಯೇ causeway ಮತ್ತು bridges ಎಲ್ಲಿ ಅಗತ್ಯವಿದೆಯೋ ಅಲ್ಲಿ ಅದನ್ನು ಹಾಕುವುದಕ್ಕೆ ವ್ಯವಸ್ಥೆ ಮಾಡಬೇಕು.

ಇಷ್ಟು ಹೇಳಿ ಈ ಬಿಲ್ಲನ್ನು ಏನು ತಂದಿದ್ದಾರೆ ಇದು ನಿಜವಾಗಿಯೂ ನಮ್ಮ ರಾಜ್ಯಕ್ಕೆ ಬಹಳ ಉಪಕಾರ ಮಾಡುತ್ತದೆಂದು ತಿಳಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜೆ. ದೇವಯ್ಯ (ಮಂಡ್ಯ).—ಸ್ವಾಮಿ, ನಮ್ಮ ಲೋಕೋಪಯೋಗಿ ಮಂತ್ರಿಗಳು ನೀರಾವರಿ ವಿಚಾರದಲ್ಲಿ ಈ ಮಸೂದೆಯನ್ನೂ ಸಭೆಯ ಮುಂದೆ ಇಟ್ಟಿದ್ದಾರೆ. ನೀರಾವರಿ ವಿಚಾರದಲ್ಲಿ ಸಭೆಯಲ್ಲಿ ಇಡುವುದಕ್ಕೆ ಮೊದಲು ಆಯಾ ಪ್ರಾಂತದ ರೈತರ ಕುಂದುಕೊರತೆಗಳನ್ನೂ, ಅಭಿಪ್ರಾಯಗಳನ್ನೂ ತಿಳಿದುಕೊಂಡು ಅದನ್ನು ಸ್ಪಷ್ಟೀಕರಿಸಿ ಈ ಕಾನೂನನ್ನು ತಂದಿದ್ದರೆ ಬಹಳ ಚೆನ್ನಾಗಿತ್ತು. ಕಷ್ಟವನ್ನು ಅನುಭವಿಸತಕ್ಕವರಿಗೆ ಏನೇನು ತೊಂದರೆಗಳಿವೆ ಎನ್ನುವುದನ್ನು ಇಂಜನಿಯರಿಂಗ್ ಇಲಾಖೆಯವರಿಗೆ ಹೇಳುವುದಕ್ಕೂ ಒಂದು ಅವಕಾಶವಾಗುತ್ತಿತ್ತು ಎಂದು ಈ ಸಮಯದಲ್ಲಿ ಹೇಳುತ್ತೇನೆ, ಸ್ವಾಮಿ.

ಈ ಮಸೂದೆಯಲ್ಲಿ ಮುಕ್ಕಾಲು ಭಾಗ ರೈತರು ಇಂಜನಿಯರಿಂಗ್ ಡಿಪಾರ್ಟಮೆಂಟಿಗೆ ತಲೆ ಬಾಗುವ ಸ್ಥಿತಿ ಬಂದಿದೆ. ಒಂದೆರಡು ವಿಷಯ ಮಾತ್ರ ನನಗೆ ತಿಳಿದಮಟ್ಟಿಗೆ ಅನುಕೂಲತೆಯಾಗಿ ತಂದಿದ್ದೀರಿ ಎಂದು ಹೇಳುತ್ತಾ ಇದ್ದೇನೆ. ಈ ಮಸೂದೆಯನ್ನು ಕನ್ನಡದಲ್ಲಿ ಪ್ರಿಂಟ್ ಮಾಡಿದ್ದರೆ ವಿಷಯ ಸಂಗ್ರಹಣೆ ಮಾಡಿಕೊಂಡು ನಮ್ಮ ಸ್ವಂತ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶ ವಾಗುತ್ತಾ ಇತ್ತು. ಇಂಗ್ಲೀಷ್‌ನಲ್ಲಿ ಪ್ರಿಂಟ್ ಮಾಡಿರುವುದರಿಂದ ಇನ್ನೊಬ್ಬರನ್ನು ಕೇಳಿ ತಿಳಿದು ಕೊಂಡು ಮಾತನಾಡಬೇಕಾದ ಸನ್ನಿವೇಶ ಉಂಟಾಗಿದೆ, ಇದರಿಂದ ಅನೇಕ ತೊಂದರೆಗಳುಂಟಾಗು ತ್ತವೆ ಎಂದು ಈ ಸಮಯದಲ್ಲಿ ಹೇಳುತ್ತೇನೆ. ಇದನ್ನು ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನವರು ಉದ್ದೇಶಪೂರ್ವಕವಾಗಿ ತಂದಿದ್ದಾರೆ ಎಂತಲೂ ಕೂಡ ನಾನು ಹೇಳುವುದಿಲ್ಲ. ದಕ್ಷರಾಗಿರತಕ್ಕ ಇಂಜಿನಿಯರುಗಳು ಇದ್ದಾರೆ ಅಂತಹವರು ಇರುವುದರಿಂದಲೇ ಇಂತಹ ವಿಧಾನ ಸೌಧ ಮುಂತಾದ ಕಟ್ಟಡಗಳನ್ನು ಕಟ್ಟಿದ್ದಾರೆ, ಎಲ್ಲದರಲ್ಲೂ ಅನುಭವ ಇದೆ, ನೀರು ಬಿಡುವುದರಲ್ಲಿ ಅನುಭವ ಇದೆ, ಭೂಗುಣ ಎಂತಹದು ಎಂಬುದರಲ್ಲಿ ಅನುಭವ ಇದೆ, ಅಥವಾ ಅದರಲ್ಲಿ ಏನು ತೊಂದರೆ ಇದೆ ಎನ್ನತಕ್ಕ ವಿಷಯ ದಲ್ಲಿ ಅನುಭವ ಹೊಂದಿದ್ದಾರೆ ಎಂಬುದನ್ನು ನಾವು ಹೇಳುವುದಕ್ಕಾಗುವುದಿಲ್ಲ. ಎಲ್ಲಾ ವಿಷಯದಲ್ಲೂ ಅವರು ದಕ್ಷರಾಗಿದ್ದಾರೆ, ಚೆನ್ನಾಗಿ ಕೆಲಸ ಮಾಡುತ್ತಾರೆ ಎಂದು ನಾವು ಹಳ್ಳಿಯಲ್ಲಿರತಕ್ಕವರಿಗೆ ಸರ್ಟಿಫಿಕೇಟ್ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ 1940 ರಿಂದಲೂ ನೀರಾವರಿಯಲ್ಲಿರತಕ್ಕ ಸ್ಥಳ ವನ್ನು ನೋಡಿ, ಅಲ್ಲೇ ವಾಸವಾಗಿರತಕ್ಕ ವ್ಯವಸಾಯಗಾರ ನಾನು, ಅಲ್ಲಿ ಏನೇನು ತೊಂದರೆಗಳು ಇವೆ ಎಂಬುದನ್ನು ತಿಳಿದುಕೊಂಡಿರತಕ್ಕ ಮನುಷ್ಯ ನಾನು. ನಮ್ಮ ಮೈಸೂರು ದೇಶದಲ್ಲಿ ಕೋಟ್ಯಾನುಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಕೆರೆ ಕಟ್ಟೆಗಳನ್ನು ಕಟ್ಟಿ ನೀರಾವರಿಗೆ ಅವಕಾಶ ವನ್ನು ಮಾಡಿಕೊಡುತ್ತಾ ಇದ್ದಾರೆ. ಹಿಂದೆರೆ ಕೃಷ್ಣರಾಜಸಾಗರ ಕಟ್ಟಿ ವಿಶ್ವೇಶ್ವರಯ್ಯ ನಾಲಾ ತೆಗೆದ ಮೇಲೆ ನೀರಾವರಿಯಿಂದ ಮಲೇರಿಯಾ ಹೆಚ್ಚಿ ಅನೇಕ ಜನಗಳ ಸತ್ತಿರುವುದನ್ನೂ ಕೂಡ ನಾನು ಕಣ್ಣಾರೆ ನೋಡಿದ್ದೇನೆ. ಆಗ ಇಂಜಿನಿಯರುಗಳಿಗೂ ಕೂಡ ಏಕೆ ಆ ರೀತಿ ಸಾಯುತ್ತಾರೆ, ನೀರು ಯಾವ ಪ್ರಕಾರ ಬಿಡಬೇಕು ಎಂಬುದು ತಿಳಿದಿರಲಿಲ್ಲ. ಮೊದಲು ಊರಿನ ಪಕ್ಕದಲ್ಲೇ ನೀರಿನ ಆಶ್ರಯ ಕೊಟ್ಟರು, ಯಾವಾಗ ಮಲೇರಿಯಾದಿಂದ ಜನ ಹೆಚ್ಚಾಗಿ ಸಾಯುತ್ತಾ ಬಂದರೋ ಆಗ ಸರ್ಕಾರ ದವರು ರಿಸರ್ವ್ ಕಳೆದು ಎರಡು ಫರ್ಲಾಂಗ್ ಆಚೆಗೆ ನೀರು ಕೊಡಬೇಕು ಅಲ್ಲಿಂದ ಮುಂದೆ ಕೊಡ ಬಾರದು ಎಂದು ಹೇಳಿ ಆಜ್ಞೆ ಮಾಡಿದರು, ಆಗ ಆಯಾಯಾ ಊರಿನ ಜನ ಉಳಿದುಕೊಳ್ಳುವ ಸ್ಥಿತಿ ಬಂತು. ಹಾಗೆ ಅನುಭವದ ಮೇಲೂ ಕೂಡ ಅನೇಕ ವಿಷಯಗಳನ್ನು ಮಾಡಬೇಕಾಗಿ ಬರುತ್ತದೆ. ಈಗ ಅನೇಕ ಕಡೆ ಕೋಟ್ಯಾನುಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನೀರಾವರಿ ಮಾಡುವುದರಿಂದ ಇದರಲ್ಲಿ ಕಾಲುವೆ ವಿಷಯ ಬಂದಿದೆ. ಹೊಸದಾಗಿ ಕೆರೆ ಆಗಲಿ ದೊಡ್ಡ ಕಟ್ಟೆ ಆಗಲಿ ಕಟ್ಟುವಾಗ ಲಕ್ಷಾನುಗಟ್ಟಲೆ ಎಕರೆಗೆ ನೀರಾವರಿಯಾಗುವಾಗ ಯಾವ ರೀತಿಯಲ್ಲಿ ನೀರು ಕೊಡಬಹುದು, ಯಾವ ಭಾಗದಲ್ಲಿ ಕಾಲುವೆ ಕೊಡಬಾರದು ಎಂಬುದನ್ನೆಲ್ಲಾ ಈಗಲೇ ನಮೂದು ಮಾಡಲಾಗುತ್ತದೆ. ವಿಶ್ವೇಶ್ವರಯ್ಯ ನಾಲಾ ಬಂದಾಗ ಮೊದಲು ಅದನ್ನು ನಮೂದಿಸಲಿಲ್ಲ ಒಬ್ಬರ ಜಮೀನಿನ ಮೇಲೆ ಒಬ್ಬರು ನೀರು ತೆಗೆದುಕೊಳ್ಳಬೇಕಾಗಿತ್ತು. ಮಧ್ಯದಲ್ಲಿ ಮನಸ್ತಾಪ ಬಂದರೆ ಮೇಲಿನವರು ನೀರು ಬಿಡುವುದಿಲ್ಲ ಎಂದು ಹೇಳುತ್ತಾ ಇದ್ದರು. ಆಗ ಅಕ್ವೈರ್ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ಅಸಿಸ್ಟೆಂಟ್ ಇಂಜನಿಯರು ನಮಗೆ ಅಧಿಕಾರವಿಲ್ಲ ಡೆಪ್ಯೂಟಿ ಕಮೀಷನರನ್ನು ಕೇಳಬೇಕು ಎಂದು ಹೇಳುತ್ತಾ ಇದ್ದರು. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಲೋಕೋಪಯೋಗಿ ಖಾತೆಯ ಮಂತ್ರಿಗಳು ಇದನ್ನು ಕೇಳಬೇಕು. ಯಾವುದೇ ಹೇಳಿದರೂ ಈ ಸಭೆಯಲ್ಲಿ ಸತ್ಯಾಂಶ ನುಡಿಯ ಬೇಕಾದ್ದು ನಮ್ಮ ಕರ್ತವ್ಯ. ಒಂದು ಖಾಯಂ ಆದ ಕಾಲುವೆ ಆದಮೇಲೂ ಹಿಂದು ವರ್ಷದಿಂದ ಅದಕ್ಕೆ ನೀರಿನ ಅಡಚಣೆ ಮಾಡುತ್ತಾ ಇದ್ದಾರೆ. ಒಬ್ಬ ಅಸಿಸ್ಟೆಂಟ್ ಇಂಜನಿಯರು ಆ ಕಾಲುವೆಯನ್ನು ತೆಗೆದು ಹಾಕಿದರು, ಆ ರೀತಿ ತೆಗೆದು ಹಾಕುವುದಕ್ಕೆ ನಿಮಗೆ ಅಧಿಕಾರ ಇಲ್ಲ. ಪಾರ್ಟಿ ಹೆಚ್ಚಾಗುತ್ತದೆ, ಹೊಡೆದಾಟವಾಗುತ್ತದೆ ಎಂದು ನಾನು ಸಹ ಹೋಗಿ ಒಂದೆರಡು ಸಾರಿ ಹೇಳಿದೆ. ನೂರಾರು ವರ್ಷ ಗಳಿಂದ ನೀರು ತೆಗೆದುಕೊಳ್ಳುತ್ತಾ ಇದ್ದಾರೆ, ಲೆಕ್ಕ ನೋಡಿದರೆ ಖರಾಬು 6 ಗುಂಟೆ ಜಮೀನು ಇದೆ ಅದರಲ್ಲಿ ಬತ್ತ ಬೆಳೆಯುತ್ತಾ ಇದ್ದಾರೆ ರಾಗಿ ಬೆಳೆಯುತ್ತಿದ್ದಾರೆ. ಅಂತಹದಕ್ಕೆ ಈಗ ತೊಂದರೆ ಯಾಗಿದೆ. ಆದ್ದರಿಂದ ಕಾಲುವೆ ವಿಚಾರದಲ್ಲಿ ಎಲ್ಲಿ ನಾಲೆ ಮಾಡುತ್ತಾರೆ ಎಂಬುದನ್ನು ಮೊದಲೇ ಪ್ಲಾನ್‌ನಲ್ಲಿ ನಮೂದು ಮಾಡಿ ನೀರು ಕೊಡುವ ಹಾಗೆ ಮಾಡಬೇಕೇ ಹೊರತು ಕೊಟ್ಟ 5-10 ವರ್ಷದ ಮೇಲೆ ನೀರಿಲ್ಲ ಎಂದು ಹೇಳುವುದು, ನಾಲೆ ಇಲ್ಲ ಎಂದು ಹೇಳುವುದು ಸರಿಯಲ್ಲ ಎಂದು ಈ ಸಮಯದಲ್ಲಿ ನಾನು ಹೇಳುತ್ತೇನೆ. ಮಂಡ್ಯ ತಾಲ್ಲೂಕಿನ ಇನ್ನೊಂದು ಉದಾಹರಣೆ ಕೊಡುತ್ತೇನೆ ಒಬ್ಬ ಮನುಷ್ಯ 3 ಎಕರೆ ಜಮೀನು ಇಟ್ಟುಕೊಂಡಿದ್ದಾನೆ ಅದಕ್ಕೆ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿ ನವರಿಂದ ನೀರನ್ನು ಕೊಡಿಸಲಿಕ್ಕೆ ಆಗಲಿಲ್ಲ. ಒಬ್ಬ ಆಫೀಸರು ಎಲ್ಲ ಹೇಳುತ್ತಾನೆ ಅಲ್ಲೇ ವ್ಯವಸಾಯ ಮಾಡಬೇಕು, ಯಾವ ಸಮಯದಲ್ಲಿ ನೀರು ತೆಗೆದುಕೋ ಎಂದು ಹೇಳುತ್ತಾನೆ ಆ ಸಮಯದಲ್ಲೇ

(ಶ್ರೀ ಜೆ. ದೇವಯ್ಯ.

ನೀರು ತೆಗೆದುಕೊಳ್ಳಬೇಕು, ಯಾವ ಬೆಳೆ ಇಡು ಎಂದು ಹೇಳುತ್ತಾನೆ ಆ ಬೆಳೆಯನ್ನೇ ಇಡಬೇಕು, ಬೆಳೆ ಬೆಳೆಯುವಾಗ ಅಲ್ಲಿರತಕ್ಕ ಅಧಿಕಾರಿಯ ಅಪ್ಪಣೆ ಪಡೆದು ಬೆಳೆಯಬೇಕು. ಈ ತರಹ ಈ ಮಸೂದೆ ಯಲ್ಲಿದೆ ಎಂದು ಕೇಳುತ್ತೇನೆ. ಸರ್ಕಾರಿ ನೌಕರರು ಹೆಚ್ಚು ಸಂಬಳ ಕೇಳುತ್ತಾರೆ, ನೂರು ರೂಪಾಯಿ ಗಳನ್ನು ಕೊಡುವ ಕಡೆ ಇನ್ನೂರು ರೂಪಾಯಿಗಳನ್ನು ಕೊಟ್ಟರೂ ಕೂಡ ಅವರ ದಾರಿದ್ರ್ಯ ಹೋಗು ವುದಿಲ್ಲ. ಅದೇ ರೈತ ಬೆಳೆ ಬೆಳೆದರೆ, ಅಕ್ಕಿ ರಾಗಿ ಯಾವಾಗ ಅಗ್ಗವಾಗುತ್ತದೆ ಆ ದಿವಸ ದಾರಿದ್ರ್ಯ ತಪ್ಪುತ್ತದೆಯೇ ಹೊರತು ಎಷ್ಟೇ ಸಂಬಳ ಜಾಸ್ತಿ ಕೊಟ್ಟರೂ ದಾರಿದ್ರ್ಯ ತಪ್ಪುವುದಿಲ್ಲ. ಹಾಗಿರು ವಾಗ ಬತ್ತ ರಾಗಿ ಬೆಳೆ ಬೆಳೆಯತಕ್ಕ ರೈತ ಡಿಪಾರ್ಟ್‌ಮೆಂಟಿನವರಿಂದ ಹೇಳಿಸಿಕೊಂಡು ಅವರಿಂದ ಅಪ್ಪಣೆ ಪಡೆದುಕೊಂಡು ವ್ಯವಸಾಯ ಮಾಡುವುದಕ್ಕೆ ಆದೀತೇ ಎಂಬುದನ್ನು ಸರ್ಕಾರದವರು ಸ್ವಲ್ಪ ಆಲೋಚನೆ ಮಾಡಬೇಕೆಂದು ಈ ಸಮಯದಲ್ಲ ಹೇಳುತ್ತೇನೆ. ಇದನ್ನು ಸೆಲೆಕ್ಟ್ ಕಮಿಟಿಗೆ ಹಾಕ ಬೇಕು, ಆ ರೀತಿ ಹಾಕುವಾಗ ಅನೇಕ ಸಂದರ್ಭಗಳಲ್ಲಿ ನೋಡಿದ್ದೇನೆ ಅನುಭವಸ್ಥರನ್ನು ಹಾಕುವುದು ಕಡಿಮೆಯಾಗಿದೆ ಆದ್ದರಿಂದ ಇದರಲ್ಲಿ ಅನುಭವಸ್ಥರು ಯಾರಿದ್ದಾರೋ ಅವರನ್ನು ಇಟ್ಟುಕೊಂಡು ಇದರಲ್ಲಿರತಕ್ಕ ತೊಂದರೆಗಳನ್ನು ನಿವಾರಣೆ ಮಾಡಬೇಕೆಂದು ಹೇಳುತ್ತೇನೆ. ಈ ಮಸೂದೆಯನ್ನು ಒಪ್ಪುತ್ತೇನೆ, ಒಪ್ಪುವುದಿಲ್ಲ ಎಂದು ಹೇಳುವುದಿಲ್ಲ ಅನೇಕ ಲೋಪದೋಷಗಳು ಇದರಲ್ಲಿ ಇವೆ. ಅವನ್ನು ಸರಿಪಡಿಸುವುದಕ್ಕೆ ಸೆಲೆಕ್ಟ್ ಕಮಿಟಿಗೆ ಹಾಕಬೇಕೆಂದು ಸರ್ಕಾರದವರಿಗೆ ಈ ಸಮಯದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†**Sri M. Y. GHORPADE** (Sandur).—Mr. Speaker Sir, the Hon'ble Leader of the Opposition spoke with considerable emotion and some anger against this Bill. Unfortunately, he did not take the trouble of going into details and offering constructive suggestions on the details contained in the Bill. He seems to have been angered by the fact that there was some increase in taxation. That was sufficient for his speech. I feel Sir, that this is an important Bill and I agree with the Leader of the Opposition to the extent he says that whatever we might do in such matters must be on very scientific basis and after careful consideration. I naturally support his suggestion that it should be referred to a Joint Select Committee and I go a step further and say that the State Government should appoint a high powered Irrigation Commission to go into all aspects of this problem of Irrigation and taxation of irrigated lands in Mysore State. I think that such a step is long overdue. It has been done in the neighbouring State. For instance, Maharashtra has appointed a very high powered body of Irrigation Commission which gave a report of considerable merit which would help the Government there in formulating policies on irrigation on a very realistic scientific basis. I think it is high time that we in Mysore also, without wasting any further time, appoint an Irrigation Commission which will go into all aspects on a scientific basis.

The Bill before us refers to construction, maintenance and regulation of irrigation works. It contemplates the taking over of irrigation works for maintenance over a period of years. That is the intention of the Government. The idea is all tanks above 10 acres ayakut is to be taken over by the Government. It is also said in the Bill that there are 23,000 tanks with more than 10 acres atchkat, the total area irrigated being 11 lakhs of acres. Here, I would only like to point out that the Kondajji Basappa Report contemplates that all tanks below 200 or 250 acres of ayacut should be managed and maintained by the local bodies.

3-00 P.M.

I would only suggest to Government to see that anything we do in this Bill does not conflict or go against the trend in the Kondajji Basappa Report.

The next important point in this Bill is for provision of adequate maintenance. It has been stated in the Bill that the maintenance cess will be Rs. 5 per acre. I would only ask certain clarifications from Government. I would be very happy and I am sure the House would be very much interested to know from Government if Rs. 5 per acre along with the water rate that is already being charged, is this sufficient to cover the interest charges and the annual recurring expenditure for the maintenance of these works. We would like to have concrete figures from Government as to what it thinks is required to meet the annual interest charges on the irrigation projects and annual recurring expenditure on maintenance and whether maintenance cess of Rs. 5 per acre in addition to the water rate that is being charged, how it compares with Government's own assessment of the actual requirements, is something which the Honourable Minister should place before this House.

Another point is what according to Government is the maintenance per acre of Ayacut that is required, the average Let them give concrete figure that so much is required per acre of ayacut for adequate maintenance. The word 'adequate' is important. Because it is a well known fact, it is a fact that has been admitted by Government and therefore I have no hesitation in repeating it that more than 50 per cent of the tanks in Mysore State are in disuse. It is also well known that what the Government to-day is spending on the maintenance of these minor irrigation works is far from adequate and it is my feeling, I am almost very clear in my mind about this, that if this state of affairs is allowed to continue for another 5-10 years, not 50 per cent but 90 per cent of the minor irrigation works will be in disuse. Therefore, it is a very serious matter and we would like statistics from Government as to what is the average amount spent by this Government on maintenance of these works for the last five years, how much does it work out per acre of ayacut and how much Government thinks ought to be maintenance expenditure for adequate maintenance.

I have already referred to the Irrigation Commission Report of Maharashtra. I do not go into it in detail; but I would just like to place before this House the conclusion arrived at by the Irrigation Commission recently, that is, in 1962. They have come to the conclusion that Government should make a scientific assessment of what are the charges to be covered from this irrigation taxation. For instance, interest charges should be No. 1. No. 2 is the amount required for maintenance. These two, according to the Report, they feel, should be covered by the consolidated water rate. No water rate separate, then maintenance cess; irrigation cess and so on. All these things should be rationalised and we should levy a consolidated water rate to meet the interest charges and the maintenance expenditure. I am not

(SRI M. Y. GHORPADE)

suggesting that in all cases Government may be able to levy an amount equal to the maintenance expenditure. Government can decide to subsidise to some extent but that too it must be decided on scientific basis, how much we can take from the ryots by way of water rate, how much Government is going to subsidise. Then the question of betterment levy. It is felt that something should be taken to cover the unearned increase in land values, depreciation and to set apart some amount for extension of irrigation facilities to other ryots. According to the approach of the Commission, a certain percentage of the gross income of the ryots should be the limit; these people have said that 5 to 10 per cent of the gross income of the ryots should be taken by way of water rate and betterment levy to cover all these things. Whatever the percentage, the important thing is a scientific assessment. The important thing is to come to a definite conclusion as to what the water rate should be and what are the items of expenditure which are to be covered. Once Government comes to that conclusion that so much should be the water rate, so much is required for maintenance, I think that would be a very major step in putting minor irrigation projects on a sound footing.

Mr. DEPUTY SPEAKER.—Does the Hon'ble Member mean to say that 10 or 8 per cent covers betterment levy also.?

Sri M. Y. GHORPADE.—No. According to the Irrigation Commission, 5 to 10 per cent should be the water rate which covers interest charges, and which covers also recurring annual expenditure and according to them, the betterment levy should not be more than 20 per cent of the water rate; that is the recommendation. So the total will work out to something like 10 per cent of the gross income of the ayacut. Those percentages can vary from State to State. We can decide what percentage ought to be, anywhere between 5 per cent and 10 per cent. Once we have decided that, we would have decided on a scientific form. After all, we are contemplating decentralising powers; we want to give maintenance of tanks to taluk boards. When we do that, the legislation should itself statutorily define what is the amount per ayacut for maintenance that will be automatically transferred to the local body to which this responsibility is transferred. This is very important, because it is no use merely passing a law saying that we will hand over tanks to local bodies without giving them adequate maintenance amount. I am personally very much opposed to this *ad hoc* arrangement, this *ad hoc* approach to administration. Therefore, I plead with every emphasis at my command that the Government will waste no time in setting up an irrigation commission and consider all these points from a very scientific viewpoint. I may also go to the extent of saying that what is happening to-day in our State and in all the other States, is rather unfair. The farmers in non-irrigated area and in the minor irrigation area are made to subsidise to a disproportionate extent for the benefit enjoyed by ryots in the major irrigation projects. Under the major irrigation projects the ryots are paying a very small portion of the cost incurred by Government

on those projects and all that is being subsidised by poor dry cultivators and the result is that the tanks are not kept in proper repair and not sufficient amount is spend for maintenance. Therefore, I am saying that all this should be viewed from a consolidated and scientific view point. No betterment separate, water rate separate, irrigation problem separate. All these should be viewed as a consolidated problem.

Then, Sir, there is this very important question of construction of feeder chanels. I must congratulate the Government for what they have said in this Bill making it an obligatory duty on the part of the beneficiaries and if they do not do so, Government will do so. This is a very important problem because no less a person than Sri V. T. Krishnamachari has said that the Planning Commission expected that during the Second Five Year Plan not less than 12 million acres will be irrigated. But the actual performance was only 6 million acres. He says: "the utilisation of water made available from the projects is very tardy". This is from the book 'Fundamental of Planning in India' by Sri V. T. K. Sir, I wish that the panchayets and taluk boards must also be given statutory powers to execute field channels. It is only if the taluk boards and panchayets fail to do this, within a prescribed period, then the Government should do it.

Then, Sir, the Financial Memorandum in the Bill state that the estimated average annual increase of irrigation in Mysore State is supposed to be about 3 lakhs acres. They have calculated the cost of acquisition of land at three rupees per acre. I would like to know from the Minister as to how it is arrived it. The digging of field channels is estimated to cost seven rupees per acre. I would also request the Minister to tell us how calculations were arrived at.

Then, I come to my most important point, namely, the approach in this Bill regarding regulation of water for irrigation purposes. Sir, I am of the opinion that the Bill gives too much power to what it calles the 'Irrigation Officers'. They have been given enormous powers to regulate this. Every raiyat has to go this officer to get permission before sowing every crop in every season. I think, the powers given to the irrigation officer will result in considerable harassment to the cultivators and it is also against the trend of democratic decentralisation in this country. After all we know the results of concentrating power in the hands of the departments and making the raiyat approach the small officers at that level. The trend is to decentralise power. Therefore, I would request that the responsibility of distributing water should be with the Government up to the point of minor distributory. After that, the responsibility should belong to the beneficiaries themselves. One of the ideas is that the beneficiaries should form a co-operative society for the distribution of water and they must become members of the society and take up the responsibility. For instance, in the Maharashtra Irrigation Commission report, they have said as follows:—

"That the proposal to supply water by measurement cannot be implemented unless the water measure at the distributary

(SRI M. Y. GHORPADE)

head is handed over to the body of irrigators. This body of irrigators should be a co-operative society formed by the beneficiaries themselves. Every irrigator authorised to take water should be a member of the society. It must be obligatory on every irrigator to regulate the supply of water."

Sir, I feel that the correct thing is, supply of water by measurement to the cultivator. He should know how much water he is entitled to ; does not matter if it costs a little. Fix the measuring instruments and supply water and leave the cultivator to choose the rotation of crop. That is what has been done in America and in certain parts of Maharashtra and Punjab. After all, there are arrangements for measured supply of water up to the point of minor distributory. I will point out to you that this measuring system has resulted in 50 per cent saving in the utilisation of water. Sir, since that point is rather important, I may be permitted to read out a few lines from the Report of the Irrigation Commission. They have said :

"The water supply should be measured at least twice a day, jointly by an officer of the Irrigation Department and a representative of the co-operative society. The Chairman of primary co-operative societies should be given the powers of a Canal Inspector under the Irrigation Act and should exercise concurrent powers of inspection, report and making panchanamas for breach of rules.

The co-operative society at the sub-divisional level should be a federal body consisting of all the primary co-operative societies of irrigators with the sub-division. These sub. divisional societies should fix the rotation and quota of water for different distributaries and keep a watch on the working of the primary co-operative societies."

Another quotation is :

"Government my give five per cent, of the irrigation revenue on the water course concerned to the society as grant for the expenses of management of water distribution and for collection of water charges."

Further it says :

"...this would be more than made good for Government in the shape of irrigation revenue from the additional area under irrigation made possible on account of the saving in water due to supply by measurement."

"Thus, the change over from the present departmental management to management by co-operative societies of irrigators would be not uneconomic from the Government's point of view. It will reduce complaints regarding undesirable practices

against the lower staff of the Irrigation Department. More important than this it will lead to decentralisation of power and train irrigators tin co-operative living. The above arrangement for distribution of water can also be introduced on minor irrigation works."

Sir, having said that much, I shall once again reiterate my main conclusion that this sort of thing should not be done in hurry ; it should not be done in a hapazard manner and it should not be done on an *ad hoc* basis. It should be done only after careful consideration by an Irrigation Commission which may be set up by the Government and on the receipt of their report, we can do this to the satisfaction of all concerned. To that extent I agree with some of the views expressed by the opposition, though I am not in sympathy with the excitement shown by them at the very word of increasing taxation.

Sri ANNA RAO GANAMUKHI (Afzalpur).—What is the intention of the Hon'ble Member ? Does he support that the Bill should be sent to a Joint Select Committee as well as that it must be gone through by a high-power commission ?

Sri M. Y. GHORPADE.—I personally feel that it would be better that the matter is studied by an Irrigation Commission. If Government does not accept that suggestion, then at least it should go to the Select Committee.

Sri A. KRISHNA SHETTY.—Does he support or oppose the Bill?

Sri M. Y. GHORPADE.—I do not oppose the Bill. I only made suggestions so that the Bill might be made better and more satisfactory to all concerned.

† ಶ್ರೀ ಎ. ಕೃಷ್ಣ ಶೆಟ್ಟಿ (ಮಂಗಳೂರು II).---ಮಾನ್ಯ ಅಧ್ಯಕ್ಷರೆ, ಈ ಮೈಸೂರು ನೀರಾವರಿ ವಿಧೇಯಕವನ್ನು ಈಗ ಈ ಒಂದು ಅವಸರದಲ್ಲಿ ತಂದ ರೀತಿಯಲ್ಲಿ ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಮಾನ್ಯ ಮಂತ್ರಿಗಳು ನೀರಾವರಿ ಮಂತ್ರಿಗಳು ಹೌದೇ ಅಲ್ಲವೇ ನನಗಂತೂ ಗೊತ್ತಿಲ್ಲ, ಅವರು ಪಿ.ಡಬ್ಲ್ಯು.ಡಿ. ಮಂತ್ರಿಗಳು ಅಂತ ನಮಗೆಲ್ಲರಿಗೂ ಗೊತ್ತು. ಮಾನ್ಯ ಮಂತ್ರಿಗಳು ಈ ಬಿಲ್ಲನ್ನು ಸಭೆಯ ಮುಂದಿಡುತ್ತಾ ಹೇಳಿದರು. ಇದು ಬಹಳ ಮಹತ್ವವಾದ ಬಿಲ್ಲು, ತಾತ್ವಿಕವಾಗಿ ನಾವೆಲ್ಲರೂ ಇದನ್ನು ಒಪ್ಪಬೇಕು ; ಇದರಿಂದ ದೇಶದ ಆಹಾರದ ಉತ್ಪತ್ತಿಗೂ ಬಹಳ ಅನುಕೂಲವಾಗಿ ಬರುವುದು ಅಂತ. ಹೌದು, ಸ್ವಾಮಿ, ಬಹಳ ಒಳ್ಳೆಯದು, ನಿಮ್ಮ ಉದ್ದೇಶವೇನೋ ಒಳ್ಳೆಯದು. ಆದರೆ ನನಗೆ ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ. ಕೆಲವು ಸಲ ನರಕಕ್ಕೆ ಹೋಗುವ ದಾರಿಯೂ ಒಳ್ಳೆಯ ಉದ್ದೇಶದಿಂದ ಸೇರಿರುತ್ತೆ. (The gate to hell is paved with good intentions.) ಇದನ್ನು ಬರೀ ಒಂದು ಆವೇಶದಿಂದ, ಒಂದು ವಿಕಾರತೆಯಿಂದ ಹೇಳುವುದಕ್ಕೆ ಬರುವುದಿಲ್ಲ. ನಾನು ಕೆಲವು ಅಂಕಿ ಅಂಶಗಳನ್ನು ಇಟ್ಟು, ನನ್ನ ಮಾತನ್ನು ಸ್ಪಷ್ಟಪಡಿಸಲಿಕ್ಕೆ ಆದಷ್ಟು ಮಟ್ಟಿಗೆ ಪ್ರಯತ್ನ ಮಾಡುತ್ತೇನೆ.

ನಮ್ಮ ರಾಷ್ಟ್ರೀಯ ಆದಾಯವನ್ನು ಆರ್ಥಿಕತಜ್ಞರು ಎರಡು ಭಾಗವಾಗಿ ವಿಂಗಡಿಸುತ್ತಾರೆ. ಒಂದು, ಆಹಾರ ಭಾಗ, ಅಂದರೆ ದೃಷ್ಟಿ ಭಾಗದಿಂದ ಬರುವ ಆದಾಯ. ಇನ್ನೊಂದು ಕೈಗಾರಿಕೆ ಭಾಗದಿಂದ ಬರುವ ಆದಾಯ. 1951ರಲ್ಲಿ ಕೃಶಿ ಭಾಗದಿಂದ ಬರುವ ದೇಶದ ಆದಾಯ ಶೇಕಡ 56 ಇತ್ತು. ಕೈಗಾರಿಕೆ ಭಾಗದಿಂದ ಬರುವ ಆದಾಯ ಶೇಕಡ 44. ಈ ದಿನ ಕೃಷಿ ಭಾಗದಿಂದ ಬರುವ ಆದಾಯ ಶೇಕಡ 48, ಕೈಗಾರಿಕೆ ಭಾಗದಿಂದ ಬರುವ ಆದಾಯ 52. ಕೃಷಿಯನ್ನು ಎಷ್ಟು ಜನ ಅವಲಂಬಿಸಿದ್ದಾರೆ, ಕೈಗಾರಿಕೆಯಲ್ಲಿ ಎಷ್ಟು ಜನ ತೊಡಗಿದ್ದಾರೆ, ಎನ್ನುವುದನ್ನೂ ನಾವು ನೋಡುವುದು ಕೂಡ ಅಗತ್ಯವಿದೆ. ಕೃಷಿಯಲ್ಲಿ 1951ರಲ್ಲಿ 72 ಜನರು ಇದ್ದರು, ಈಗ ಶೇಕಡ 66 ಜನರು

(ಶ್ರೀ ಎ. ಕೃಷ್ಣ ಶೆಟ್ಟಿ)

ಇದ್ದಾರೆ. ಇದೇ ಹೊತ್ತಿಗೆ ಕೃಷಿಗರ ಮೇಲೆ ಹಳ್ಳಿಯಲ್ಲಿ ಸಾಲ ಎಷ್ಟಿದೆ ಅನ್ನುವುದನ್ನೂ ತಿಳಿಯಬೇಕು. ಸಾಧಾರಣವಾಗಿ ರೈತರ ಮೇಲೆ ಸರಾಸರಿ ಹಳ್ಳಿಯಲ್ಲಿ 204 ರೂಪಾಯಿ ಸಾಲ ಇದ್ದದ್ದು ಈಗ 238ಕ್ಕೆ ಮುಟ್ಟಿದೆ ನಮ್ಮ ಪ್ರಾಂತ್ಯದಲ್ಲಿ. ಈ ರೀತಿಯಾಗಿ ಒಂದು ಪ್ರಶ್ನೆ ಇರುವ ಹೊತ್ತಿಗೇನೇ, ನಮ್ಮ ರಾಜ್ಯದ ಆಹಾರದ ಉತ್ಪಾದನೆಯು ಯಾವ ಒಂದು ಗುರಿಯನ್ನು ಮುಟ್ಟಬೇಕಾಗಿತ್ತೊ, ಆ ಗುರಿಯನ್ನು ಇಂಡಿಯಾದ ಮಟ್ಟದಲ್ಲಿ ಮುಟ್ಟಿದೆಯೇ ? ಮೊನ್ನೆ ಇಲ್ಲಿ ಪ್ರಶ್ನೆಗೆ ಉತ್ತರಿಸಿದ ರೀತಿಯಲ್ಲಿ ನೋಡುವುದಾದರೆ, ನಾವು ನಿಜವಾಗಿ ಗುರಿಯನ್ನು ಮುಟ್ಟಲಿಕ್ಕೆ ಇನ್ನೂ ಸತತವಾದ ಪ್ರಯೋಜನವನ್ನು ಮಾಡಬೇಕಾಗುತ್ತದೆ. 1951 ರಿಂದ ಇಷ್ಟರವರೆಗೂ ಆಧುನಿಕ ವಿಜ್ಞಾನ ಕ್ರಮಗಳನ್ನು ಅನುಸರಿಸಿ ನಾವು ಕೃಷಿಯನ್ನು ವೃದ್ಧಿ ಮಾಡಿಲ್ಲ. ಆಹಾರ ಉತ್ಪಾದನೆ ಮೊದಲಿದ್ದುದಕ್ಕಿಂತ ಈಗ ಎಷ್ಟು ಬೆಳೆದಿದೆ ಎಂದು ನೋಡಿದರೆ, ಈವರೆಗೆ ಅದು 156 ರಿಂದ 200 ಪೌಂಡುವರೆಗೆ ಬಳೆದಿದೆ. ಸಾಗುವಳಿ ಖರ್ಚು ಒಂದು ಎಕರೆಗೆ ಮೊದಲು ಇದ್ದುದಕ್ಕಿಂತ ಮೂರು ಪಾಲು ದೊಡ್ಡದಾಗಿದೆ ಗೊಬ್ಬರದ ಮಟ್ಟಿಗಾಗಲಿ, ಬೀಜದ ಮಟ್ಟಿಗಾಗಲಿ. ಜಾನುವಾರುಗಳ ಮಟ್ಟಿಗಾಗಲಿ, ಸಲಕರಣೆಗಳ ಮಟ್ಟಿಗಾಗಲಿ, ಕೆಲಸಗಾರರಿಗೆ ಸಂಬಳ ಕೊಡುವ ಮಟ್ಟಿಗಾಗಲಿ ಮೂರು ಪಾಲು ಹೆಚ್ಚಾಗಿದೆ. ಉತ್ಪತ್ತಿ 10 ಪರ್ಸೆಂಟ್ ಮಾತ್ರ ಹೆಚ್ಚಾಗಿದೆ. ಜಪಾನಿನಲ್ಲಿ ಯುದ್ಧಾನಂತರ ಅರ್ಧ ಪಾಲು ಹೆಚ್ಚಾಗಿದೆ, ಇಟಲಿಯಲ್ಲಿ ಕೂಡ ಅರ್ಧ್ವೇ ಪಾಲು ಹೆಚ್ಚಾಗಿದೆ, ಬೇರೆ ಕಡೆಯಲ್ಲಿಯೂ ಆ ಪ್ರಕಾರ ವೃದ್ಧಿಯಾಗಿದೆ. ಆದರೆ ನಮ್ಮ ಪ್ರಾಂತ್ಯದಲ್ಲಿ ಶೇಕಡ 10ಕ್ಕಿಂತ ಉತ್ಪತ್ತಿ ಹೆಚ್ಚಾಗಿಲ್ಲ. ಅದು ಮಾತ್ರವಲ್ಲ, ನಮ್ಮ ರಾಜ್ಯ ಆಹಾರದ ಕಡೆಗೆ ಸ್ವಾವಲಂಬಿಯಾಗಿಲ್ಲ. ದೇಶದ ಮತ್ತು ಪ್ರಾಂತ್ಯದ ಸರಕಾರಗಳು ಈಗಲೂ ಹೊರಗಡೆ ದೇಶಗಳಿಗೆ ಅಂಗಲಾಚಿ, ಕೈಚಾಚಿ ಆಹಾರವನ್ನು ತರಿಸಿಕೊಳ್ಳಬೇಕಾದ ಪರಿಸ್ಥಿತಿಯಲ್ಲಿವೆ. 1,600 ಕೋಟಿ ರೂಪಾಯಿಯನ್ನು ದೇಶದಲ್ಲಿ ಆಹಾರ ಅಭಿವೃದ್ಧಿ ಮಾಡಲಿಕ್ಕೆ ಖರ್ಚು ಮಾಡಿದ್ದೇವೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ, 1,600 ಕೋಟಿ ರೂಪಾಯಿಯನ್ನು ಆಹಾರವನ್ನು ಪಡೆದುಕೊಳ್ಳುವುದಕ್ಕೆ ಕೊಟ್ಟಿದ್ದೇವೆ. ಈ ಪರಿಸ್ಥಿತಿಯಲ್ಲಿರುವಾಗ, ರೈತರು ಕಷ್ಟಗಳಲ್ಲಿರುವಾಗ, ಈ ರೀತಿಯ ತೆರಿಗೆಯನ್ನು ಅವರ ಮೇಲೆ ಹಾಕುವುದೆಂದರೆ, ಒಂಟೆಯ ಮೇಲೆ ಹುಲ್ಲು ಕಡ್ಡಿ ಅದರ ಬೆನ್ನನ್ನು ಬಗ್ಗಿಸಿದ ಹಾಗೆ, ರೈತನ ಬೆನ್ನಿನ ಮೇಲೆ ಮತ್ತೊಂದು ಹೊರೆಯನ್ನು ಹಾಕಿ ಅದನ್ನು ಮುರಿಯುವ ಕ್ರಮ ಇದು. ಮೊನ್ನೆ ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಕೌನ್ಸಿಲ್ಲಿನಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಹೇಳಿದರು, ಮೇಜರ್ ನೀರಾವರಿ ಯೋಜನೆಗಳಲ್ಲಿ ನಮ್ಮ ಚಿಂತೆ ಉತ್ಪತ್ತಿ ಕಡೆಗೆ ಇರಬೇಕೇ ವಿನಃ ರಿಟರ್ನ್ಸ್ ಕಡೆಗೆ ಅಲ್ಲ ಎಂದು, ಫೀಲ್ಡ್ ಕೆಲಸ ಮಾಡುವುದೆ ಆಗಲಿ, ಕಾಲುವೆಗಳನ್ನು ಮಾಡುವುದೆ ಆಗಲಿ ಆಹಾರವನ್ನು ಹೆಚ್ಚಿಗೆ ಮಾಡುವ ದೃಷ್ಟಿಯಿಂದ, ದೇಶವನ್ನು ಆಹಾರದಲ್ಲಿ ಸ್ವಾವಲಂಬನ ಮಾಡುವ ದೃಷ್ಟಿಯಿಂದ ಈ ಹಣವನ್ನು ಖರ್ಚು ಮಾಡುವುದು. ಇಂಥ ಸಮಯದಲ್ಲಿ ರೈತನಿಗೆ ಒಂದು ಬೆಟರ್‌ಮೆಂಟ್ ಲೆವಿ ಇರುವ ಹೊತ್ತಿಗೆ, ಅದನ್ನು ಕಾಪಾಡುವುದಕ್ಕೆ ತೆರಿಗೆ ಹಾಕುತ್ತೀರಾ ? ಸರ್‌ಛಾರ್ಜ್ ಹಾಕಿದ್ದೀರ ಬಿಹಾರನಲ್ಲಿ ಸರ್‌ಛಾರ್ಜನ್ನು ತೆಗೆದು ಹಾಕಿದರು ; ಮಧ್ಯಪ್ರದೇಶದಲ್ಲಿಯೂ ತೆಗೆದುಹಾಕಿದೆ. ಈ ಉತ್ತರ ಪ್ರದೇಶದಲ್ಲಿಯೂ ತೆಗೆದು ಹಾಕಿದರು. ಅಂಧ್ರದಲ್ಲಿ ಒಂದು ನಿಶ್ಚಿತವಾದ ಧೋರಣೆ ಇಲ್ಲ. ನಮ್ಮ ಮೂಕ ರೈತನ ಮೇಲೆ ಬಡ ಬೋರೇಗೌಡನ ಬೆನ್ನಿನ ಮೇಲೆ ಈ ತೆರಿಗೆಯನ್ನು ಹೊರಿಸಿ ಅವನ ಕಷ್ಟವನ್ನು ಜಾಸ್ತಿಮಾಡಿ, ದೇಶದ ಪರಿಸ್ಥಿತಿಯನ್ನು ಇನ್ನಷ್ಟು ಹಾಳುಮಾಡುತ್ತೀರೆಂಬ ಒಂದು ಬಲವಾದ ಅಭಿಪ್ರಾಯ ದೇಶದಲ್ಲಿದೆ. ನಮ್ಮ ಊರಿನಲ್ಲಿ ನಾವು ಊಟ ಮಾಡುವಾಗ ಬೆಕ್ಕಿಗೆ ಶಿಕ್ಷೆ ಕೊಡುವ ಹಾಗಿದೆ ಇದು. ನೆಲದ ಮೇಲೆ ಅನ್ನ, ಹಾಲು ಹಾಕುವಾಗ ಒಂದು ಪೆಟ್ಟು ನೋಡಿ ಕೊಡುತ್ತೇವೆ, ಅದನ್ನು ಒಂದು ದಿವಸ ಉಪವಾಸ ಕೆಡುವ ಉದ್ದೇಶದಿಂದ. ಕಡೆಗೆ ಬೆಕ್ಕಿಗೆ ಅನ್ನ ಹಾಕುತ್ತೇನೆ. ಅನ್ನ ತಿನ್ನುವ ಹೊತ್ತಿಗೆ ಒಂದು ಪೆಟ್ಟು ಕೊಡುತ್ತೇವೆ ಒಂದು ಸಲ ನೆಲದಿಂದ, ಇನ್ನೊಂದು ಸಲ ಕೈನಿಂದ, ಹೀಗೆ ಎರಡು ಪೆಟ್ಟು ಕೊಡುತ್ತೇವೆ. ಇದು ಈ ರೀತಿ ಬರುತ್ತದೆ. ನೀವು ಸಹಾಯ ಕೊಡತ್ತೀರ, ರೈತ ಆ ಸಹಾಯ ತೆಗೆದು ಕೊಳ್ಳಲು ಬಂದಾಗ ಅವನ ಸ್ಥಿತಿ ಇನ್ನೂ ಹಾಳಿಗೆ ಬರುತ್ತದೆ. ಇದನ್ನು ಮುಖ್ಯವಾಗಿ ಇಲ್ಲಿ ಕಾಣಬಹುದು. ನಾವು ಒಂದು ಕಡೆಯಲ್ಲಿ ಒಂದು ಪ್ರದೇಶಕ್ಕೆ (ಮೈಸೂರ ಡಿವಿಜನ್ನಿಗೆ) 14 ಲಕ್ಷರೂಪಾಯಿ ಬಾವಿ ತೋಡುವುದಕ್ಕೆ ಕೊಡುತ್ತೇವೆ. ಏಕೆ ಕೊಡುತ್ತೇವೆ, ಬಾವಿ ತೋಡಬೇಕು, ಆಹಾರ ಉತ್ಪತ್ತಿ ಮಾಡಬೇಕು ಎಂದು.

3-30 P.M.

ರೈತನಿಗೆ ಆಧುನಿಕ ಉಪಕರಣಗಳನ್ನು ಉಪಯೋಗಿಸಲಿಕ್ಕೆ ಶಕ್ತಿ ಇಲ್ಲ. ಭೂಸುಧಾರಣಾ ಮಸೂದೆ ಎಲ್ಲದಕ್ಕೂ ಅನುಕೂಲವಾಗಿ, ಎಲ್ಲದಕ್ಕೂ ಮುಂದೆ ಹೋಗುವ ಕಾರ್ಯಕ್ರಮವಾಗಿತ್ತು.

ಇದನ್ನು ಕೇಂದ್ರದ ಮಂತ್ರಿ ಭಗತ್ ಅವರೂ ಒಪ್ಪಿದ್ದರು. ಭೂ ಸುಧಾರಣೆ ಆಗದೆ ಯಾವ ಒಂದು ಸುಧಾರಣೆಯನ್ನೂ, ಯಾವ ಒಂದು ಪ್ರಗತಿಪರ ಕಾರ್ಯಕ್ರಮವನ್ನು ವಹಿಸಿಕೊಂಡರೂ ಪ್ರಯೋಜನವಾಗಲಿಕ್ಕಿಲ್ಲ. ರೈತನಿಗೆ ಇವತ್ತು ಬೇಕಾಗಿರುವುದು ಎಲ್ಲಕ್ಕಿಂತ ಮೊದಲು ಅವನ ಕೆಲಸದ ಅಸ್ತಿಭಾರವಾದ ಭೂಸುಧಾರಣೆ. ಇದನ್ನು ತರುವುದಿಲ್ಲ. ಅದರ ಬದಲು ಈ ಕ್ರಮಗಳನ್ನು ತರಲಿಕ್ಕೆ ಪ್ರಯತ್ನಮಾಡುತ್ತೀರಿ. ಇದರಿಂದ ಆಗುವ ಪ್ರಯೋಜನ ಶ್ರೀಮಂತರಿಗೆ, ಆಗುವ ತೊಂದರೆ ಬಡ ರೈತರಿಗೆ. ಈ ಒಂದು ಪರಿಸ್ಥಿತಿಯನ್ನುಂಟುಮಾಡಿದರೆ ಆಹಾರೋತ್ಪತ್ತಿಗೆ, ದೇಶದ ಆಹಾರವನ್ನು ಹೆಚ್ಚು ಮಾಡುವುದಕ್ಕೆ ಬೇಕಾದ ಪ್ರಚೋದನಾಶಕ್ತಿ ರೈತರಲ್ಲಿ ಬೆಳೆದುಕೊಂಡು ಬರಲಿಕ್ಕೆ ಸಾಧ್ಯವುಂಟೋ ಎನ್ನುವುದನ್ನು ಕೂಡ ನೋಡುವುದು ಅಗತ್ಯವುಂಟು.

ಈ ಮಸೂದೆಯಲ್ಲಿ ತಿಳಿಸಿರುವಂತೆ ಮಾಸಲು ನಿಮ್ಮಲ್ಲಿ ಯಾವುದಾದರೂ ಕಾರ್ಯಕ್ರಮವಿದೆಯೇ, ಆ ಕಾರ್ಯಕ್ರಮಕ್ಕೆ ಸರಿಯಾದ ಯೋಜನೆ ಇದೆಯೇ, ಅದನ್ನೆಲ್ಲ ಅಳವಡಿಸಿ ತರುತ್ತೀರಾ ಎಂದರೆ ಇಲ್ಲ. ಬಹಳಕಾಲದಿಂದಲೂ ನಮ್ಮಲ್ಲಿ ಎಲ್ಲರಿಗಿಂತ ಮೊದಲು ನೀರಾವರಿ ಯೋಜನೆಯನ್ನು ತಂದವರು. ಆದರೆ ಆ ನೀರಾವರಿ ಯೋಜನೆಯನ್ನು ಎಲ್ಲ ಕಡೆಯೂ ತೆಗೆದುಕೊಂಡುಹೋಗಲಿಕ್ಕೆ ಯೋಜನೆಯನ್ನು ತಯಾರು ಮಾಡಿದ್ದೀರಾ? ಅಂಥ ಯೋಜನೆಯನ್ನು ತಯಾರು ಮಾಡಿಲ್ಲ. ಅದನ್ನು ತಯಾರು ಮಾಡಲಿಕ್ಕೆ ಬೇಕಾದ technical skill ಇಲ್ಲ. ಏನೂ ತಯಾರ್ಮಾಡಿಲ್ಲ. ಇದಕ್ಕೆ ಒಂದು ದೃಷ್ಟಾಂತ ಹೇಳುತ್ತೇನೆ. ನಮ್ಮಲ್ಲಿ ವಿಶೇಷ ನೀರು ಹರಿಯುತ್ತದೆ. ಆ ನೀರನ್ನು ಸರಿಯಾಗಿ ಉಪಯೋಗಮಾಡುವ ರೀತಿಯಲ್ಲಿ ಕೆಲಸ ಮಾಡಿಲ್ಲ. ಆ ಕೆಲಸ ಮಾಡದೆ ಈ ರೀತಿಯ ಒಂದು ಹೊಸ ಯೋಜನೆಯನ್ನು ನೀವು ತರುವುದಿದ್ದರೆ, ಅದರಿಂದ ಜನತೆಗೆ ಉಪಯೋಗವಾಗುವುದಿದ್ದರೆ ಸರಿಯಾದ ರೀತಿಯಲ್ಲಿ ಹೋಗುತ್ತೀರೋ ಇಲ್ಲವೋ ಎನ್ನುವುದನ್ನು ತಿಳಿದುಕೊಳ್ಳಬೇಕು. ಈ ಸಂದರ್ಭದಲ್ಲಿ ಈತರಹ ಬಿಲ್ಲನ್ನು ತರುವಂಥ ಅಗತ್ಯವುಂಟೋ?

ಇನ್ನು ಒಂದು ತೆರಿಗೆಯನ್ನು ಹಾಕುತ್ತಿದ್ದೇವೆಂದು ಹೇಳಿದ್ದಾರೆ. ಈ ತೆರಿಗೆಯನ್ನು ಯಾರ ಮೇಲೆ ಹಾಕುವುದು ಎಂದರೆ ಯಾರೂ ಮಾತನಾಡುವುದಿಲ್ಲ, ಯಾರು ಸಾಧುವಾಗಿರುತ್ತಾರೆಯೋ ಅವರಮೇಲೆ. ವರ್ತಕರು ಮತ್ತು ಇತರರ ಮೇಲೆ ತೆರಿಗೆ ಹಾಕುವುದಕ್ಕೆ ನಿಮ್ಮಿಂದ ಆಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳ ಮಟ್ಟಿಗೆ ಎಷ್ಟೋ ಯೋಜನೆಗಳನ್ನು ತಯಾರ್ಮಾಡಬೇಕೆಂದು ಹೇಳಿದ್ದೇವೆ. ಯಾವುದನ್ನೂ ತಯಾರ್ಮಾಡಿಲ್ಲ. ನೇತ್ರಾವತಿ, ಕುಮಾರಧಾರೆ, ಮೊದಲಾದ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿದ್ದೇವೆ. ನೀವು ಹೇಳುವಂತೆ ನಮ್ಮಲ್ಲಿ 240 ಇಂಚು ಮಳೆ ಬರುತ್ತದೆ. ಅದಕ್ಕೂ ಮೇಲೆ ಸಹ ಬರುತ್ತದೆ. ಆದರೆ ಎಷ್ಟೋ ನೀರು ಸಮುದ್ರದ ಪಾಲಾಗುತ್ತಿದೆ. ಈ ನೀರನ್ನು ಉಪಯೋಗಿಸಲು ಸಾಧ್ಯವುಂಟು. ಇದಕ್ಕೆ ಬೇಕಾದ ಯೋಜನೆಯನ್ನು ತಯಾರು ಮಾಡಿದ್ದೀರಾ? ಇದೇರೀತಿ ಎಷ್ಟೋ ಯೋಜನೆಗಳನ್ನು ತೆಗೆದುಕೊಳ್ಳಬಹುದಾಗಿದೆ. ಅವನ್ನಾದರೂ ಮಾಡಿದ್ದೀರಾ? ಕಾವೇರಿ ನದಿ ನೀರನ್ನು 1974ರೊಳಗೆ ಉಪಯೋಗಿಸದೆ ಇದ್ದರೆ ಆ ನೀರೆಲ್ಲ ನಮಗೆ ತಪ್ಪಿಹೋಗುತ್ತದೆ. ಅಡನ್ನು ಉಪಯೋಗಿಸುವುದಕ್ಕೆ ಯಾವ ಯೋಜನೆಯೂ ಕೂಡ ತಯಾರಾಗಿಲ್ಲ. ಹೀಗಿರುವ ಹೊತ್ತಿನಲ್ಲಿ ತೆರಿಗೆಯ ಮೇಲೆ ತೆರಿಗೆಯನ್ನು ಹಾಕುವ ರೀತಿಯಲ್ಲಿದ್ದೀರಿ. ಈಗ ಇದ್ದಂಥ ತೆರಿಗೆಗಳನ್ನೇ ಸರಿಪಡಿಸಿಕೊಂಡರೆ ಸರ್ಕಾರಕ್ಕೆ ಹಣ ಬರುತ್ತದೆ. ರೈತನಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಅವನು ಆಹಾರೋತ್ಪಾದನೆ ಹೆಚ್ಚು ಮಾಡುವ ಹಾಗೆ, ಅವನಿಗೆ ಶಕ್ತಿ ಕೊಡುವ ರೀತಿಯಲ್ಲಿ ಯಾವ ಕೆಲಸವನ್ನೂ ನೀವು ಯೋಚಿಸುವುದಿಲ್ಲ. ಈ ಬಿಲ್ಲನ್ನೂ ತರದೆ ಇದ್ದರೆ ಒಳ್ಳೆಯದು. ಆದರೆ ಇದನ್ನು ಈಗಾಗಲೇ ತರಲಿಕ್ಕೆ ಪ್ರಯತ್ನ ಮಾಡಿದ್ದೀರಿ ಇದನ್ನು ಒಂದು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕು. ಆ ಕಮಿಟಿಯಲ್ಲಿ ತಜ್ಞರು ಕೂಡ ಇರಲಿ. ಅವರು ಉಪದೇಶಕರಾಗಿ ಮಾರ್ಗದರ್ಶಕರಾಗಿರಲಿ. ದೇಶದಾದ್ಯಂತ ಇಂಥ ನೀರಾವರಿ ಯೋಜನೆಗಳನ್ನು ತಯಾರಿಸಿ, ಆಹಾರೋತ್ಪಾದನೆ ಎಷ್ಟರಮಟ್ಟಿಗೆ ಅಭಿವೃದ್ಧಿಯಾಗುತ್ತದೆಂದು ನೋಡಿ. ಭೂಸುಧಾರಣಾ ಮಸೂದೆಯನ್ನು ಇದೇ ಹೊತ್ತಿನೊಳಗೆ ಜಾರಿಮಾಡಿ. ಇದನ್ನು ಮೊದಲು ಮಾಡಲಿಕ್ಕೆ ಪ್ರಯತ್ನ ಮಾಡಿ. ನಮಗೆ ಈಗ ಬೇಕಾದ್ದು ನಮ್ಮ ರಾಜ್ಯದ ಮಟ್ಟಿಗೆ ಆಹಾರದ ವಿಷಯದಲ್ಲಿ ಸ್ವಾವಲಂಬತನ, ರೈತನ ಆರ್ಥಿಕ ಸುಧಾರಣೆ, ರೈತನ ಕನಿಷ್ಠ ಜೀವನೋತ್ಪತ್ತಿ ಮಾಡುವುದಕ್ಕೆ ಬೇಕಾದ ಪರಿಸ್ಥಿತಿ, ಇದಕ್ಕೆ ಅನುಕೂಲವಾಗುವ ರೀತಿಯಲ್ಲಿ ಈ ಕಾನೂನನ್ನೂ ತರಲಿಕ್ಕೆ ಪ್ರಯತ್ನ ಮಾಡಬೇಕು. ಕಮಿಟಿಯೊಳಗೆ ತಾಂತ್ರಿಕ ಮತ್ತು ತಜ್ಞರನ್ನೂ ಕೂಡ ನೇಮಿಸಿ ಈ ಪ್ರಕಾರ ತರಲಿಕ್ಕೆ ಸಹಾಯ ಮಾಡಬೇಕು. ಇಲ್ಲದಿದ್ದರೆ surcharge ಹಾಕುವುದು, ಬೇರೆ ತೆರಿಗೆಗಳನ್ನು ಹಾಕುವುದು, ಈ ಪ್ರಕಾರ ಹಾಕಿದರೆ, ಈ ಎಲ್ಲ ಕಾನೂನುಗಳನ್ನೂ ನೀವು ತರುವ ಹೊತ್ತಿಗೆ ಗೋವದಲ್ಲಿ ನಡೆದ ದುರ್ಘಟನೆ ಇಲ್ಲಿಯೂ ಕೂಡ ನಡೆಯಲಿಕ್ಕೆ ಸಾಕು. ಈ ಹಲವು ಕಾರಣಗಳಿಂದ ನೀವು ಈ ಬಿಲ್ಲನ್ನು ಸೆಲೆಕ್ಟ್ ಕಮಿಟಿಗೆ ಕಳಿಸಬೇಕೆಂದು ಹೇಳುವ ರೀತಿಯಲ್ಲಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಸರ್ಕಾರದವರು ಮಂಡಿಸಿರತಕ್ಕ ಈ ಮಸೂದೆಯನ್ನು ನಾನು ಸ್ವಾಗತಿಸುತ್ತ ಒಂದೆರಡು ವಿಷಯಗಳನ್ನು ಹೇಳಬೇಕೆಂದು ಅಪೇಕ್ಷೆ ಪಡುತ್ತೇನೆ. ಈಗಾಲೇ ವಿರೋಧ ಪಕ್ಷದ ನಾಯಕರು ಮತ್ತು ಅನೇಕ ಸದಸ್ಯರು ತಮ್ಮ ಅಭಿಪ್ರಾಯಗಳನ್ನೂ ಸಭೆಯ ಮುಂದೆ ಇಟ್ಟಿದ್ದಾರೆ. ವಿರೋಧ ಪಕ್ಷದ ನಾಯಕರು ಮಾತನಾಡುತ್ತ ಈ ಮಸೂದೆಯಲ್ಲಿ ನಮಗೆ ಕಾಣತಕ್ಕ ಅಂಶವೇನೆಂದರೆ ನಾನಾ ರೀತಿಯಲ್ಲಿರತಕ್ಕ ತೆರಿಗೆಯ ಹೊರೆಯನ್ನೂ ಬೇರೆ ಹೆಸರಿನಲ್ಲಿ ಹೆಚ್ಚು ಮಾಡುತ್ತಿದ್ದಾರೆ, ಈ ಕಾನೂನನ್ನೂ ಜಾರಿಗೆ ತರುವುದರಿಂದ ಸ್ವಲ್ಪ ಹೆಚ್ಚು ಕಡಮೆ ಒಂದು ಕೋಟಿ ಹತ್ತು ಲಕ್ಷ ರೂಪಾಯಿ ತೆರಿಗೆ ಹೊರೆಯನ್ನು ರೈತನ ಮೇಲೆ ಜಾಸ್ತಿ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಈಗತಾನೇ ಮಾತನಾಡಿದ ಶ್ರೀ ಕೃಷ್ಣ ಶೆಟ್ಟರು ನಾವು ಕಳೆದ ಸಾಲಿನಲ್ಲಿ ಸರ್‌ಛಾರ್ಜನ್ನು ಒಂದಕ್ಕೆರಡರಷ್ಟು ಮಾಡಿದ್ದೇವೆ, ಅದರ ಜೊತೆಗೆ ಈಗ ಅತ್ಯಲ್ಪಕಾಲದಲ್ಲಿ ಇನ್ನೂ ಒಂದು ರೀತಿಯ ತೆರಿಗೆಯನ್ನು ರೈತನ ಮೇಲೆ ಹಾಕುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆನ್ನುವುದನ್ನು ಹೇಳಿದ್ದಾರೆ. ಬಹುಶಃ ಈ ಕಾನೂನಿನ ಅವಶ್ಯಕತೆ ಏನಿದೆ, ಅದರ ಹಿನ್ನೆಲೆ ಏನು ಎನ್ನುವುದನ್ನು ನಾವು ಸ್ಥೂಲವಾಗಿ ಯೋಚನೆ ಮಾಡಬೇಕಾದ್ದು ಬಹಳ ಅಗತ್ಯವೆಂದು ನಾನು ಅಂದುಕೊಂಡಿದ್ದೇನೆ.

ಈಗಿರತಕ್ಕ ನೀರಾವರಿ ಕಾಮಗಾರಿಗಳನ್ನೂ ನಾವು ತೆಗೆದುಕೊಳ್ಳುವುದಾದರೆ ನಮ್ಮ ಸಂಸ್ಥಾನದ ಮಟ್ಟಿಗೆ ಕೆರೆಗಳ ರಿಪೇರಿ ಮತ್ತು ಸಣ್ಣ ನೀರಾವರಿ ರಿಪೇರಿ ಕಾಮಗಾರಿಗಳು ಯಾವ ರೀತಿ ನಡೆಯುತ್ತಿವೆ ಎಂದು ನಾವು ನೋಡುವುದಾದರೆ ಕೆರೆ ಕಟ್ಟತಕ್ಕ ಜವಾಬ್ದಾರಿಯನ್ನು ಸರ್ಕಾರದವರ ವಹಿಸಿಕೊಂಡಿದ್ದಾರೆ, ನಿಜ. ಆ ಕೆರೆಗಳನ್ನು ಕಟ್ಟಿಯಾದ ಮೇಲೆ ರೆವಿನ್ಯೂ ಇಲಾಖೆ maintain ಮಾಡಿಕೊಂಡು ಹೋಗಬೇಕೆಂಬ ಜವಾಬ್ದಾರಿಯನ್ನು ವಹಿಸಿದ್ದಾರೆ. ಬಹುಶಃ ರೆವಿನ್ಯೂ ಇಲಾಖೆ ಎಷ್ಟರ ಮಟ್ಟಿಗೆ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತದೆಂದು ಹೇಳುವುದಾದರೆ, ಸಣ್ಣ ನೀರಾವರಿ ಯೋಜನೆಗಳ ಕಾಮಗಾರಿಗಳ ಮತ್ತು ಕೆರೆಗಳ ದುರಸ್ತಿಯನ್ನು ನಾವು ನೋಡುವುದಾದರೆ ಸರ್ಕಾರ ಅದಕ್ಕೆ ಹೆಚ್ಚಿಗೆ ಗಮನ ಕೊಡದೆ ನಿರ್ಲಕ್ಷ್ಯಮಾಡಿದ್ದಾರೆ. ಇದರಿಂದ ಎಷ್ಟು ನೀರಾವರಿ ನಮ್ಮ ದೇಶದಲ್ಲಿ ಆಗಬೇಕಾಗಿತ್ತೋ ಅಷ್ಟನ್ನೂ ಮಾಡುವುದಕ್ಕೆ ಆಗಿಲ್ಲ ಎನ್ನುವ ಒಂದು ಆಕ್ಷೇಪಣೆಯನ್ನೂ ಕೂಡ ಕೇಳುತ್ತಿದ್ದೇವೆ. ನನಗೆ ಜ್ಞಾಪಕವಿದ್ದಹಾಗೆ ಸಣ್ಣ ನೀರಾವರಿ ಮಂತ್ರಿಗಳು ಒಂದು ಸಲ ಹೇಳಿದ ಹಾಗೆ ಎಲ್ಲ ಕೆರೆಗಳು ಮತ್ತು ಸಣ್ಣ ನೀರಾವರಿ ಯೋಜನೆಗಳನ್ನೂ ನಾವು ದುರಸ್ತಿ ಮಾಡಿ ಒಳ್ಳೆಯ ಸ್ಥಿತಿಗೆ ತರುವುದಾದರೆ ಸುಮಾರು ಐದು, ಹತ್ತು ಲಕ್ಷ ಎಕರೆ ವರೆಗೆ ಈಗಿರತಕ್ಕ ನೀರಿನಲ್ಲೇ ಜಾಸ್ತಿ ನೀರಾವರಿ ಮಾಡತಕ್ಕ ಅವಕಾಶವಿದೆ. ಆದರೆ ಇವತ್ತಿನ ದಿವಸದ ಸ್ಥಿತಿಯನ್ನು ತೆಗೆದುಕೊಳ್ಳುವುದಾದರೆ ಸಣ್ಣ ನೀರಾವರಿ ಯೋಜನೆಗಳು ಮತ್ತು ಕೆರೆ ಇವುಗಳನ್ನು ಸರಿಯಾದ ರೀತಿಯಲ್ಲಿ ಇಡತಕ್ಕ ಇಲಾಖೆ ಇಲ್ಲ. ಅದಕ್ಕಾಗಿ ಒಂದು ಜವಾಬ್ದಾರಿಯನ್ನು ವಹಿಸಿ ಅವುಗಳನ್ನು ದುರಸ್ತಿ ಮಾಡಿ ಅವುಗಳ ನಿರ್ವಹಣೆಗಾಗಿ ಈ ಒಂದು ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದ್ದಾರೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ.

ಬಹುಶಃ ಇದರಲ್ಲಿ ಒಂದು ವಿಷಯವನ್ನು ಸ್ಥೂಲವಾಗಿ ಯೋಚನೆ ಮಾಡಬೇಕು. ಈಗಾಗಲೇ ನೀರಾವರಿ ಜಮೀನಿನ ಮೇಲೆ ಕಂದಾಯವನ್ನು ಕೊಡುತ್ತಿದ್ದೇವೆ, betterment levy ಕೊಡುತ್ತಿದ್ದೇವೆ, ಸರ್‌ಛಾರ್ಜ್ ಕೊಡುತ್ತಿದ್ದೇವೆ, ಇದರ ಜೊತೆಗೆ maintenance cess ಎಂದು ನಾನಾ ರೂಪವಾಗಿ ನಾಲ್ಕು ರೂಪವಾಗಿ ತೆರಿಗೆಯನ್ನು ಒಂದು ಜಮೀನಿನ ಮೇಲೆ ಸರ್ಕಾರ ಇವತ್ತು ನಿರೀಕ್ಷಣೆ ಮಾಡುತ್ತದೆ. ಬಹುಶಃ ಇದಕ್ಕೆ ಒಂದು ವಾದ ನಾವು ಕೊಡಬಹುದು. ಏನೆಂದರೆ, ನಾನಾ ರೂಪದಲ್ಲಿ ಕರೆಯತಕ್ಕದ್ದು ಸರಿಯಲ್ಲ maintenance charge ಎಂದರೆ, ಒಂದು ಕಾಮಗಾರಿ ಕೆಲಸವನ್ನು ನಾವು ಮಾಡಬೇಕಾದರೆ ಎಷ್ಟೊಂದು ಹಣವನ್ನು ನಾವು invest ಮಾಡಿದ್ದೇವೆ, ಮತ್ತು ಬಡ್ಡಿಯ ರೂಪದಲ್ಲಿ ಎಷ್ಟು ದುಡ್ಡು ಕೊಡಬೇಕು, ಪ್ರತಿವರ್ಷ ಅವುಗಳ ದುರಸ್ತಿಯ ಖರ್ಚಿಗಾಗಿ ಎಷ್ಟು ಹಣ ಬೇಕಾಗುತ್ತದೆ, ಎಷ್ಟು ಸಿಬ್ಬಂದಿ ಬೇಕಾಗುತ್ತದೆ, ಇದಕ್ಕೆ ಎಕರೆಗೆ ಎಷ್ಟು ರೂಪಾಯಿ ಪ್ರಕಾರ ದೊರೆಯಬೇಕಾಗುತ್ತದೆ ಎಂದು ಲೆಕ್ಕಾಚಾರ ಹಾಕಿದರೆ ನಾಲ್ಕು ಹೆಸರಿನಿಂದ ಕರೆಯುವುದನ್ನು ಬಿಟ್ಟು ಒಂದೇ ಹೆಸರಿನಲ್ಲಿ ಕರೆದು ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವುದಕ್ಕೆ ಅವಕಾಶವಿದೆ. ಇದು ಸರಿಯಾಗಿದೆ ಎಂದು ಹೇಳತಕ್ಕ ವಾದವನ್ನು ನಾವು ಒಪ್ಪಬಹುದು ಎಂದು ಕಾಣುತ್ತದೆ.

ಶಾಸ್ತ್ರೀಯವಾದ ಒಂದು ಆಧಾರವನ್ನು ಇಟ್ಟುಕೊಂಡು ಎಲ್ಲವನ್ನೂ ಒಂದೇ ಹೆಸರಿನಲ್ಲಿ ಕರೆಯುವುದು ಒಳ್ಳೆಯದು ಎಂದು ಹೇಳುತ್ತೇನೆ. ಈ ಕಂದಾಯವನ್ನು ತೆಗೆದುಕೊಂಡ ಪಕ್ಷದಲ್ಲಿ ಈ ಕಾಮಗಾರಿಗಳನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ಇಡಬಹುದು ಎಂದು ಹೇಳತಕ್ಕ ವಾದವನ್ನು ಬಹುಶಃ ಎಲ್ಲರೂ ಒಪ್ಪಬಹುದು ಎಂದು ಕಾಣುತ್ತದೆ. ಆ ರೀತಿ ಒಪ್ಪುವುದಾದರೂ ಕೂಡ ಈ ತೆರಿಗೆಯನ್ನು ವಿಧಿಸುವುದು ಬೇಡ ಎಂದು ಹೇಳತಕ್ಕ ವಾದ ನಿಲ್ಲುವುದಿಲ್ಲ. ಕಾರಣವೇನೆಂದರೆ ಈ

ಕಾಮಗಾರಿಯ ಸೂಪರ್‌ವಿಜನ್ ಅಥವಾ ಮೇನ್‌ಟೆನೆನ್ಸ್ ಮಾಡಬೇಕಾದರೆ ಹಣ ಇಲ್ಲದೇ ನಡೆಯ ತಕ್ಕ ಕೆಲಸ ಇದು ನಿಜವಾಗಿಯೂ ಅಲ್ಲ, ಇದಕ್ಕೆ ಇಲಾಖೆ ಬೇಕಾಗುತ್ತದೆ ಶಿಬ್ಬಂದಿ ಬೇಕಾಗುತ್ತದೆ, ಅವರು ಪ್ರತಿ ವರ್ಷವೂ ಅಗತ್ಯವಾಗಿ ಮಾಡಬೇಕಾದಂತಹ ಕೆಲಸಗಳನ್ನು ಮಾಡಬೇಕಾದರೆ ಅದಕ್ಕೆ ಹಣ ಬೇಕಾಗುತ್ತದೆ. ಅದನ್ನು ಈ ಜಮೀನುಗಳಿಂದ ವಸೂಲು ಮಾಡುವುದು ಯೋಗ್ಯವೇ ಹೊರತು ಸಂಸ್ಥಾನದಲ್ಲಿ ಬರತಕ್ಕ ಇತರ ರೆವಿನ್ಯೂಯಿಂದ ಈ ಕಾಮಗಾರಿಗಳ ದುರಸ್ತಿಗೆ ಹಣವನ್ನು ಖರ್ಚು ಮಾಡಿ, ನೀವು ಈಗಾಗಲೇ ತೆರಿಗೆಗಳನ್ನು ಜಾಸ್ತಿಯಾಗಿ ಹಾಕಿದ್ದೀರಿ ಎಂದು ಹೇಳತಕ್ಕ ವಾದ ಸರಿಯಲ್ಲ. ಇದರ ಒಂದು ಫಲವನ್ನು ಜಮೀನುದಾರರು ಹೊಂದುತ್ತಾರೆ ಎಂದಮೇಲೆ ಇಥರ ಜವಾಬ್ದಾರಿಯನ್ನೂ ಕೂಡ ಅವರೇ ಹೊರಬೇಕಾಗುತ್ತದೆ, ನಾನಾ ಹೆಸರುಗಳಿಂದ ಕರೆಯುವುದು ತಪ್ಪು ಎಂದು ಒಪ್ಪಬಹುದೇ ಹೊರತು ಅದಕ್ಕೆ ಬೀಳತಕ್ಕ ಖರ್ಚು ಏನಿದೆ ಅದನ್ನು ಆಯಾಯಾ ಹಿಡುವಳಿ ದಾರರೇ ವಹಿಸಬೇಕು, ಅದನ್ನು ಅವರಿಂದಲೇ ವಸೂಲು ಮಾಡಬೇಕು ಎನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ಸರ್ಕಾರದವರು ಒಂದು ಕಾನೂನನ್ನು ಮಾಡಿ ಅವುಗಳ ದುರಸ್ತು ಮತ್ತು ಕಾಮಗಾರಿಗಳನ್ನು ನೋಡಿಕೊಳ್ಳುವುದಕ್ಕೆ ತಕ್ಕ ಒಂದು ವ್ಯವಸ್ಥೆಯನ್ನು ಮಾಡುವುದಕ್ಕಾಗಿ ಪ್ರಯತ್ನಪಟ್ಟಿರುವುದಕ್ಕಾಗಿ ಈ ಮಸೂದೆಯನ್ನು ಸ್ವಾಗತ ಮಾಡುತ್ತಾ ಇನ್ನು ಒಂದೆರಡು ವಿಚಾರಗಳನ್ನು ಸಭೆಯಗಮನಕ್ಕೆ ತರಬೇಕೆಂದು ಇದ್ದೇನೆ.

ಈಗ ಹಾಲಿ ಇರತಕ್ಕ ಕಾನೂನಿನ ಪ್ರಕಾರ ರಿಪೀಲ್ ಅಂಡ್ ಸೇವಿಂಗ್ಸ್ ಕ್ಲಾಜಿನಲ್ಲಿ ಈ ರೀತಿ ಹೇಳಿದ್ದೀರಿ :

"(2)The Mysore Tank Panchayat Act, 1911 (Mysore Act 1 of 1911) is hereby repealed."

ಅದನ್ನೂ ಕೂಡ ರಿಪೀಲ್ ಮಾಡುತ್ತೇವೆ ಎಂದು ಹೇಳುತ್ತೀರಿ; ಈ ಒಂದು ಅಧಿಕಾರವನ್ನು ಹಾಲಿ ಇರತಕ್ಕ ಪಂಚಾಯ್ತಿಗಳಿಗೆ ಕೊಡುವುದು ಕೂಡ ಇದರಲ್ಲಿ ಸೂಚನೆ ಮಾಡಿದ್ದೀರಿ. ಬಹುಶಃ ಇದನ್ನು ಆಲೋಚನೆ ಮಾಡಬೇಕಾಗುತ್ತದೆ. ಒಂದು ಉದಾಹರಣೆ ತೆಗೆದುಕೊಳ್ಳುವುದಾದರೆ ಇವತ್ತಿನ ದಿವಸ ಪಂಚಾಯ್ತಿಗಳನ್ನು ಮಾಡುವಾಗ 3-4-5 ಗ್ರಾಮಗಳನ್ನು ಸೇರಿಸಿ ಒಂದು ಪಂಚಾಯ್ತಿಯನ್ನು ಮಾಡಿದ್ದೇವೆ, ಅದೇ ರೀತಿ ಒಂದು ಕೆರೆಯನ್ನು ತೆಗೆದುಕೊಳ್ಳುವುದಾದರೆ ಯಾವುದೋ ಒಂದು ಹಳ್ಳಿಗೆ ಸಂಬಂಧಪಟ್ಟ ಜಮೀನಿಗೆ ಮಾತ್ರ ಅದು ನೀರನ್ನು ಒದಗಿಸತಕ್ಕ ವ್ಯವಸ್ಥೆ ಯಾಗಿರುತ್ತದೆ ಅಥವಾ ಅಷ್ಟು ದೊಡ್ಡ ಪ್ರಮಾಣದ ಕೆರೆ ಅದು ಆಗಿರಬಹುದು. ಅಂತಹ ಒಂದು ಸಂದರ್ಭದಲ್ಲಿ ಅದಕ್ಕೆ ಸಂಬಂಧಪಟ್ಟ ಗ್ರಾಮದ ಕೆಳಗೆ ಇರುವ ಅಚ್ಚುಕಟ್ಟುದಾರರ ಒಂದು ಪಂಚಾಯ್ತಿ ಮಾಡಿ ಅದರ ವ್ಯವಸ್ಥೆಯನ್ನು ಅವರಿಗೆ ವಹಿಸಿದ ಪಕ್ಷದಲ್ಲಿ ಅದು ಚೆನ್ನಾಗಿ ನಡೆಯು ತ್ತದೆಯೇ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಐದು ಅಥವಾ ಆರು ಗ್ರಾಮಗಳನ್ನು ಸೇರಿಸಿ ಒಂದು ಆಡಳಿತ ನಡೆಸತಕ್ಕ ಒಂದು ಪಂಚಾಯ್ತಿಗೆ ಇದನ್ನು ವಹಿಸಿದ ಪಕ್ಷದಲ್ಲಿ ಈ ಕಾನೂನಿ ನಲ್ಲಿ ಏನು ಅಪೇಕ್ಷೆ ಪಟ್ಟಿದ್ದೇವೆಯೋ, ದುರಸ್ತು ಮತ್ತು ಇತರ ಕಾರ್ಯಕ್ರಮಗಳು ಯಾವ ರೀತಿ ನಡೆಯಬೇಕೆಂದು ಅಪೇಕ್ಷೆಪಟ್ಟಿದ್ದೇವೆಯೋ ಆ ಉದ್ದೇಶಕ್ಕೆ ಧಕ್ಕೆ ಬರುತ್ತದೆಯೋ ಏನೋ ಎಂದು ಅನುಮಾನವಾಗುತ್ತಾ ಇದೆ. ಈ ಎಲ್ಲಾ ದೃಷ್ಟಿಯಿಂದಲೂ ಕೂಡ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕಾಗಿ ಇದನ್ನು ಒಂದು ಸೆಲೆಕ್ಟ್ ಕಮಿಟಿಗೆ ಅಥವಾ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅಲ್ಲಿ ಯಾವ ಯಾವ ಬದಲಾವಣೆಗಳನ್ನು ಮಾಡಬೇಕೆಂದು ಹೇಳುತ್ತಾರೋ ಅವುಗಳನ್ನು ಇದರಲ್ಲಿ ಅಳವಡಿಸಿ ಈ ಕಾನೂನನ್ನು ಜಾರಿಗೆ ತರುವುದು ಇವತ್ತಿನ ಪರಿಸ್ಥಿತಿಯಲ್ಲಿ ಬಹಳ ಅವಶ್ಯಕ ಎಂದು ಹೇಳುತ್ತೇನೆ. ಈ ದಿನ ಸಣ್ಣ ನೀರಾವರಿ ಕಾಮಗಾರಿಗಳು ಅಥವಾ ದೊಡ್ಡ ನೀರಾವರಿ ಕಾಮಗಾರಿಗಳನ್ನು ಸರಿಯಾದ ದುರಸ್ತಿನಿಂದ ಇಡುವುದು ಬಹಳ ಅವಶ್ಯಕವಾಗಿದೆ. ಈಗ ಇದರ ಅಭಾವವನ್ನು ನೋಡುತ್ತಾ ಇದ್ದೇವೆ, ಇದರಿಂದ ಆಗತಕ್ಕ ಅನೇಕ ತೊಂದರೆಗಳನ್ನು ನೋಡುತ್ತಾ ಇದ್ದೇವೆ, ಕೋಟ್ಯಾಂತರ ರೂಪಾಯಿಗಳ ಖರ್ಚಿನಲ್ಲಿ ಕಟ್ಟಿದಂತಹ ತುಂಗಭದ್ರಾ ಜಲಾಶಯದ ಯೋಜನೆಯನ್ನು ತೆಗೆದುಕೊಂಡ ಪಕ್ಷದಲ್ಲಿ ನೀರು ಇದ್ದರೂ ಸಹ ಅದನ್ನು ಅಚ್ಚುಕಟ್ಟು ದಾರರು ಉಪಯೋಗಿಸಿಕೊಳ್ಳುವುದಕ್ಕೆ ಅದರ ಫಲವನ್ನು ಅನುಭವಿಸುವುದಕ್ಕೆ ಅವಕಾಶವಿಲ್ಲದಂತಹ ಸ್ಥಿತಿಯಲ್ಲಿ ಇದ್ದಾರೆ. ಅದಕ್ಕೆ ಕಾರಣವೇನೆಂದರೆ ಅದಕ್ಕೆ ಅವಶ್ಯಕವಾಗಿ ಬೇಕಾಗಿರತಕ್ಕ ಫೀಲ್ಡ್ ಚಾನಲ್ಸ್ ಮಾಡುವುದಕ್ಕೆ ಅವಕಾಶವಿಲ್ಲ, ಅದಕ್ಕೆ ಲ್ಯಾಂಡ್ ಆಕ್ವಿಸಿಷನ್ ಮತ್ತು ರೈತರ ಸಹಕಾರ ಭಾವನೆ ಇಲ್ಲದೇ ಇರುವುದರಿಂದ ನಾನಾ ರೀತಿಯಲ್ಲಿ ತೊಂದರೆಯಾಗಿದೆ. ಇಂಥಾ ಎಲ್ಲಾ ತೊಂದರೆ ಗಳನ್ನೂ ತೆಗೆದು ಸುಲಲಿತವಾಗಿ ಈ ಒಂದು ಯೋಚನೆ ಕಾರ್ಯಗತವಾಗಬೇಕಾದರೆ ಯಾವ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು; ಯಾವ ರೀತಿ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ

(ಶ್ರೀ ಎಂ. ಸಿ. ಬಸಪ್ಪ)

ಎಂಬುದನ್ನು ಸ್ಥೂಲವಾಗಿ ಈ ಕಾನೂನಿನಲ್ಲಿ ಅಳವಡಿಸಿ ಈ ಸಭೆಯ ಮುಂದೆ ಇಡುವುದಕ್ಕಾಗಿ ಸೆಲೆಕ್ಟ್ ಕಮಿಟಿ ಅಥವಾ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ನಂತರ ಸೂಕ್ತ ತಿದ್ದುಪಡಿಗಳನ್ನು ಮಾಡಿ ಈ ಕಾನೂನನ್ನು ಅಂಗೀಕಾರ ಮಾಡಬೇಕೆಂದು ನನ್ನ ಅಭಿಪ್ರಾಯವನ್ನು ಸೂಚಿಸುತ್ತೇನೆ.

† ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಗುಪ್ಪ).—ಮಾನ್ಯ ಅಧ್ಯಕ್ಷರೇ, ಈ ನೀರಾವರಿ ಮಸೂದೆಯನ್ನು ನಾನು ಸ್ವಾಗತ ಮಾಡುತ್ತಾ ಕೆಲವು ಸೂಚನೆಗಳನ್ನು ಮಾತ್ರ ಮಾಡಬಯಸು ತ್ತೇನೆ. ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಇರುವ ನೀರಾವರಿಯ ಅಭಾವದಿಂದಾಗಿ ನೀರಾವರಿಯ ಅಭಿವೃದ್ಧಿ ಕೆಲಸ ಅಷ್ಟಾಗಿ ಅಗಿಲ್ಲ. ಅದರಿಂದಾದ ತೊಂದರೆಯ ದೆಸೆಯಿಂದ ಇಂತಹ ಒಂದು ಮಸೂದೆ ಆಗಬೇಕೆಂದು ನಾವು ಬಹಳ ದಿವಸದಿಂದ ಒತ್ತಾಯಪಡಿಸುತ್ತಾ ಇದ್ದೆವು ಮತ್ತು ಅನೇಕ ವೇಳೆ ನಮ್ಮ ಭಾಗದಿಂದ ಎಂದರೆ ತುಂಗಭದ್ರಾ ನೀರಾವರಿ ಪ್ರದೇಶದಿಂದ ಬಂದವರು ಇಂಥಾ ಮಸೂದೆ ಯನ್ನು ಜಾರಿಗೆ ತರದ ಹೊರತು ಅಚ್ಚುಕಟ್ಟು ಹೆಚ್ಚಿಗೆ ಆಗಲಿಕ್ಕೆ ಸಾಧ್ಯವೇ ಇಲ್ಲ ಎಂದು ಹೇಳಿದ ಮೇಲೆ ಇದು ಬಂದಿರುವುದು ಬಹಳ ಸಂತೋಷದ ಸಮಾಚಾರ.

[MR. SPEAKER in the Chair]

ಈ ಮಸೂದೆಯ ವಿಚಾರವನ್ನು ಹೇಳುವುದಕ್ಕಿಂತಲೂ ಮೊದಲು ತುಂಗಭದ್ರಾ ನೀರಾವರಿ ಯೋಜನೆಯ ವಿಷಯದಲ್ಲಿ ಒಂದೆರಡು ಮಾತನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಬಹಳ ದೊಡ್ಡ ನೀರಾವರಿ ಯೋಜನೆ ಎಂದರೆ ತುಂಗಭದ್ರಾ ನೀರಾವರಿ ಯೋಜನೆ. ಇದರಲ್ಲಿ ಸುಮಾರು 6 ಲಕ್ಷ ಎಕರೆ ನೀರಾವರಿಯಾಗಬೇಕಾದ್ದು ಇದೆ. ಈ ನೀರಾವರಿ ಯೋಜನೆ ತಯಾರಾಗಿ 15 ವರ್ಷಗಳ ಕಾಲವಾಗಿದ್ದರೂ ಸಹ ಮತ್ತು ಕಾಲುವೆಗಳಲ್ಲಿ ನೀರು ಹರಿಯಲಿಕ್ಕೆ ಪ್ರಾರಂಭವಾಗಿ 10 ವರ್ಷಗಳ ಕಾಲವಾಗಿದ್ದರೂ ಆಗಿರತಕ್ಕ ಅಭಿವೃದ್ಧಿ ಆಗಬೇಕಾದ್ದರಲ್ಲಿ ಅರ್ಧದಷ್ಟೂ ಆಗಿಲ್ಲ ಎಂದು ಹೇಳ ಬೇಕಾದರೆ ಬಹಳ ದುಃಖವಾಗುತ್ತದೆ. ರೈತರು ಬಹಳ ಆಕಾಂಕ್ಷೆಯಿಂದ ಇದ್ದಾರೆ. ಅದರಿಂದ ಬರತಕ್ಕ ನೀರನ್ನು ಉಪಯೋಗಿಸಿ ಹೆಚ್ಚು ಬೆಳೆ ಬೆಳೆದು ತಮ್ಮ ಮತ್ತು ದೇಶದ ಸುಖಸಂಪತ್ತನ್ನು ಹೆಚ್ಚಿಸಬೇಕೆಂದು ಆಶೆ ಅವರಿಗೆ ಇದೆ. ಆದರೆ ಅನೇಕ ತೊಂದರೆಗಳಿಂದಾಗಿ ಆ ಒಂದು ಅಭಿವೃದ್ಧಿಗೆ ತಡೆಯಾಗಿದೆ ಎಂದು ಹೇಳಬೇಕಾಗಿದೆ. ಏಕೆಂದರೆ ಈಗಾಗಲೇ ಶ್ರೀಮಾನ್ ಬಸಪ್ಪನವರು ಹೇಳಿದ ಹಾಗೆ ಅನೇಕ ಕಡೆ ಅಕ್ವಿಸಿಷನ್ ನಡೆದಿಲ್ಲ, ಕಾಲುವೆಗಳು ಆಗಿಲ್ಲ ಮತ್ತು ಕಾಲುವೆ ಆದ ಎಡೆಯಲ್ಲಿ ಕೆಲವು ವೇಳೆ ಒಂದೊಂದು ಸರ್ವೆ ನಂಬರಿಗೆ ಅದರ ಮಧ್ಯದಲ್ಲಿರತಕ್ಕ ಮನುಷ್ಯ ನೀರು ಸಿಕ್ಕದ ಹಾಗೆ ಮಾಡಿರತಕ್ಕ ಅಸಂದರ್ಭಗಳು ಕೆಲವು ಕಡೆ ನಡೆದಿವೆ. ಅನೇಕ ಕಡೆ ಡೆಪ್ಯೂಟಿ ಕಮಿಷನರು ಮತ್ತು ಎಕ್ಸಿಕ್ಯೂಟೀವ್ ಇಂಜನಿಯರೂ ಸಹ ಎಷ್ಟೇ ಪ್ರಯತ್ನ ಮಾಡಿದರೂ ನೀರನ್ನು ಮುಂದಕ್ಕೆ ಸಾಗಿಸಲಿಕ್ಕೆ ಸಾಧ್ಯವಾಗಿಲ್ಲ. ಹೀಗಾಗಿ ನೀರು ಇದ್ದರೂ ಆ ನೀರನ್ನು ಉಪಯೋಗ ಮಾಡಿ ಕೊಳ್ಳಲಿಕ್ಕೆ ಬರದ ಸ್ಥಿತಿಯಲ್ಲಿ ಇದೆ. ಬಳ್ಳಾರಿ ಭಾಗಕ್ಕೆ ಸುಮಾರು 90 ಸಾವಿರ ಎಕರೆ ತುಂಗಭದ್ರಾ ನೀರಾವರಿ ಯೋಜನೆಯಿಂದ ನೀರಾವರಿ ಯಾಗಬೇಕಾಗಿದ್ದರೂ ಕೂಡ ಅದರಲ್ಲಿ 60 ಸಾವಿರ ಎಕರೆ ಡ್ರೈ-ಕಮ್-ವೆಟ್ ಇದೆ, ಅದಕ್ಕೆ ನೀರಿನ ಸರಬರಾಯಿ ಬಹಳ ಕಡಿಮೆಯಾಗಿದೆ. ಏಕೆಂದರೆ ಅನೇಕ ಕಡೆ ಡ್ರೈನೇಜ್ ವರ್ಕ್ ಆಗಿಲ್ಲ. ಅನೇಕ ಕಡೆ ಕಂಟ್ರೋಲ್ ಪಾಯಿಂಟ್ ಆಗಿಲ್ಲ. ಹೀಗಾಗಿ ಹತ್ತು-ಹದಿನೈದು ಮೈಲಿಗಳವರೆಗೂ ಕಾಲುವೆಗಳು ಬರದೇ ನೀರನ್ನು ದುರುಪಯೋಗ ಮಾಡಿ ಅನ್-ಆಥರೈಸ್ಡ್ ಕಲ್ಟಿವೇಷನ್‌ಗೆ ಅವಕಾಶವಾಗಿದೆಯೇ ಹೊರತು ಕ್ರಮಬದ್ಧವಾಗಿ ಅಧಿಕಾರಿ ಗಳ ಕೈ ಕೆಳಗೆ ಇಲ್ಲದೇ ಇರುವುದರಿಂದ ಅವರು ತಮ್ಮ ಅಸಹಾಯಕತೆಯನ್ನು ರೈತರ ಮುಂದೆ ಹೇಳುತ್ತಾ ಇದ್ದಾರೆ.

ಈಗ ಬರುತ್ತಿರುವುದು ಒಂದು ಕ್ರಮವಾಗಿ ನಿಂತು ರೈತರಿಗೆ ಇದರಿಂದಲಾದರೂ ಅನುಕೂಲ ಆದೀತೆಂಬ ಆಸೆ ಆದೆ. ಈಗ ಈ ಮಸೂದೆಯಲ್ಲಿ ನೀರನ್ನು ಭೂಮಿಗೆ ಒಯ್ದ ಮೇಲೆ ಅವರಿಂದ ದುಡ್ಡನ್ನು ವಸೂಲ್ಮಾಡಬೇಕೆಂದು ಹೇಳಿದೆ. ಈ ದಿವಸ ತುಂಗಭದ್ರ ಡ್ಯಾಮಿನ ಕೆಳಗೆ ಎಲ್ಲೋ ಒಂದು ಹತ್ತು ಕ್ಯುಸೆಕ್ಸ್ ನೀರನ್ನು ಬಿಟ್ಟು ಆದರ ಕೆಳಗೆ ಸಾವಿರಾರು ಎಕರೆ ಭತ್ತದ ಸಾಗುವಳಿ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ನಾವು ಇಷ್ಟು ನೀರನ್ನು ಬಿಟ್ಟರೆ ಅಷ್ಟು ಜಮೀನಿನಲ್ಲೂ ಭತ್ತದ ಬೆಳೆಯಾಗಲು ಸಾಧ್ಯವಿದೆಯೇ ಎಂದು ಕೇಳಿದರೆ ಅದಕ್ಕವರು ನಾವು ಬಿಡುವ ನೀರೇ ಇಷ್ಟು. ನಿಮ್ಮ ಜಮೀನಿಗೆ ನೀರು ಮುಟ್ಟಲಿ ಅಥವಾ ಮುಟ್ಟದಿರಲಿ ನೀವು ಮಾತ್ರ ಈ ನೀರಿನ ಬಿರಾಡಾನಾ ಕೊಟ್ಟೇ ತೀರಬೇಕು ಎಂದು ಹೇಳುತ್ತಿದ್ದಾರೆ. ಇದು ಹೇಗಿದೆ ಎಂದರೆ : ನಾವು ಮೈನ್ ಲೈನಿನಲ್ಲಿ

ಕರೆಂಟನ್ನು ಬಿಟ್ಟಿದ್ದೇವೆ, ನಿಮ್ಮ ಮನೆಯಲ್ಲಿ ಬೆಳಕಿರಲಿ, ಇಲ್ಲದಿರಲಿ ನೀವು ಮಾತ್ರ ನಮ್ಮ ಮೈನ್ ಲೈನಿನಲ್ಲಿ ಕರೆಂಟ್ ಹೋಗುತ್ತಿರುವ ಕಾರಣ ಬಿರಾಡ ಕೊಟ್ಟೇ ಕೊಡಬೇಕು ಎಂದು ಹೇಳಿದ ಹಾಗೆ ಆಯಿತು. ಇಲ್ಲಿ ಅನೇಕ ಜನರು ಒಂದು ಹನಿ ನೀರನ್ನೂ ಸಹಾ ಬಳಸಿಲ್ಲ; ಆದರೆ ಅಲ್ಲಿ ನೀರಿರಲಿಲ್ಲ ಎಂದು ನಾನು ಹೇಳುತ್ತಿಲ್ಲ. ನೀರೂ ಇತ್ತು, ಕಾಲುವೆಯಲ್ಲಿ ನೀರ ಹರಿಯುತ್ತಿತ್ತು. ಆದರೆ ಆ ನೀರು ಜಮೀನಿಗೆ ಹತ್ತುತ್ತಿರಲಿಲ್ಲ. ರೈತನಿಗೆ ನೀರು ಎಂದರೆ ಬಂಗಾರ: ನೀರಿದ್ದರೆ ರೈತ ಬೆಳೆ ಬೆಳೆದು ತಾನೂ ಸುಖಪಟ್ಟು ದೇಶಕ್ಕೂ ಧಾನ್ಯವನ್ನು ಒದಗಿಸಿ ಉಪಕಾರ ಮಾಡಬಲ್ಲ. ಆದರೆ ರೈತನಿಗೆ ನೀರೇ ದೊರೆಯದಿರುವಾಗ ನೀನು ಬಿರಾಡ ಕೊಡಬೇಕು ಎಂದರೆ ಇದೆಂಥಾ ಮಾತು? ಈ ವಿಚಾರವಾಗಿ ನಾನು ಮೊನ್ನೆ ತಾನೆ ಆ ತುಂಗಭದ್ರ ಡ್ಯಾಮಿನ ಹತ್ತಿರ ನಡೆದ ಅಗ್ರಿಕಲ್ಚರಲ್ ಮಿನಿಸ್ಟರುಗಳ ಸಬ್ ಕಮಿಟಿಗೆ ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳಿ ಒಂದು ಸಜೆಕ್ಷನ್ನು ಕೊಟ್ಟಿದ್ದರೆ, ಲಕ್ಷಾಂತರ ಜನರಿಗೆ ತಗಲತಕ್ಕ ಈ ವಿಚಾರದಲ್ಲಿ ಅವರು ಅಲಕ್ಷ್ಯಭಾವನೆ ತಾಳಿ ಈ ಬಗ್ಗೆ ಏನಾಗಿದೆ ಎನ್ನತಕ್ಕ ವಿಚಾರದಲ್ಲಿ ಅವರು ಒಂದಕ್ಷರ ಸಹಾ ಇಲ್ಲಿಯತನಕ ನಮಗೆ ಹೇಳಿಲ್ಲ. ಇನ್ನು ಈಗ ತಾನೆ ಮಾತನಾಡಿದ ಮಾನ್ಯ ಸದಸ್ಯರು ರೈತನಮೇಲೆ ಈ 5 ರೂಪಾಯಿಗಳ ಸೆಸನ್ನು ಹಾಕಿದರೂ ಪರವಾ ಇಲ್ಲ ಎಂದು ಹೇಳಿದರು. ನಾನು ಕೇಳುತ್ತೇನೆ ಈ ದಿವಸ ರೈತನ ಮೇಲೆ ಹಾಕದೆ ಇರುವ ತೆರಿಗೆ ಯಾವುದಿದೆ? ಬಸ್‌ಗಳ ಮೂಲಕ ಸರ್ಕಾರಕ್ಕೆ ಬರತಕ್ಕ ಆದಾಯ ಯಾರಿಂದ ಬಂತು? ಅದೂ ರೈತನಿಂದಲೇ. ಇನ್‌ಕಮ್ ಟ್ಯಾಕ್ಸ್ ಬಾಬಿನಿಂದ ಈ ದಿನ ಸರ್ಕಾರಕ್ಕೆ ಬರುತ್ತಿರುವ ವರಮಾನ ಯಾರದು? ಅದೂ ರೈತನಿಂದಲೇ. ಹೀಗೇ ಆ ಸೇಲ್ಸ್ ಟ್ಯಾಕ್ಸ್ ಬಾಬೂ ಸಹಾ. ಹೀಗೆ ರೈತ ಈ ದಿವಸ ದರವೊಂದು ಬಾಬಿನಲ್ಲೂ ತೆರಿಗೆಯನ್ನು ಸರ್ಕಾರಕ್ಕೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ತೆರುತ್ತಲೇ ಇದ್ದಾನೆ. ಹೀಗಿದ್ದಾಗ್ಯೂ ಇನ್ನೂ ಆತನನ್ನು ತರಬೇಕು ಎಂದರೆ ಆತನು ತನ್ನ ಜೀವಾ ತೆಗೆದುಕೊಡಬೇಕೇನು? ಆತನು ತನ್ನ ಜೀವಾ ತೆಗೆದುಕೊಟ್ಟರೆ ಅಲ್ಲಿಗೆ ಸರಿಹೋಗಬಹುದು. ಅಷ್ಟಾದರೂ ಅಲ್ಲಿಗೂ ನಮ್ಮಲ್ಲಿ ಒಂದು ಗಾದೆ ಇದೆ ಕತ್ತೆ ಸತ್ತರೆ ಆಳಗೋಡೆ ಎಂದ ಹಾಗಾಗುತ್ತದೆ. ಈ ದಿವಸ ಒಂದು ಚೀಲ ಸಕ್ಕರೆ ತೆಗೆದುಕೊಳ್ಳಿ. ಅದರಲ್ಲಿ ಸೇಕಡ 75ರಷ್ಟನ್ನು ರೈತ ತೆರಬೇಕು. ರೈತ ಕೊಳ್ಳತಕ್ಕ ಸಾಮಾನುಗಳ ಬೆಲೆ ಬಹಳವಾಗಿದೆ. ಈ ಟ್ಯಾಕ್ಸ್‌ಗಳನ್ನೆಲ್ಲಾ ಕೊಟ್ಟಮೇಲೆ ರೈತನಿಗೇನೂ ಉಳಿಯುವುದಿಲ್ಲ. ಹೀಗಿರುವಾಗ ರೈತನಿಗೆ ದುಡ್ಡು ಎಲ್ಲಿಂದ ಬರುತ್ತದೆ? ಈ ಸರ್‌ಛಾರ್ಜನ್ನು ಆತ ಎಲ್ಲಿಂದ ಕೊಡಬೇಕು? ಈ ದಿವಸ 20 ರೂಪಾಯಿ ಇದೆ ಒಂದು ಚೀಲ ನೆಲ್ಲಿನ ಬೆಲೆ. ಒಂದು ಎಕರೆಗೆ 15 ಚೀಲ ನೆಲ್ಲು ಬರುತ್ತೆ, ಅಲ್ಲಿಗೆ ಒಂದು ಎಕರೆಗೆ 300 ರೂಪಾಯಿ ಉತ್ಪತ್ತಿ ಆದ ಹಾಗಾಯಿತು. ಇಷ್ಟು ನೆಲ್ಲನ್ನು ಬೆಳೆಯಲು ಚೀಲ ಒಂದಕ್ಕೆ 40 ರೂಪಾಯಿನ ಹಾಗೆ ಅಮೋನಿಯ ಕೊಳ್ಳಬೇಕು. ಅದಕ್ಕೆ ಹೀಗೇ ಇನ್ನೂ ಎಷ್ಟೋ ಖರ್ಚುಗಳಿರುತ್ತವೆ. ಕಂದಾಯ, ಈ ಸರ್‌ಛಾರ್ಜ್ ಮತ್ತು ಬಿರಾಡ ಇವೆಲ್ಲವನ್ನೂ ಕೊಟ್ಟನಂತರ ರೈತನಿಗುಳಿಯುವುದೇನು? ಜಮೀನಿಗೆ ನೀರು ಬಿಟ್ಟರೆ ರೈತ ಅದಕ್ಕೆ ಬೇರೆ ದುಡ್ಡು ಕೊಡಬೇಕು. ಆದುದರಿಂದ ಈ ವಿಚಾರಗಳನ್ನೆಲ್ಲಾ ಈ ಮಸೂದೆ ನಾಳೆ ಸೆಲೆಕ್ಟ್ ಸಮಿತಿಯ ಮುಂದೆ ಹೋದಾಗ ಅವರು ಈ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

Mr. SPEAKER.—Is it going to a Select Committee?

Sri VEERENDRA PATIL.—Yes, Sir.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಸ್ವಾಮಿ, ಇನ್ನು ಯಾವ ಭೂಮಿ ನೀರಾವರಿ ಕಾರ್ಯಕ್ರಮಗಳಿಗೆ ಅಗತ್ಯವಾಗಿ ಬೇಕಾಗಿರುವುದೋ ಅಂಥ ಭೂಮಿಯನ್ನು ಇವರು ಅಕ್ವಾಯರ್ ಮಾಡಬೇಕೆಂದು ಇದರಲ್ಲಿ ಹೇಳಿದೆ. ಆ ತುಂಗಭದ್ರ ಪ್ರಾಜೆಕ್ಟಿನ ಹತ್ತಿರ ಸುಮಾರು 21 ಸಾವಿರ ಎಕರೆ ಅಕ್ವಾಯರ್ ಮಾಡಬೇಕಾದ ಜಮೀನಿದೆ. ಆ ಪೈಕಿ ಈಗ ಕೇವಲ 15 ಸಾವಿರ ಎಕರೆಯನ್ನು ಇವರು ಅಕ್ವಾಯರ್ ಮಾಡಿದ್ದಾರೆ. ಇನ್ನೂ 15 ಸಾವಿರ ಎಕರೆ ಅಕ್ವಾಯರ್ ಮಾಡುವುದಿದೆ. ಆದರೆ ಈಗೇನು ಇವರು ಅಕ್ವಾಯರ್ ಮಾಡಿದ್ದಾರೆ ಆ ಜನರಿಗೆ ಬಿರಾಡ ಪರಿಹಾರವನ್ನೂ ಕೊಟ್ಟಿಲ್ಲ, ಆ ಭೂಮಿಗೆ ಪರಿಹಾರದ್ರವ್ಯವನ್ನೂ ಪಾವತಿ ಮಾಡಿಲ್ಲ, ಇದನ್ನು ಕೂಡಲೇ ಸರಿಪಡಿಸಬೇಕೆಂದು ಹೇಳುತ್ತೇನೆ.

[SMT. BASAVARAJESHWARI (CHAIRMAN) in the Chair.]

ಇನ್ನು ಈ 15ನೇ ಕ್ಲಾಜಿನಲ್ಲಿ ಹೀಗೆ ಹೇಳಿದ್ದಾರೆ:

"The Irrigation Officer on being satisfied that the construction of field channels in any area is necessary in public interest

(ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ)

for supply of water from an irrigation work to lands requiring such supply for purposes of cultivation, shall declare by notification that such field-channels may be constructed after a date to be specified in the notification, not being earlier than thirty days from the date of publication thereof."

ಅಂದರೆ ಸರ್ಕಾರದವರು ಕೇವಲ ಒಂದು ಕ್ಯುಸೆಕ್ಸ್ ನೀರಿನವರೆಗೆ ಮಾತ್ರ ಕಾಲುವೆಗಳನ್ನು ತೋಡಿಸುತ್ತಾರಂತೆ; ಮಿಕ್ಕಿದ್ದನ್ನು ರೈತರೇ ಮಾಡಿಕೊಳ್ಳಬೇಕಂತೆ. ಈ ದೊಡ್ಡ ನೀರಾವರಿ ಯೋಜನೆಗಳಲ್ಲಿ ಒಂದು ಕ್ಯುಸೆಕ್ಸ್ ನೀರನ್ನು ಕೇವಲ 10-20 ಎಕರೆಗಳಿಗೆ ನೀರನ್ನು ಆಯಿಸಬಹುದು. ಹತ್ತು ಮಂದಿಯ ಜಮೀನಿಗೆ ನೀರು ಹಾಯಿಸಬಹುದು. ಈ ಹತ್ತು ಜನರ ಪೈಕಿ ಯಾರಾದರೊಬ್ಬ ತಕರಾರು ಹಾಕಿಕೊಂಡು ಕುಳಿತರೆ ಇನ್ನುಳಿದ ಒಂಭತ್ತು ಜನರಿಗೂ ನೀರನ್ನು ಬಳಸಲು ಸಾಧ್ಯವಿರುವುದಿಲ್ಲ. ಅದಕ್ಕಾಗಿ ತಾವು ಅಲ್ಲಿ ಡಿ.ಸಿ. ಮತ್ತು ಎಕ್ಸಿಕ್ಯುಟಿವ್ ಇಂಜಿನಿಯರುಗಳಿಗೆ ಅಕ್ವಿಜಿಷನ್ ಅಧಿಕಾರ ಕೊಡಬೇಕು ಎಂದು ಪ್ರತಿಯೊಂದು ಸಬ್ ಡಿವಿಜನ್ನಿನಲ್ಲೂ ಸರಕಾರವೇ ಅಕ್ವೈರುಮಾಡಲು ಹೋದರೆ ಬಹಳ ತೊಂದರೆಯಾಗುತ್ತದೆ. ಅಲ್ಲದೇ ಎಷ್ಟೋ ಕಡೆಗಳಲ್ಲಿ ಭೂಮಿಯನ್ನು ಅಕ್ವೈರು ಮಾಡಿಕೊಂಡಿರುವ ಕಡೆಗಳಲ್ಲಿ ಹತ್ತು ಪಟ್ಟು ಸಾವಿರ ಪಟ್ಟು ಸಿವಿಲ್ ವ್ಯವಹಾರಗಳಲ್ಲದೇ ಕ್ರಿಮಿನಲ್ ವ್ಯವಹಾರಗಳೂ ಆಗುತ್ತದೆ, ಇದರಿಂದ ರೈತರಿಗೂ ಬಹಳ ತೊಂದರೆಯಾಗುತ್ತದೆ. ಪ್ರತಿಯೊಂದು ಊರಿನಲ್ಲೂ ಅಲ್ಲಿರುವ ಸರ್ವೆ ನಂಬರು ಇತ್ಯಾದಿಗಳನ್ನು ವಿವರವಾಗಿ ಬರೆದು ಅಲ್ಲಿರುವವರೆಗೆ ನೀರು ಸಿಗುವಂತೆ ಮಾಡಿದರೆ ಬಹಳ ಚೆನ್ನಾಗಿರುತ್ತದೆ.

4-00 P.M.

ಶ್ರೀ ವೀರೇಂದ್ರ ಪಾಟೀಲ್.—ಮೂರನೇ ಚಾಪ್ಟರಿನಲ್ಲಿ ಇದರ ವಿವರಗಳೆಲ್ಲಾ ತಾವೇ ಓದಿದರೆ ನಿಮಗೇ ಗೊತ್ತಾಗುತ್ತದೆ. ಮೊದಲು ತಾವಾಗಿಯೇ ಮಾಡುತ್ತಾರೆಯೇ ಎಂದು ನೋಡಿಕೊಂಡು ಆ ನಂತರ ಸರಕಾರ ಅವರು ಮಾಡದೇ ಹೋದರೆ ಇದಕ್ಕಾಗಿ ಇಷ್ಟು ಹಣವನ್ನು ಡಿಪಾಸಿಟ್ಟು ಮಾಡಿ ಎಂದು ಹೇಳುತ್ತೇವೆ. ಹಾಗೂ ಮಾಡದೇ ಹೋದರೆ ಸರಕಾರವೇ ಚಾನಲ್ಲುಗಳನ್ನು ತೆಗೆಸಿ ಅದಕ್ಕಾಗುವ ಖರ್ಚನ್ನು ಯಾರಿಂದ ಬರಬೇಕೋ ಅವರಿಂದ ವಸೂಲು ಮಾಡಲಾಗುತ್ತದೆ ಎಂದು ಇದರಲ್ಲೇ ಅವಕಾಶ ಮಾಡಲಾಗಿದೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಹಾಗಿದ್ದರೆ ಸಂತೋಷ. ಇನ್ನು ಸೆಕ್ಷನ್ 28ರಲ್ಲಿ ನೀರನ್ನು ಉಪಯೋಗಿಸಿಕೊಳ್ಳಲು ಅಪ್ಪಣೆ ವಿಚಾರವಾಗಿ ಹೇಳಲಾಗಿದೆ. ಆದರೆ ಈಗ ಕೆಲವು ಭಾಗಗಳಲ್ಲಿ ನೀರಾವರಿ ಮಾಡುವಾಗ ಕ್ರಾಪು ಪ್ಯಾಟರ್ನು ಯಾವುದು ಇರಬೇಕು ಎನ್ನುವುದನ್ನು ನಿಗದಿ ಮಾಡಲಾಗಿದೆ. ನಮ್ಮ ಭಾಗದಲ್ಲಿ ಈಗಾಗಲೇ ಕ್ರಾಪು ಪ್ಯಾಟರ್ನು ಯಾವುದಿರಬೇಕು ಎನ್ನುವುದು ನಿಗದಿಯಾಗಿದೆ. ಈಗ ನೀರನ್ನು ಕೊಡುವಾಗ ಕೊನೆಯ ಭಾಗದವರೆಗೂ ಕೊಡುತ್ತಾರೆ. ಆದರೆ ಕೆಲವು ಸಂದರ್ಭಗಳಲ್ಲಿ ಮೊದಲಲ್ಲಿರುವವರಿಗೂ ನೀರು ಸಿಗುತ್ತದೆ ಹಾಗೂ ಕೊನೆಯಲ್ಲಿರುವವರೂ ಅಪ್ಪಣೆ ಪಡೆದು ಅಲ್ಲಿ ನೀರನ್ನುಪಯೋಗಿಸುತ್ತಾರೆ. ಆದರೆ ಮಧ್ಯದಲ್ಲಿರುವವರಿಗೆ ನೀರು ಇದ್ದರೆ ಅದನ್ನು ಅಪ್ಪಣೆ ಇಲ್ಲದೆ ಉಪಯೋಗಿಸಿದರೆ ಅವರ ಮೇಲೆ ಸರಕಾರ ಪೆನಾಲ್ಟಿ ಕೊಡಬೇಕೆಂದು ಇದರಲ್ಲಿದೆ. ಇದರಿಂದೇನಾಗುತ್ತದೆ ಎಂದರೆ ಅಲ್ಲಿರುವ ಭೂಮಿಯವರು ಬೆಳೆ ಬೆಳೆಯಲು ಆಗುವುದಿಲ್ಲ. ಬೇರೆ ಇತರರು ಅಪ್ಪಣೆ ಇಲ್ಲದೆ ಮಾಡುವ ಹಾಗಿಲ್ಲ. ಆದರೆ ಇದರಿಂದ ಇತರರಿಗೆ ತೊಂದರೆಯಾಗದಂತೆ ಬೇರೆ ಯಾರಾದರೂ ಅಲ್ಲಿ ನೀರನ್ನುಪಯೋಗಿಸಿಕೊಂಡು ಬೆಳೆ ಮಾಡಬಹುದು ಎನ್ನುವುದಕ್ಕೆ ಇದರಲ್ಲಿ ಸರಿಯಾದ ಸ್ಪಷ್ಟೀಕರಣ ಇಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಟೆಂಪರರಿಯಾಗಿ ಆರು ವರ್ಷಗಳವರೆಗೆ ಕೊಡಬಹುದು ಎಂದು ಇದರಲ್ಲೇ ಇದೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಇದರಲ್ಲಿ ಅಷ್ಟು ಕ್ಲಿಯರು ಆಗಿಲ್ಲ. ಅದರಿಂದ ಇಲ್ಲಿ ಹೇಳುತ್ತಿದ್ದೇನೆ.

ಇನ್ನು ಸೆಕ್ಷನ್ನು 32ರಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು ಎನ್ನುವುದನ್ನು ನಿಗದಿಮಾಡುವ ಅಧಿಕಾರವನ್ನು ಒಬ್ಬ ಇರಿಗೇಷನ್ನು ಆಫೀಸರಿಗೆ ಎಂದು ಕೊಡಲಾಗಿದೆ. ಆದರೆ ಈ ಇರಿಗೇಷನ್ನು ಆಫೀಸರುಗಳಿಗೆ ಯಾವ ಯಾವ ಭೂಮಿಯಲ್ಲಿ ಯಾವ ಬೆಳೆ ಯಾವ ಕಾಲದಲ್ಲಿ ಆಗುತ್ತದೆ ಎನ್ನುವುದು

ತಿಳಿದಿರುವುದಿಲ್ಲ. ಇದಕ್ಕೆ ಬದಲಾಗಿ ಸಂಬಂಧಪಟ್ಟ ಅಗ್ರಿಕಲ್ಚರ್ ಅಧಿಕಾರಿಗಳು ಮತ್ತು ಆಯಾ ಸ್ಥಳದಲ್ಲಿರುವ ಉತ್ತಮ ರೈತರು ಹಾಗೂ ಪಂಚಾಯತಿ ಬೋರ್ಡಿನ ಸದಸ್ಯರುಗಳು ಇರುವಂತೆ ನಿಗದಿ ಮಾಡಿದರೆ ಅವರಿಂದ ಒಳ್ಳೆಯ ಕೆಲಸವಾಗುತ್ತದೆ ಎಂದು ನನಗಾದರೂ ಅನಿಸುತ್ತದೆ. ಅದರಿಂದ ಈ ಕಾನೂನು ಮೂಲಕ ಇದರಲ್ಲಿರುವಂತೆ ಮಾಡುವುದು ಒಳ್ಳೆಯದು.

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ಸರಕಾರವೇ ಮಾಡಬೇಕು. ಎಲ್ಲ ಸೂಕ್ತವಾದ ವಿಚಾರಗಳನ್ನೂ ತಿಳಿದುಕೊಂಡು ಹೇಗೆ ಮಾಡಬೇಕು ಎನ್ನುವುದನ್ನೆಲ್ಲಾ ರೂಲ್ಸುಗಳ ಮೂಲಕ ಪ್ರಿಸ್‌ಕ್ರೈಬು ಮಾಡತ್ತೇವೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಸೆಕ್ಷನ್ 28 (5) ರಲ್ಲಿ ಅನ್ ಆಥರೈಸ್ಡ್ ಕಲ್ಟಿವೇಷನ್ನು ವಿಚಾರವಾಗಿ ಹೇಳಿದ್ದಾರೆ. ಅತಿಕ್ರಮವಾಗಿ ಬೇಸಾಯ ಮಾಡಿದ್ದರೆ ಎಂದರೆ ಹತ್ತುಪಟ್ಟು ಮಾಡಿದ್ದರೆ ಅದಕ್ಕೆ ನೂರು ಪಟ್ಟು ಪೆನಾಲ್ಟಿ ಹಾಕಬೇಕು ಎಂದರೆ ಹೇಗೆ? ನೀರಾವರಿಗಾಗಿ ಕಾನೂನು ಪ್ರಕಾರ ನೀರನ್ನು ತೆಗೆದುಕೊಳ್ಳಲು ಅಧಿಕಾರವಿಲ್ಲ. ಆದರೆ ಅಕ್ರಮವಾಗಿ ನೀರನ್ನು ಪಯೋಗಿಸಿದರೆ ಅದಕ್ಕೆ ಪರ್ಮಿಷನ್ನು ಕೊಡಬೇಕೆಂದು ಇದೆ. ಆದರೆ ಅಲ್ಲಿ ನೀರು ಇದೆಯೋ ಇಲ್ಲವೋ ಎನ್ನುವುಧನ್ನೂ ನೋಡದೆ ಹಾಗೂ ಅವರು ಆ ನೀರನ್ನುಪಯೋಗಿಸಿಕೊಂಡು ಬೇಸಾಯ ಮಾಡದಿದ್ದರೆ ಅಂತಹವನ ಗತಿ ಏನು? ಇದನ್ನು ವಿಚಾರ ಮಾಡಿಲ್ಲ. ಇದರ ಬಗ್ಗೆ ಸ್ವಲ್ಪ ಸ್ವಲ್ಪ ಸ್ಪಷ್ಟೀಕರಣ ಕೊಡುವುದು ಅಗತ್ಯವಾಗಿದೆ. ಯಾರೋ ಒಬ್ಬರು ಅವರಿಗೆ ಸಿಗುವ ನೀರನ್ನು ಕಡಿಮೆ ಮಾಡಿಕೊಂಡು ಉಪಯೋಗಿಸಿದರೆ ಸರಕಾರ ಆದಕ್ಕೆ ಹತ್ತುಪಟ್ಟು ಎಂದು ಪೆನಾಲ್ಟಿ ಹಾಕುವುದು ಸರಿಯಲ್ಲ ಎಂದು ನನಗನಿಸುತ್ತದೆ. ಇವನ್ನೆಲ್ಲಾ ಸರಕಾರದವರು ಸೆಲೆಕ್ಟ್ ಕಮಿಟಿಗೆ ಹೋದಾಗ ವಿಚಾರಮಾಡಿ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕೆಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† Sri A. P. APPANNA (Virajpet).—Sir, I welcome *this bill* and I must congratulate the Minister for bringing forth such a uniform measure. I must say that of all the bills that we have dealt with in this session, this is the most important, which is going to benefit the farmer.

It is the policy of the Government of India as well as the State Governments to increase food production. Government is making attempts to aid the farmers in stepping up food production. But I must confess that most of the efforts made by Government has not yielded results desired. Government might give more loans through co-operative sooieties or supply fertilisers in the form of loans but the aid given is direct. We all know that the agriculturists are the most indebted section of our society. If we take all the loans they have to repay, we will find that it would exceed the value of the land itself.

It is not enough if we say that the raiyat who produces foodgrains must be more patriotic. He must produce more in the interest of the country. Where as there is a lot of scope and encouragement for other people who produce commercial crops, there must be a direct attempt made by the Government to see that the farmers should benefit more directly so that they are encouraged to produce more foodgrains. I must say first and foremost the direct benefit that the Government should confer on the raiyats who produce foodgrains which is of vital importance to our country, is giving water for their cultivation. Water, fertilizer and modern methods of farming, must be the three things to be provided to our farmers. We know what the farmer who produces foodgrains gets in the market for his produce. We also agitate that the price of foodgrains goes up; that prices must be reduced in the interest of the poor consumer, and that the consumer must pay less for his foodgrains. We do not look into the fact that the man who produces foodgrains is not getting an adequate return. He sells his foodgrains at a low rate

(SRI A. P. APPANNA)

and buys all necessaries of life at a high rate. We do not sympathise with him at all. The only thing we ask him is, he must be more patriotic than all other people in this country.

Sir, I must say that there are certain minor irrigation projects which are not maintained properly at all. There are certain minor irrigation projects which are not maintained for years together. When we approach the Revenue Department they say it is not under our control; when we approach the PWD they say it is not under our control.

Sri V. M. DEO (Gubbi).—Since the Minister is likely to be the Chairman of the Select Committee, could you please direct him to be here and listen to the suggestions Madam,

CHAIRMAN.—The Deputy Minister is here and he will attend to it.

Sri A. P. APPANNA.—Unless we maintain these projects properly and assure that there is a continuous water supply to the farmers, we cannot expect an increase in the production of foodgrains in our country. This Bill envisages that all the irrigation projects which supply water to lands more than 10 acres will come under the Government directly. It is also proposed under the Bill that there must be a levy of Rs. 5 per acre for maintaining these projects. In this behalf, I want to suggest Sir, whatever amount that is being collected from the land for maintaining this irrigation project, that entire amount must be spent for that project every year. There may be instances where all these monies are pooled together and if we collect about Rs. 5,000 from the land for which a particular project supplies water and if you spend only 2000 or 3000 for maintenance, then it would be a great injustice, because whatever amount that has been paid by the raiyats under the particular project must be entirely spend for the maintenance of that project and nowhere else. Because we know, we have seen that when money was allotted for rural communication roads, we see instances where in certain taluks 235 miles have been taken in a taluk and in certain taluks, it has not reached even the target of 50 miles. Therefore, what I submit is that whatever amount that is collected for the maintenance of the project, the entire amount must be spent for that project only and nothing else. Because, there will be a tendency to get more money in certain areas, on due pressure more allotments for cetrain projects and less allotments for certain projects. So I suggest whatever amount is collected from the land for which water supply is drawn from that particular project and that amount must be spend for the maintenance of that project.

Then Sir, it is said that this rate including surcharge, betterment levy and water rate if we put all these items together, it has gone to a limit where raiyats feel that they are robbed out of their income. We must take this into account because there is a tendency in our country and there is a feeling among certain sections of the people that farmers are the people who are paying less taxes. It is not so. Most of the indirect taxes in our country is hanging on the farmer. There is no doubt about it. But it is not brought to light by these farmers. Only

those people who are in the commercial side, who are in the business side, they are able to voice their grievances in a better way than the farmers. That is why it is found that their agitation, their fight, is more rewarded than agitation by farmers. Most of the direct taxes are hitting the raiyat. In view of that, I feel Sir, I welcome this levy of Rs. 5 but the entire amount must be spent on that particular project because it is a direct aid in the production of foodgrains.

Then Sir, I welcome the provisions in this Bill wherein it is said that all the land wherein these field channels lie must be acquired by the Government and due compensation be paid. It is the experience that in many projects the channel has been laid out without acquiring the land and if a particular owner of the land, if at any time thinks that he will not get water, he will not allow water but stops it. And the Government is not able to take any action. Even in certain cases where clashes have taken place, even police could not take action because that land has not been acquired and ownership is not vesting in the Government. In view of the fact that the field channels which run across the lands owned by different people, the concerned lands must be acquired, so that the ownership of the field channel must vest in the Government and no individual will be in a position to play any mischief, in this behalf.

Sir, I understand the magnitude of the task involved in maintaining this entire minor irrigation works by the Government. I understand the entire machinery must be toned up and it is not an easy task. It is Sir, easy for the Government to take away all the 23,000 tanks which irrigate about 11 lakhs acres of land.

SRI ANNA RAO GANAMUKHI.—Does it not relate to major irrigation works also. You are stopping only with minor irrigation.

SRI A. P. APPANNA.—There is not much difficulty in maintaining major irrigation projects because there is already machinery evolved for it and it is being worked out. When these 23,000 tanks come under the Government, it should not happen that after collecting this amount at the rate of Rs. 5 per acre, Government should not be in a position to say that we do not have sufficient machinery.

Government should not be in a position to say that they do not have sufficient machinery, they do not have sufficient finance. It is easy to evolve a machinery and maintain a project like Tungabhadra project, but it is not easy to bring all these 23,000 tanks under one machinery, maintain it efficiently, and provide all the facilities expected by the farmers. I am telling this because we have found from experience that all these tanks in one form or other have been under the control of the Government. I know in Coorg District certain minor irrigation projects are under the control of the Revenue Department even to-day, even though the Revenue Department has not decided to maintain those projects and they are not in a position to look into it. Mere change of the department will not solve the problem at all. The entire scheme must be drawn up, efficient machinery built up and it must be seen that every project is maintained properly when the ryot has guaranteed to give

(SRI A. P. APPANNA)

Rs. 5 per acre every year. Otherwise, it will be additional tax and nothing else for the farmer. Hence, I say that the provisions of the Bill are very welcome because it intends to provide all the benefits to the farmers, but it is the question of implementation that is most important and unless it is looked into and implemented properly, most probably, it will be a legislation which will be a form of imposing a tax on the ryots and nothing else. I hope and I am quite sure that Government will look into it and a machinery will be evolved and it will be effectively managed and all the facilities that are contemplated under this Act are provided for the farmer and if that is done, I tnink we can expect that there will be more production of foodgrains and there will be a tremendous increase in the yield and also in the income of the farmer and then only we can expect better results. Thank you.

† Sri ANNA RAO GANAMUKHI.—Mr. Speaker, sir, with the qualification that it would have been examined before introducing the Bill because in the previous years the Bill was already there, but the Bill lapsed owing to lapse of time; now if we go into the provisions of this Bill, think that sufficient attention has not been bestowed upon various aspects that are of urgent nature. We know that we are spending enormous amount on Irrigation projects, major and minor. Not only this, but after the emergency set in, we are spending more amount on minor irrigation works. Therefore, it is very necessary that we should think of rationalising the whole thing. It was reported recently that during the three year period of the Third Plan whatever amounts were spent on projects of commercial nature for which capital accounts are kept, there was great loss during these three years because these projects did not yield anything by way of interest. The State was not able to meet even interest charges which we have to give towards the capital exenditure on these projects. It is reported that a loss of about Rs. 87 crores has been incurred throughout India on these capital works and I do not know whether the State Government has worked out any figure relating to the amount spent on all these projects in our State during these three years. But if we look to the figures of the whole of India, then we should say that including the non-commercial projects throughout India, the expenditure comes to about Rs. 37 crores per year and I am not surprised if Mysore Government according to 5 per cent population might have incurred about Rs. 7-8 crores loss on this account, loss by way of interest because they have not yielded. I am telling this because you yourself admit that the ryots have not excavated field channels, they have not utilised the waters. In fact, there is no utilisation of water throughout the country because no rational basis has been provided by the State. If this measure had been brought long before, then I think we should have excavated many field channels and utilised the water. That has not been so far. So I am speaking of the projects for which capital accounts have been kept. Apart from this, there are many minor irrigation works for which only revenue

account is kept and that does not come under the figures which you have given. Therefore, I think it is highly important, it is very necessary that we should rationalise the whole thing. Government is not able to give the figures which they ought to have given. For instance, what is the amount of loss which we are incurring, what is the amount which we have spent by way of capital expenditure so that we may recover some amount by levying betterment fee or betterment contribution. I think in our state we have to maintain these accounts. Mr. Ghorpade has expressed the view that people who do not utilise waters, those areas which have to pay for the construction of these projects or which have to meet the losses, they have to subsidise. It is all right to say that in the initial stages, some axpenditure might be met from the general revenues, but a stage must come very early that those projects should be able to met at least the interest charges wish we incur every year, and so it is, I think, highly necessary that we should rationalise the whole thing. Now, Sir, in another Act, the Mysore Irrigation Levy of Betterment Contribution and water Rate Act, in section 10, it has been said : 'for the avoidance of doubt it is hereby declared that the water rate leviable under this Act is not a tax on land but is a charge for the water supplied or used for the irrigational land. This supposes that you take water to the very doors of the farmers' field. It is a charge for the water supplied to them. Here, you have provided for maintenance ; that means, unless he gives maintenance cess, he will not be supplied with water. Is it not directly in conflict with the present Bill ? Therefore, sufficient attention ought to have been given before bringing this bill and Government should have gone through the former betterment fee levy Act. Again, about water rate, there are only two taxes which can be imposed in the case of those who are benefiaries from this. One is the betterment levy and the other is water rate. You may include everything in that. After all, what is water rate ? It is not a thing which is only a rate to take the water, to meet the recurring expenditure of the staff or to meet the capital expenditure. Therefore, a rationalised tax would have been better. In the former Act you say that it is a charge for the water supplied. Then, what is there which we are thhinking of in this Bill ? It is highly necessary that we think over all thise things.

4-30 P.M.

Sir, in order to meet all these charged by way of interest and other things, we should rationalise the whole thing and levy such tax which is sufficient or adequate to meet the capital expenditure and also meet the establishment. What is now done is, we are contributing from the general revenues. We do not know from the figures what amount is being contributed by those who are not the recipients from the projects. People who cultivate dry areas are not benefited but all the same, they have to pay for every project. I am informed cthat the Mysore Government have exceeded within three years the targ et fixed for loan for these projects multi-purpose projects, Irrigation projects

(SRI ANNA RAO GANAMUKHI)

and power projects. For another two years they cannot go for loans unless the target is revised. So, the responsibility of repayment is on the whole population. Therefore, the need for rationalisation of these taxes.

Another thing which I want to point out is, we have not provided anything in this Bill for the decentralisation of power as also the people's participation in it. Sri Ghorpade has already pointed out and he has given sufficient hints for taking action under this He said that Co-operative societies must be formed and all the ben eficiaries must be entrusted with that work along with the officers. Another idea also has come out by some prominent people that for big irrig ational projects a Corporation must be formed consisting of the beneficiaries and the Government officers. But, Sir, there are many projects in the country and for everything if we go on constituting a corporation, there will be a multiplicity of Corporations. But, this idea is thrown by some prominent people.

Then, Sir, there is one constitutional point also. About the water rate, it has been said in the Mysore Betterment Levy and Water Rate Act that water rate is not a fixed thing. It may differ from project to project, from area to area; there is no flat rate as such. It all depends upon the expenses incurred in respect of every project. In this Bill, they have not mentioned any fixed sums. They may levy different sums in different areas. Here, if we charge the mintenance rate at the rate of five rupees per acre, then whether one is a big cultivator or a small cultivator who has land under a tank or under a small irrigation work, has to pay something. But to rationalise a thing, no separte maintence charge should be levied becauee even this Act says that only water rate should be levied. Water rate means, the charge for water is supplied; it is taken to the door of the farmer. The whole responsibility lies with the Government to take the water to the door of the farmer. The Government is perfectly justified in saying that they cannot meet the maintenance charges but this is not the way of levying a maintenance cess. Water rate should be so rationalised that it should include everything except this better levy. Of course it does not include maintenance of field channels etc. In other respects, water rate should be a consolidated levy and not compartmentalised in this manner.

In clause 44, it has been stated that the State Government shall levy a maintenance cess at Rs. 5 per acre per annum on lands which might benefit by any irrigation work maintained by the Government. A very different idea occurs in the other act. This Act says that "the maintenance cess shall be a tax on the land in respect of which it is payable". Now, the cess here has been converted into a tax. In the other act it is stated "for the avoidance of doubt it is hereby declared that water rate leviable under this Act is not a tax on land". But the

present bill converts the cess into a tax. I do not know what the idea behind it is.

According to Entry No. 17 of VII Schedule, List II, of the Constitution, there is no power given for taxing irrigation and other works. It gives a general power but there is no mention about irrigation tax in this list. We may therefore levy water rates, and if the water rate is not paid by the consumer, we may discontinue supplies. But a tax cannot be levied in any manner by the State Government. They do not have the power. I do not know how this bill considers it a tax. Basu's Commentry on page 689 states: the entries in the legislative lists should be divided into two groups: one relating to the power to tax and the other relating to the power of general legislation relating to specified subjects. Taxation is considered as a distinct matter for purposes of legislative competence". If there is a general entry, we may levy any cess, not tax, because there is no entry about irrigation tax and other things in the Constitution itself. If that maintenance cess is converted into a tax, then the State Government may not have the power to levy this as a tax.

A Tax may be on income or property or business but a tax cannot be levied for a service rendered by Government. The Government impounds water at its own cost, it takes the water to the field and then it is given to the beneficiaries. Therefore, to say that it is a tax is not proper. On the other hand, we should call it a rate or fee or cess in lieu of some service rendered by the State Government.

In clause 4, I see that "No person shall construct, control or maintain wholly or partly any reservoir, tank or well without the permission of the......". Under this no one can construct a well. I am surprised at this provision. I happened to go through the Mysore and Bombay Irrigation Bills but the restriction in respect of wells is not contained there. It might be that there are wells by the side of the canals or rivers which have superficial flow and because they are near such canals or rivers, they may get percolated water. We can then justify and prevent construction of wells nearabouts.

Sri VEERENDRA PATIL.—The Hon'ble Member may refer to the proviso to clause 4. Previous sanction is not necessary for certain classes of wells notified by Government.

Sri ANNA RAO GANAMUKHI.—Why should Government take the trouble of specifying areas and other things. We can put it the other way round and say "Provided that the previous sanction shall be necessary in the case of such class of wells as the State Government may by notification specify in this behalf". But a general statement is made here and the Government is taking powers to classify areas. That is not proper. As it is, too much powers have been given to the Irrigation Officers. I also think formation of advisory bodies have become out-of-date and we should not think on those lines when we are creating local bodies with decentralised powers. If any advice is at all needed that can be obtained from the Zilla Parishads, which would come into existence in the near future.

(SRI ANNA RAO GANAMUKHI)

This requisition of able-bodied persons for compulsory work should be examined. This clause is found in other irrigation acts also. It should be examined whether it is in accordance with the spirit of the Constitution. Abledbodies persons also includes persons who are minors.

Here, I should say, if an able-bodied person is absent from the village then others will be taken. And if he is reluctant, then what work could a reluctant person be expected to do ? I do not think he will be useful. Therefore, those who do not come or those who are not willing to come, they must give certain wages that have been provided and on that wages, other people should be employed. This has been contemplated even in the development side where the villagers have done some work by utilising the defence labour banks in each village. Therefore, I think this should be adopted. I am not certain whether would be in consonance with the spirit of the Constitution.

With these remarks, I feel that this Bill should be referred to the select committee in the first instance. To bring it perfectly in order, it would be very good if an irrigation commission is appointed and their recommendations taken so that we may not incur any loss at least on account of these irrigation works in our State which we are saying at every stage. Government is also compelled to bring in measures either to a rise a new levy or tax or raise the rates of the existing tax. In either case, we have to do it because of the short-falls under the third plan and the resources position of the State.

Hence, Sir, I feel that the whole thing should be rationalised by either setting up an irrigation commission or referring this Bill for the present to the Select Committee and then consider any amendments that may be necessary. One thing is certain that an irrigation must be set up and its recommendations obtained so that in future, we may formulate a policy and proceed ahead. Thank you.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು).—ಅಧ್ಯಕ್ಷರೆ, ನೀರಾವರಿ ಯೋಜನೆ ಬಗ್ಗೆ ಈಗ ಬಂದಿರ ತಕ್ಕ ಮಸೂದೆ ನೋಡಿದರೆ ನಿಜವಾಗಿಯೂ ಹುಣ್ಣಿನ ಮೇಲೆ ಬರೆ ಎಳೆದ ಹಾಗೆ ಆಗಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಕಳೆದ ವರ್ಷ ಸರ್‌ಚಾರ್ಜು ಎಂದು ರೈತರ ವರ್ಗದ ಮೇಲೆ ಹಾಕಿ ಅದು ಈಗಾಗಲೇ ಹಾಕಿರುವುದು ಸರಿಯಲ್ಲ ಅದನ್ನು ಬದಲಾವಣೆ ಮಾಡಬೇಕೆಂದು ಈಗ ಈ ಬಿಲ್ಲನ್ನು ತಂದಿದ್ದಾರೆಂದು ನಾನು ಅಭಿಪ್ರಾಯಪಡುತ್ತೇನೆ. ಇದರಲ್ಲಿರುವ ಫೈನಾನ್‌ಷಿಯಲ್ ಮೆಮೋರ್ಯಾಂಡಂನಲ್ಲಿ ಮಾನ್ಯ ಮಂತ್ರಿಗಳು ನಿಜವಾದ ಒಂದು ಚಿತ್ರ ಮತ್ತು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಇದರಂತೆ ನಮ್ಮ ದೇಶದಲ್ಲಿ ಸುಮಾರು 23,000 ಕೆರೆಗಳಿವೆ. ಇದರಿಂದ ಸುಮಾರು ಹನ್ನೊಂದು ಲಕ್ಷ ಎಕರೆಗಳಷ್ಟು ಭೂಮಿ ಸಾಗುವಳಿಗಾಗಿ ಇದರೊಳಗೆ ಬರುತ್ತದೆ ಎನ್ನುವ ಅಂಕಿ ಅಂಶಗಳನ್ನು ಇದರಲ್ಲಿ ತಿಳಿಸಿದ್ದಾರೆ. ಇದರಂತೆ ನೋಡುವಾಗ ಹನ್ನೊಂದು ಲಕ್ಷ ಎಕರೆಗೆ ಎಕರೆಯೊಂದಕ್ಕೆ ಐದು ರೂಪಾಯಿನಂತೆ ಹಾಕಿಕೊಂಡರೆ ಸುಮಾರು 66 ಲಕ್ಷ ರೂಪಾಯಿಗಳಾಗುತ್ತವೆ. ಸಣ್ಣ ನೀರಾವರಿ ಕೆಲಸಗಳಿಗಾಗಿ ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳಷ್ಟು ಬರುತ್ತದೆ ಎಂದು ಒಂದು ಅಂದಾಜನ್ನು ಇದರಲ್ಲಿ ಹೇಳಿದ್ದಾರೆ. ಆದರೆ ಇಲ್ಲಿ ಒಂದನ್ನು ಮಾತ್ರ ಮರೆತಿದ್ದಾರೆಂದು ನಾನು ಹೇಳಬೇಕಾಗಿದೆ. ಅದು ಈ ದೇಶದಲ್ಲಿ ಎಷ್ಟು ಆಹಾರ ಧಾನ್ಯಗಳು ಹೆಚ್ಚಾಗಿ ಉತ್ಪಾದನೆಯಾಗುತ್ತಿದೆ ಎನ್ನುವ ಅಂಕಿ ಅಂಶಗಳನ್ನು ಕೊಟ್ಟಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಈ ಸಮಯದಲ್ಲಿ ನಾವು ಒಂದಂಶವನ್ನು ಇಲ್ಲಿ ನೋಡಬೇಕು. 1947 ನೇ ಇಸವಿಯಲ್ಲಿ ನಮ್ಮ ದೇಶದಲ್ಲಿ ಆಹಾರದ ಕೊರತೆ ಬೀಳುತ್ತಿದ್ದುದು ಕೇವಲ ನೂರಕ್ಕೆ ಏಳು ಭಾಗದಷ್ಟು ಮಾತ್ರ ಎಂದಿತ್ತು. ಈ ಕಾಂಗ್ರೆಸ್ಸು ಸರಕಾರ ಬಂದು ಹದಿನಾರು ವರ್ಷಗಳಾದರೂ ಶೇಕಡಾ ಏಳರಷ್ಟಕ್ಕಿಂತ

ಹೆಚ್ಚಿನ ಆಹಾರ ಬೆಳೆಯುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿಲ್ಲ. ಉದಾಹರಣೆಯಾಗಿ ಹೇಳುತ್ತ ಈಗತಾನೇ ಮಾತನಾಡಿದ ಶ್ರೀಮಾನ್ ಅಣ್ಣಾ ರಾಯರು ತುಂಗಭದ್ರಾ ಯೋಜನೆಗಾಗಿ ಕೋಟ್ಯಾಂತರ ರೂಪಾಯಿಗಳಷ್ಟು ವೆಚ್ಚಮಾಡಿದ್ದರೂ ಕೂಡ ಕೇವಲ ತೊಂಬತ್ತು ಸಾವಿರ ಎಕರೆಗಳಿಗಿಂತ ಮೇಲ್ಪಟ್ಟು ಭೂಮಿ ಸಾಗುವಳಿಗೆ ಬಂದಿಲ್ಲ ಎಂದು ಹೇಳಿದರು. ಇದರಿಂದ ಆಡಳಿತ ಉತ್ತಮವಾಗಿ ನಡೆಯುದೇ ಸರಕಾರದಲ್ಲಿರುವ ಅಧಿಕಾರಿಗಳು ಸುಮ್ಮನೆ ಕಾಲ ಕಳೆಯುತ್ತಿದ್ದಾರೆಯೇ ವಿನಾ ಆಸಕ್ತಿಯಿಂದ ಕೆಲಸ ಮಾಡುತ್ತಿಲ್ಲ. ಸಾಗುವಳಿಮಾಡುವುದರ ಕಡೆಗೆ ಹೆಚ್ಚಿನ ಆಸಕ್ತಿ ವಹಿಸಿದಂತಿಲ್ಲ ಎನ್ನುವುದು ಅವರೇ ಕೊಟ್ಟಿರುವ ಅಂಕೆ ಸಂಖ್ಯೆಗಳಿಂದ ಗೊತ್ತಾಗುತ್ತದೆ. ತಾವೂ ಕೂಡ ಇದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಅದಕ್ಕೆ ಕಾರಣವೂ ಇದೆ. ಒಂದು ಮಂತ್ರಿಮಂಡಲ ಕೇವಲ ಐದು ವರ್ಷಗಳ ಕಾಲ ಮಾತ್ರ ಇರುತ್ತದೆ. ಅದರಲ್ಲಿ ವಿಚಾರಗಳನ್ನೂ ತಿಳಿದು ಅನುಭವ ಪಡೆಯಬೇಕಾದರೆ ಒಂದೆರಡು ವರ್ಷಗಳ ಕಾಲವಾದರೂ ಹೋಗುತ್ತದೆ. ಅದರೊಳಗೆ ಯಾವ ಕೆಲಸವನ್ನು ಸರಿಯಾಗಿ ಮಾಡಬೇಕೆನ್ನುವುದರೊಳಗೆ ಈ ಮಂತ್ರಿಮಂಡಲದ ಅವಧಿ ಮತ್ತೊಂದು ಹೊಸ ಮಂತ್ರಿಮಂಡಲ ಬರುತ್ತದೆ. ಅವರಿಗೆ ಕೂಡ ಅದೇ ರೀತಿ ಕಷ್ಟವಾಗುತ್ತದೆ. ಇದರಲ್ಲಿ ಒಂದು ಅಂಶವನ್ನು ತಾವು ಮರೆಯಬಾರದು 16-17 ವರ್ಷಗಳ ಕಾಲ ಆಡಳಿತ ನಡೆಸಿದ ಸರಕಾರ ಕಾಂಗ್ರೆಸ್ಸು ಸರಕಾರವಾದರೂ ಜನತೆಗೆ ಅನುಕೂಲವಾಗುವಂತೆ ಕಾಂಗ್ರೆಸ್ಸಿನ ಪಕ್ಷ ಮಾಡಿಲ್ಲ ಎನ್ನುವುದು ರಿಫ್ಲೆಕ್ಟ್ ಆಗುತ್ತದೆ. ಶ್ರೀಮಾನ್ ಅಣ್ಣಾರಾಯರು ಹೇಳಿದಂತೆ, ಅರೇಳು ಕೋಟಿ ರೂಪಾಯಿಗಳಷ್ಟು ಯೋಜನೆಗಳಿಗಾಗಿ ಖರ್ಚುಮಾಡುತ್ತಿದ್ದರೂ ಕೂಡ ಅವಕ್ಕೆ ಬಡ್ಡಿ ಇಲ್ಲದಂತಾಗಿದೆ. ಇಷ್ಟೇ ಅಲ್ಲ. ಯೋಜನೆಗಾಗಿ ಆಗುತ್ತಿರುವ ವೆಚ್ಚ ಬಹುಶಃ ಇನ್ನೂ 20-25 ಕೋಟಿಯವರೆಗೆ ಜಾಸ್ತಿ ಹೋಗಿದೆ. ತಮಗೂ ಗೊತ್ತು. ಸ್ವಾತಂತ್ರ್ಯ ಬಂದ ಕಾಲದಲ್ಲಿ ನಮ್ಮ ಖಜಾನೆಯಲ್ಲಿ 36 ಕೋಟಿ ರೂಪಾಯಿಗಳಷ್ಟು ಹಣವಿತ್ತು. ಅದನ್ನೆಲ್ಲಾ ತೆಗೆದು ಇರಿಗೇಷನ್ನು ಪ್ರಾಜೆಕ್ಟ್‌ಗಳಿಗಾಗಿ ಹಾಕಿ ಲಾಭ ಬರುತ್ತದೆ ಎಂದು ಮಾಡಿದರು. ಇದರಲ್ಲಿ ಲಾಭ ಎಷ್ಟು ಬಂದಿದೆ ಎನ್ನುವುದನ್ನು ಅವರೇ ಕೊಟ್ಟಿರುವ ರಿಪೋರ್ಟಿನಂತೆ ನೋಡಿದರೆ, ಕೇವಲ ಒಂದೂಮುಕ್ಕಾಲು ಪರ್ಸೆಂಟಿನಷ್ಟು ಬರುತ್ತಿದೆ. ನಾವು ಸಾಲ ಮಾಡಿ ತರುವ ಹಣಕ್ಕೆ ಕೊಡುತ್ತಿರುವ ಬಡ್ಡಿದರ ಶೇಕಡಾ ನಾಲ್ಕರಿಂದ ಐದರವರೆಗೆ, ಎಂದರೆ, ಇದರಿಂದ ಸರಕಾರಕ್ಕೆ ಸುಮಾರು 2-2¼ ಪರ್ಸೆಂಟು ನಷ್ಟವಾಗುತ್ತಿದೆ. ತುಂಗಭದ್ರಾ ಯೋಜನೆಯ ಪ್ರದೇಶದಲ್ಲಿ ಎಷ್ಟೋ ಕಾಲುವೆಗಳನ್ನು ತೆಗೆಸುವುದಕ್ಕಾಗಿ ಕೋಟಿಗಟ್ಟಲೆ ವೆಚ್ಚಮಾಡಿದರೂ ಕೂಡ ಕೇವಲ 90 ಸಾವಿರ ಎಕರೆಗಳಷ್ಟು ಭೂಮಿ ಮಾತ್ರ ಸಾಗುವಳಿ, ಮಾಡಲು ಅವಕಾಶವಾಗಿದೆ ಉಳಿದ ಹಣವೆಲ್ಲಾ ಬರೀ ನಿಮ್ಮ ಒಂದು ಪಿ. ಡಬ್ಲ್ಯು. ಡಿ. ಇಲಾಖೆಯವರ ಎಸ್ಟಾಬ್ಲಿಷ್‌ಮೆಂಟಿಗಾಗಿ ಮತ್ತು ಅದರ ಮೇಂಟೆನೆನ್ಸ್‌ಗಾಗಿ ಉಪಯೋಗ ಮಾಡಿಕೊಳ್ಳುವವರಾಗಿದ್ದಾರೆ. ಇದರಲ್ಲಿ ಯಾವ ಅಡಿಷನಲ್ ಎಕ್ಸ್‌ಪೆಂಡೀಚರ್ ಇಲ್ಲ ಎಂದಿದ್ದಾರೆ. ಆದರೆ ಇದರಲ್ಲಿರುವಂತೆ ಒಂಬತ್ತು ಲಕ್ಷ ರೂಪಾಯಿಗಳಷ್ಟು ನಮ್ಮಿಂದ ಬರುತ್ತದೆ. ಹಾಗೆ ಕಾಲುವೆಗಳನ್ನು ತೆಗೆಸುವುದಕ್ಕಾಗಿ ಹತ್ತೂವರೆ ಲಕ್ಷ ಬೇಕಾಗುತ್ತದೆ ಮತ್ತು 9 ಲಕ್ಷ ರೂಪಾಯಿಗಳು ಖರ್ಚಾದರೆ ನಿಮಗೆ 66 ಲಕ್ಷ ರೂಪಾಯಿಗಳಷ್ಟು ಬರುತ್ತದೆ ಎಂದು ಇದರಲ್ಲೇ ಹೇಳಿದ್ದಾರೆ. ಬಹಳ ಬುದ್ಧಿವಂತಿಕೆಯ ವಿಚಾರ. ತಾವು ಒಂದು ವರ್ಷಕ್ಕೆ ಖರ್ಚುಮಾಡುವುದು 9 ಲಕ್ಷ. ಸುಮಾರು 11 ಲಕ್ಷ ಎಕರೆಗಳು ಸಾಗುವಳಿಗೆ ಬರಬಹುದು. ಎಕರೆಗೆ 5 ರೂಪಾಯಿ ಸುಸ್ತಿನಂತೆ, ನಿಮಗೆ ಸುಲಭವಾಗಿ ಸುಮಾರು 60 ಲಕ್ಷ ರೂಪಾಯಿ ಬರಬಹುದೆಂದು ನಿಮ್ಮ ಫೈನಾನ್ಸಿಯಲ್ ಮೆಮೊರ್ಯಾಂಡ್‌ಮ್‌ನಿಂದ ಅಂದಾಜು ಮಾಡಬಹುದು.

5-00 P.M.

ಶ್ರೀ ವೀರೇಂದ್ರ ಪಾಟೀಲ್.—9 ಲಕ್ಷ ರೂಪಾಯಿ ಅಕ್ವಿಸಿಶನ್ ಚಾರ್ಜಸ್.

ಶ್ರೀ ಬಿ. ಕೆ. ಪುಟ್ಟಯ್ಯ.—ಒಂದಲ್ಲ ಒಂದು ರೂಪದಲ್ಲಿ ತನ್ನ ಆದಾಯದ ಕಡೆಗೇ ಸರ್ಕಾರದ ಗಮನವಿರುತ್ತದೆ. ಸರಕಾರಕ್ಕೆ ಬೇಕಾದಷ್ಟು ಖರ್ಚಿದೆ, ಹಣಬೇಕು ಒಪ್ಪಿಕೊಳ್ಳುತ್ತೇನೆ. ಆದರೆ ಇಂಥ ಸ್ಕೀಮುಗಳನ್ನು No loss, no profit basis ಮೇಲೆ ಮಾಡುವುದು ಉಪಯುಕ್ತ ಎಂದು ನನ್ನ ಸಲಹೆ.

ಪೇಜು 4 ಮತ್ತು 5 ನ್ನು ನೋಡಿದರೆ, ಹಿಂದಿನ ಪದ್ಧತಿಯನ್ನೇ ಜಾರಿಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತಾ ಇದ್ದೀರಿ. ಯಥಾಪ್ರಕಾರ ಇರಿಗೇಶನ್ ಆಫೀಸರು, ಪಟೇಲ, ತಹಸೀಲ್ದಾರ್, ಡೆಪ್ಯುಟಿ ಕಮಿಷನರ್, ಡಿವಿಜನಲ್ ಕಮಿಶನರ್, ಅವರ ಮೇಲೆ ಸರಕಾರ ಇದ್ದಾರೆ. ಈ 5-6 ಜನಗಳನ್ನ ಒಬ್ಬ ಒಡರ್ಸ್ಕೃತ ತಡೆಯಬೇಕು. ಹೀಗಿದ್ದರೆ ಇದರಿಂದ ಅವನು ಸಹಾಯ ಪಡೆಯು

(ಶ್ರೀ ಬಿ. ಕೆ. ಪುಟ್ಟಯ್ಯ)

ವುದಕ್ಕೆ ಸಾಧ್ಯವೇ ? ಹಿಂದಿನ ಸರಕಾರಕ್ಕೂ ಈಗಿನದಕ್ಕೂ ಏನು ವ್ಯತ್ಯಾಸವಿದೆ ? ನೀವು ರೈತರಿಗೆ ಅನುಕೂಲಮಾಡಿಕೊಡುತ್ತಿರುವುದು ಏನು ? ಪ್ರಜಾ ಪ್ರಭುತ್ವ ಪದ್ಧತಿಯಲ್ಲಿ ಆಫೀಸರುಗಳು ಕಡಿಮೆ ಇದ್ದು ಆಡಳಿತ ಮಾರ್ಗ ಸಡಿಲವಾಗಿದ್ದು, ರೈತನಿಗೆ ಸಹಾಯ ಆದಷ್ಟು ನೇರವಾಗಿ ದೊರೆಯುವಂತೆ ಮಾಡಿದ್ದರೆ ಚೆನ್ನಾಗಿತ್ತು.

ಫೇಜ್ ಆರರಲ್ಲಿ ಇರಿಗೇಶನ್ನು ಕೆಲಸಗಳಿಗೆ ಮೂರು ತಿಂಗಳಿಗೆ ಮುಂಚೆ, ನೀರು ಕೊಡುವ ಕಾಲ ತಿಳಿಸುತ್ತೇವೆಂದು ಹೇಳಿದ್ದೀರಿ. ನಿಜವಾಗಲೂ 3 ತಿಂಗಳಿಗೆ ಮುಂಚೆ ಅನೌನ್ಸ್ ಮಾಡಿದರೆ, ಆ ಸಮಯಕ್ಕೆ ಬೇಸಿಗೆಕಾಲವಿರಬಹುದು. ನೀರು ಬೇಕಾದ ಕಾಲಕ್ಕೂ, ನೀರು ಕೊಡುವ ತಾರೀಖಿಗೂ ಬಹಳ ವ್ಯತ್ಯಾಸವಾಗಬಹುದು. ಆದ್ದರಿಂದ ಈ ಕ್ಲಾಜನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು.

ಕ್ಲಾಜು 16 ರಲ್ಲಿ land acquire ಮಾಡುವ ಅಧಿಕಾರವನ್ನು ಡೆಪ್ಯುಟಿ ಕಮಿಶನರಿಗೆ ಕೊಟ್ಟಿದ್ದೀರಿ. ಅಲ್ಲಿಯೇ ಸಬ್‌ಡಿವಿಜನ್ (2) ರಲ್ಲಿ, ಕಾಂಪೆನ್ಸೇಷನ್ wet land ಗೆ, 100 times the land revenue, and dry land ಗೆ 200 times ಎಂದು ಹೇಳಿದೆ. ಈಗಿನ ಜಮೀನು ಬೆಲೆ ತಮಗೇ ಗೊತ್ತಿದೆ. ಇಷ್ಟು ಕಡಿಮೆ ಕೊಟ್ಟರೆ ರೈತ ಕೆಡುತ್ತಾನೆ, ತಕರಾರು ಜಾಸ್ತಿಯಾಗುತ್ತದೆ. ಆದ್ದರಿಂದ wet land ಗೆ, 200 times, dry land ಗೆ 400 times the land revenue ಕೊಡುವಂತೆ ಪ್ರಾವಿಶನ್ ಮಾಡಿಕೊಳ್ಳಬೇಕು.

†ಶ್ರೀ ವೀರೇಂದ್ರ ಪಾಟೀಲ್.—ನಾವು ಫೀಲ್ಡ್ ಚಾನಲ್ ನಿರ್ಮಾಣ ಮಾಡಿಕೊಟ್ಟರೆ, ರೈತನಿಗೆ ಲಾಭವಾಗುತ್ತದೆ. ಅದನ್ನು ತಾನಾಗಿಯೇ ಮಾಡಬೇಕು. ಅವನು ಮಾಡಬೇಕಾಗಿದ್ದುದನ್ನು ನಾವು ಅಕ್‌ವಯರ್ ಮಾಡಿಕೊಂಡು ಕಾಂಪನ್ಸೇಶನ್ ಕೊಡುತ್ತೇವೆ. ಅಂಥದ್ದರಲ್ಲಿ ಇನ್ನೂ ಹೆಚ್ಚಿಗೆ ಕಾಂಪನ್ಸೇಶನ್ ಕೊಡಿರಿ ಎಂದರೆ ಏನು ಅರ್ಥ ?

ಶ್ರೀ ಬಿ. ಕೆ. ಪುಟ್ಟಯ್ಯ.—ಈಗಿನ ಧಾರಣೆವಾಸಿಗಳಿಗೆ, ಹೆಚ್ಚು ಕೊಡುವುದು ಸೂಕ್ತ.

ಕ್ಲಾಜು 22ರಲ್ಲಿ, the Irrigation Officer shall either permit the applicant to use the field channel or declare him to be a joint user thereof ಎಂದು ಮಾಡಿದ್ದೀರಿ. ಇದು ಬಹಳ ಅಗತ್ಯ.

ಹಾಗೆಯೇ ಕ್ಲಾಜು 26 ಕೂಡ ಬಹಳ ಸ್ವಾಗತಾರ್ಹ.

ಕ್ಲಾಜು 41ರಲ್ಲಿ, urgent workಗೆ ಯಾರನ್ನಾದರೂ ಉಪಯೋಗಿಸಿಕೊಂಡರೆ, ಅವನಿಗೆ ಶೇಕಡ 25ರಷ್ಟು ಜಾಸ್ತಿ ಕೊಡಬಹುದೆಂದು ಹೇಳಿದ್ದೀರಿ. ಇದು ತಡೆಯಲಾರದು ; ಇದನ್ನು ಶೇಕಡ 50 ಎಂದು ಮಾಡಿಕೊಂಡರೆ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ.

ಕ್ಲಾಜು 44ರಲ್ಲಿ 5 ರೂಪಾಯಿ ಮೇಂಟೆನೆನ್ಸ್ ಸೆಸ್ ಹಾಕಿರತಕ್ಕಂಥಾದ್ದು ಬಹಳ ಹೆಚ್ಚು. ನಾನು ಮೊದಲೇ ಹೇಳಿದ ಹಾಗೆ ಇದನ್ನು no loss, no profit basis ಮೇಲೆ ಏನಾದರೂ ಮಾಡುವುದು ಬಹಳ ಸೂಕ್ತ.

†ಶ್ರೀ ವೀರೇಂದ್ರ ಪಾಟೀಲ್.—ತಾವು ಎಷ್ಟು ಹಾಕಿದರೆ ಒಪ್ಪುತ್ತೀರ ? ಮೇಂಟೆನೆನ್ಸ್ ಮಾಡುವಾಗ ಚಾನಲ್ಸ್ ಮಾಡುವುದಕ್ಕೆ, ಸ್ಲೂಸಸ್, ಡ್ರೇನೇಜ್ ವರ್ಕ್ಸ್, ಪ್ರತಿಯೊಂದಕ್ಕೂ ಏನು ಖರ್ಚಾಗುತ್ತದೋ ಅಷ್ಟನ್ನೂ ರೈತ ವಹಿಸಿಕೊಳ್ಳಲಿ. ಈ ಪ್ರಿನ್ಸಿಪಲ್ ಒಪ್ಪಿಕೊಳ್ಳುವುದಾದರೆ ನಿಮ್ಮ ಸಲಹೆ ವೆಲ್‌ಕಂ ಮಾಡಬೇಕು.

ಶ್ರೀ ಬಿ. ಕೆ. ಪುಟ್ಟಯ್ಯ.—ನಿಮ್ಮ ಪಿ.ಡಬ್ಲ್ಯು.ಡಿ. ಡಿವಿಜನ್‌ನವರೇ ಇದನ್ನೂ ನೋಡಿಕೊಳ್ಳುತ್ತಾರೆ. ಇದಕ್ಕೋಸ್ಕರ additional establishment ಇಲ್ಲ ಎಂದು Financial Memorandumನಲ್ಲಿ ಹೇಳಿದ್ದೀರಿ. ಆದ್ದರಿಂದ additional expenditure ಏನೂ ಬರುವುದಿಲ್ಲ.

†ಶ್ರೀ ವೀರೇಂದ್ರ ಪಾಟೀಲ್.—ಸ್ಲೂಸಸ್ ಹೋದರೆ ರಿಪೇರಿ ಮಾಡುವುದು, ಟ್ಯಾಂಕಿನಲ್ಲಿ ಸಿಲ್ಟ್ ತುಂಬಿದರೆ ಡಿಸಿಲ್ಟ್ ಮಾಡುವುದು, ಸರಿಯಾಗಿ ಮೇಂಟೇನ್ ಮಾಡುವುದು, ಇವಕ್ಕೆ ಮೇಲಿಂದ ಮೇಲೆ ಖರ್ಚಾಗುತ್ತದೆ. ಆ ಖರ್ಚು ನೀವೇ ವಹಿಸಿಕೊಳ್ಳಿ. ಸೂಪರ್‌ವಿಶನ್ ಮತ್ತು ಎಸ್ಟಾಬ್ಲಿಶ್‌ಮೆಂಟ್ ಚಾರ್ಜಸ್ ಬೇರೆ. ಪ್ರತಿಯೊಂದು ಟ್ಯಾಂಕ್ ಕೆಳಗೆ, ಇರ್ರಿಗೇಶನ್ ಚಾನಲ್ ಕೆಳಗೆ, ಮಣ್ಣು ಮುಚ್ಚಿಹೋಗುತ್ತದೆ. ಇದರೆಲ್ಲದರ ಖರ್ಚು ಎಷ್ಟು ಆಗುತ್ತದೋ, ಅಷ್ಟು ರೈತರಮೇಲೆ ಹಾಕಲು ಒಪ್ಪುತ್ತೀರೋ ?

ಶ್ರೀ ಬಿ. ಕೆ. ಪುಟ್ಟಯ್ಯ.—ಸರಕಾರ ಇದುವರೆಗೆ ಹಾಗೆಯೇ ನೋಡಿಕೊಂಡು ಬಂದು, ಈಗ ಕೆಲವು ವರ್ಷಗಳಿಂದ ಒಂದು ಟ್ಯಾಕ್ಸ್ ಹಾಕಿ, ಮತ್ತೆ ಈಗ ಈ ಟ್ಯಾಕ್ಸ್ ಹಾಕುತ್ತೇವೆಂದರೆ ಯಾರೂ ಒಪ್ಪುವುದಿಲ್ಲ. ಹಿಂದೆ ತಾವು ಹಾಕಿದ ಟ್ಯಾಕ್ಸಿಗೆ ವಿವರಣೆ ಕೊಡದೆ ಕೈಎತ್ತಿಸಿಕೊಂಡು ಪಾಸು ಮಾಡಿಸಿಕೊಂಡಹಾಗೆ, ಇದನ್ನೂ ಮಾಡಬೇಕೆಂದಿದ್ದೀರಿ, ನಿಮ್ಮ ಆಡಳಿತ ಕಲಸುಮೇಲೋಗರ. Agricultural production ನಮ್ಮ ದೇಶದಲ್ಲಿ ಎಷ್ಟು, ಇಲ್ಲಿಯವರೆಗೂ ಅದರಿಂದ ಆದಾಯ ವೇನು ಎಂಬ ಬಗ್ಗೆ ಒಂದೂ ಸರಿಯಾದ ಅಂಕಿ ಅಂಶವಿಲ್ಲ. ಅಂತೂ ಒಟ್ಟಿನಲ್ಲಿ ವರ್ಷೇ ವರ್ಷೇ 5-6 ಕೋಟಿ ರೂಪಾಯಿ ಸುಂಕ ಜನಗಳಮೇಲೆ ಹೊರಿಸಿಕೊಂಡು ಹೋಗುತ್ತಾ ಇದ್ದೀರಿ. ಮೈಸೂರು ಸಂಸ್ಥಾನದ ಜನ ಬಲು ಮೂಕ ಜನ. ಎಷ್ಟು ಹೊರೆಯನ್ನಾದರೂ ಹೊರುತ್ತಾರೆ; ಅವರಲ್ಲಿ ಪ್ರತಿಭಟನಾಶಕ್ತಿ ಇಲ್ಲ. ಬೇರೆ ದೇಶಗಳಲ್ಲಾದರೆ, ಪ್ರತಿಭಟನೆ ಮಾಡಿ ಸರಕಾರವನ್ನು ಕೆಳಗೆ ಇಳಿಸುವರು. ಆ ಶಕ್ತಿ ಇಲ್ಲದೆ ಇರುವುದರಿಂದ ಎಷ್ಟಾದರೂ ನೊಂದುಕೊಂಡು ಹೊರುವ ಜನ; ಬಹಳ ಮರ್ಯಾದೆಯ ಜನ. ಅದರಿಂದ ನಿಮಗೆ ಕಷ್ಟಗಳು ಗೊತ್ತಾಗುತ್ತಾ ಇಲ್ಲ.

ಅಬ್ಬಬ್ಬಾ, ನಿಮ್ಮ ಪೆನಾಲ್ಟೀಸ್ ಮತ್ತು ಪನಿಷ್‌ಮೆಂಟ್ ಕ್ಲಾಜುಗಳನ್ನು ಯಾರಾದರೂ ನೋಡಿ ಕೊಂಡರೆ, ಹೆದರಿಹೋಗುತ್ತಾರೆ. ಒಂದು ಕ್ಲಾಜಿನ ಪ್ರಕಾರ ಒಂದು ವರ್ಷ ಕಠಿಣ ಸಜ, ಸಾವಿರ ರೂಪಾಯಿ ಜುಲ್ಮಾನೆ, ಇನ್ನೊಂದು ಸೆಕ್ಷನ್ ಪ್ರಕಾರ ಆರು ತಿಂಗಳು ಕಠಿಣ ಸಜ ಸಾವಿರ ರೂಪಾಯಿ ಜುಲ್ಮಾನೆ, 2 ತಿಂಗಳು ಸಜ, 500 ರೂಪಾಯಿ ಜುಲ್ಮಾನೆ. ಇದನ್ನೆಲ್ಲಾ ನೋಡಿದರೆ, ನೀವು ಪ್ರಜಾಪ್ರಭುತ್ವದಲ್ಲಿ ಇದ್ದೀರ ಅನ್ನುವುದನ್ನೇ ಮರೆತುಬಿಟ್ಟಿದ್ದೀರ ಅಂತ ಕಾಣುತ್ತೆ. ನೀವು ಅಧಿಕಾರಕ್ಕೆ ಬಂದನಂತರ ಜನಗಳಿಗೆ ಆಗಬಾರದ ಹಿಂಸೆ ಆಗಿದೆ. ಹಿಂದಿನ ಸರಕಾರದಲ್ಲಿ ಇರದಿದ್ದ ನೋವುಗಳನ್ನೂ ಕಷ್ಟಗಳನ್ನೂ ಕೊಡುತ್ತಿದ್ದೀರ. ದಯೆಯಿಟ್ಟು ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದು ಒತ್ತಾಯ ಮಾಡುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಇರಿಗೇಷನ್ ಬಿಲ್ ಮಾಡಬೇಕಾದುದರ ಆವಶ್ಯ ಕತೆ ಏನೋ ಬಹಳವಿತ್ತು. ತಾವು ಮಾಡುವಾಗ ಯಾವ ಯೋಜನೆಯನ್ನು ಕೈಕೊಂಡರೂ ರೈತನ ಉದ್ಧಾರಕ್ಕೆ, ರೈತನಿಗೋಸ್ಕರ ಎಂದು ಪ್ರತಿಯೊಂದು ತೆರಿಗೆಯನ್ನು ಹಾಕುವಾಗಲೂ ಹೇಳುತ್ತ ಬಂದಿದ್ದೀರಿ. ಪುನಃ ಈ ಮಸೂದೆಯಲ್ಲಿ ಕೂಡ betterment levy, ವಾಟರ್ ರೇಟ್, ರೈಲ್ವೆಸೆಸ್, ಎಲ್ಲ ಸೆಸ್ ರೈತನು ಕೊಡಬೇಕಾಗುತ್ತದೆಂದು ಗೊತ್ತಾಗುತ್ತದೆ. ಇದನ್ನೆಲ್ಲ ನೋಡಿದರೆ ನೀವು ಕೆರೆಗಳನ್ನು ಕಟ್ಟೆಗಳನ್ನು maintain ಮಾಡಲು ಏನು ಖರ್ಚು ಮಾಡುತ್ತೀರೋ ಅದಕ್ಕಿಂತ ಜಾಸ್ತಿ ಉತ್ಪತ್ತಿ ಬರುವ ರೀತಿ ಇದರಲ್ಲಿ ಕಾಣುತ್ತದೆ. ಇತರೆ ತೆರಿಗೆಗಳನ್ನು ಹಾಕಿದ್ದೀರಲ್ಲ, ಅದರಿಂದ ರೈತನಿಗೆ ಏನು ಪ್ರಯೋಜನ ಮಾಡಿಕೊಟ್ಟಹಾಗೆ ಆಯಿತು ಎಂದು ಅರ್ಥವಾಗುವುದಿಲ್ಲ.

ಶ್ರೀಮಾನ್ ರೇವಣಸಿದ್ದಯ್ಯನವರು ಹೇಳಿದರು: ತುಂಗಭದ್ರ ಪ್ರಾಜೆಕ್ಟಿನಲ್ಲಿ ಇನ್ನೂ cultivationಗೆ ಬರಬೇಕಾದ ಭೂಮಿ ಬಹಳ ಉಳಿದಿದೆ ಎಂದು. ಇದೇ ರೀತಿ ಇತರ ನೀರಾವರಿ ಯೋಜನೆಗಳಲ್ಲಿಯೂ ಉಳಿದಿದೆ ಎಂದು ಹೇಳಬಹುದು. ಮಾನ್ಯ ಮಂತ್ರಿಗಳು ಈಗ ಇಂಜಿನಿಯರಿಂಗ್ ಇಲಾಖೆಯ ಖಾತೆಯನ್ನು ಮಾತ್ರ ವಹಿಸಿಕೊಂಡಿದ್ದಾರೆ. ಮೊದಲು ದಿವಾನರು ಇದ್ದ ಕಾಲದಲ್ಲಿ ಒಬ್ಬರು 8-10 ಖಾತೆಗಳ ಕೆಲಸವನ್ನು ಸಲೀಸಾಗಿ ಮತ್ತು ಸುಲಲಿತವಾಗಿ ನಿರ್ವಹಿಸುತ್ತಿದ್ದರು. ಈಗ ಸಣ್ಣ ನೀರಾವರಿಗೆ ಒಬ್ಬರು, ರೋಡ್ಸ್ ಮತ್ತು ಬಿಲ್ಡಿಂಗ್ಸ್‌ಗೆ ಒಬ್ಬರು, ದೊಡ್ಡ ನೀರಾವರಿ ಕಾರ್ಯಗಳಿಗೆ ಒಬ್ಬರು, ಹೀಗೆ ಇದ್ದರೂ ಕೂಡ ಒಂದು ಅಣೆಕಟ್ಟು ಕಟ್ಟಿದಮೇಲೆ ಅದರ ಕೆಳಗೆ ಎಷ್ಟು ಅಚ್ಚುಕಟ್ಟು ಬರಬಹುದೋ ಅಷ್ಟಕ್ಕೆ ನೀರು ಇದ್ದರೂ ಕೂಡ ಅದನ್ನು ವ್ಯವಸಾಯಕ್ಕೆ ತರುವ ರೀತಿ ಯಲ್ಲಿ ಅಳವಡಿಸುವುದಕ್ಕೆ ನಿಮ್ಮಿಂದ ಸಾಧ್ಯವಾಗಲಿಲ್ಲ. ನೀವು ರೈತರು ತಕರಾರು ಮಾಡುತ್ತಿದ್ದಾರೆ, ನೀರು ಹೋಗುತ್ತಿದೆ ಎಂದು ಹೇಳುತ್ತೀರಿ.

Land Acquisition Actನ 17ರ ಪ್ರಕಾರ ಜಮೀನನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ನಿಮಗೆ ಆಗಿರತಕ್ಕ ಕಷ್ಟವೇನು? ಇವತ್ತು ಅನೇಕ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಿರುವ ಕಡೆಗಳಲ್ಲಿ ಹತ್ತು ಅಡಿ ಜಾಗಕ್ಕೆ, ನಾಲ್ಕು ಅಡಿ ಜಾಗಕ್ಕೆ ಯಾರೋ ತಕರಾರು ಮಾಡಿದರೆ, ಆ ಜಮೀನನ್ನು ಸರ್ಕಾರದವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲು ಆಗದೆ ಇದ್ದರೆ ಹೇಗೆ. ಇದರಿಂದ 50 ಸಾವಿರ ರೂಪಾಯಿ ಖರ್ಚು ಮಾಡಿರುವ ಕೆರೆಯ ನೀರನ್ನು ಒಬ್ಬ ರೈತನೂ ಉಪ ಯೋಗಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಇಂಥ ಸಂದರ್ಭಗಳಲ್ಲಿ ತಾವು ಇದನ್ನು ದೀರ್ಘ ವಾಗಿ ಯೋಚನೆ ಮಾಡದೆ ಇದುವರೆಗೂ ರೈತರಿಗೆ ತುಂಬ ಅನ್ಯಾಯ ಮಾಡಿದ್ದೀರಿ.

ಒಂದು ಎಕರೆಗೆ ಐದು ರೂಪಾಯಿ ಮೇಂಟೆನೆನ್ಸ್ ಸೆಸ್ ಹಾಕಬೇಕೆಂದು ಇದಕ್ಕೆ ಹೇಳಿದ್ದೀರಲ್ಲ. ಪ್ರತಿವರ್ಷ ಒಂದೊಂದು ಎಕರೆಗೆ ಐದು ರೂಪಾಯಿ ಪ್ರಕಾರ ವಸೂಲ್ಮಾಡಿದರೆ, ಆ ಕೆರೆಗೋಸ್ಕರ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಖರ್ಚು ಮಾಡಿರುವ ಹಣವೆಷ್ಟು, ಅದನ್ನು ರೈತರ ಕಡೆಯಿಂದ ಎಷ್ಟು ವರ್ಷ ವಸೂಲ್ಮಾಡುತ್ತೀರಿ ? ಕೆರೆಗಾಗಿ ಎಷ್ಟು ಹಣ ಖರ್ಚಾಗಿದೆಯೋ ಅಷ್ಟನ್ನು ಮಾತ್ರ ವಸೂಲ್ಮಾಡದೆ ಪ್ರತಿವರ್ಷವೂ ಐದೈದು ರೂಪಾಯಿ ಪ್ರಕಾರ ವಸೂಲ್ಮಾಡಿದರೆ ಜಾಸ್ತಿಯಾಗುವುದಿಲ್ಲವೇ ?

†ಶ್ರೀ ವೀರೇಂದ್ರ ಪಾಟೀಲ್.—ಒಂದು ಕಾಮುಗಾರಿಗೆ ಎಷ್ಟು ಖರ್ಚಾಗುತ್ತದೆಯೋ ಅಷ್ಟನ್ನು maintenance cess ಎಂದು ವಸೂಲ್ಮಾಡಲು ಮಾನ್ಯ ಸದಸ್ಯರು ಒಪ್ಪಿಕೊಂಡರೆ ಹೇಳಬಹುದು. ಎಕರೆಗೆ ಐದು ರೂಪಾಯಿ ಪ್ರಕಾರ ಸರ್ಕಾರ ಹೆಚ್ಚು ಲಾಭ ಪಡೆದುಕೊಳ್ಳುತ್ತದೆ, ಎಕರೆಗೆ ಒಂದೆರಡು ರೂಪಾಯಿ ಸಹಿತ ಬೀಳುವುದಿಲ್ಲವೆಂದರೆ ನನ್ನ ಉತ್ತರದಲ್ಲಿ ಅಂಕಿ ಅಂಶಗಳನ್ನು ಕೊಡುತ್ತೇನೆ. ಆದ್ದರಿಂದ ಏನು maintenance ಖರ್ಚು ಬೀಳುತ್ತದೆಯೋ ಅದನ್ನು ಕೊಡಬೇಕು ಎನ್ನುವಂಥ ತತ್ವವನ್ನು ಒಪ್ಪಿಕೊಂಡರೆ ಯಾವ ರೀತಿ ತೀರ್ಮಾನ ಮಾಡೋಣವೆಂದು ನಾವೂ ನೀವೂ ಕೂಡಿ ವಿಚಾರ ಮಾಡೋಣ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಷ್ಟು ಹಣ ಖರ್ಚಾಗುತ್ತದೆಯೋ ಅಷ್ಟು ಹಣ ಬೇಕಾದರೆ ವಸೂಲ್ಮಾಡಬಹುದು.

ಶ್ರೀ ಎಸ್. ಶಿವಪ್ಪ.—ಎಷ್ಟು ಖರ್ಚಾಗುತ್ತದೆಯೋ ಅಷ್ಟನ್ನೂ ಕಂದಾಯದ ರೂಪದಲ್ಲಿ ವಸೂಲ್ಮಾಡತಕ್ಕದ್ದಲ್ಲ ಸರ್ಕಾರದ ನೀತಿ. ಕಂದಾಯವನ್ನು ಸರ್ಕಾರಕ್ಕೆ ಕೊಡುತ್ತೇವೆ. ಅದನ್ನು ನಮಗೇ ಕೊಟ್ಟರೆ ನಾವೇ ಮಾಡಿಕೊಳ್ಳುತ್ತೇವೆ.

ಶ್ರೀ ವೀರೇಂದ್ರ ಪಾಟೀಲ್.—Maintenance ಸಲುವಾಗಿ ಸರ್ಕಾರ ಏನು ಖರ್ಚು ಮಾಡುತ್ತದೆಯೋ ಅದನ್ನು ರೈತರಿಂದ ತೆಗೆದುಕೊಳ್ಳಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ದೇಶದಲ್ಲಿರುವ 23 ಸಾವಿರ ಕೆರೆಗಳಲ್ಲಿ ಅರ್ಧಕ್ಕಿಂತ ಹೆಚ್ಚು ರಿಪೇರಿ ಮಾಡಬೇಕಾದ್ದು ಮತ್ತು ಉಪಯೋಗಕ್ಕೆ ಬಾರದ ಸ್ಥಿತಿಯಲ್ಲಿವೆ. ಎಷ್ಟು ಕೆರೆಗಳ ರಿಪೇರಿ ಆಗಬೇಕು, ಎಷ್ಟು ಲಕ್ಷ ರೂಪಾಯಿ ಖರ್ಚಾಗುತ್ತದೆ, ಎಷ್ಟು ಶೆರಿಗೆಯನ್ನು ಕೊಡಬೇಕಾಗುತ್ತದೆ ಎನ್ನುವುದನ್ನೆಲ್ಲ ಇದರಲ್ಲಿ ತೋರಿಸಬೇಕಾಗಿತ್ತು. ಅದೊಂದನ್ನು ಇದರಲ್ಲಿ ತೋರಿಸಿಲ್ಲ. ನಾವು ಏನು ಹೇಳಿದರೂ ನೀವು ಕೇಳುವುದಿಲ್ಲ. ನೀವು ಇದನ್ನು ಜಾರಿಗೆ ತೆಗೆದುಕೊಂಡು ಬಂದ ಮೇಲೆ ಇದರಲ್ಲಿ ಇಂಥ ತೊಂದರೆ ಇದೆ ಎಂದು ಮುಂದೆ ಬರುವ ಸದಸ್ಯರು ನಿಮಗೆ ಹೇಳಿದಾಗ, ನಿಮ್ಮ ಅನುಭವಕ್ಕೂ ಬಂದು ಅದಕ್ಕೆ ತಿದ್ದುಪಡಿ ಮಾಡುವಂಥ ಒಂದು ಕಾನೂನನ್ನು ತಂದು ಬದಲಾವಣೆ ಮಾಡಬಹುದು ಎನ್ನುವ ಭಾವನೆ ನಮಗೆ ಬಂದಿದೆ. ಮೂರು ಜನ ಈ ಖಾತೆಯನ್ನು ವಹಿಸಿ ಕೊಂಡಿದ್ದರೂ ಎಷ್ಟು ಕೆರೆಗಳಿವೆ, ಎಷ್ಟು ಹಣ ಖರ್ಚಾಗುತ್ತದೆ, ಎಷ್ಟು ಸೆಸ್ ಹಾಕಬೇಕು ಎಂದು ನೋಡಬಹುದಾಗಿತ್ತು. ಅಂಥ ಜವಾಬ್ದಾರಿಯನ್ನು ಹೊರುವುದಕ್ಕೆ ಸಾಧ್ಯವಿಲ್ಲದೆ ಇರುವಾಗ ತಾವು ಆಡಳಿತ ಹೇಗೆ ನಡೆಸುತ್ತೀರಿ ಎಂದು ಅನುಮಾನವಾಗುತ್ತದೆ. ತುಂಗಭದ್ರ ಪ್ರಾಜೆಕ್ಟಿನಲ್ಲಿ ಎಷ್ಟು ಕೆರೆ ಇನ್ನೂ ಸಾಗುವಳಿಗೆ ಬಂದಿಲ್ಲ ಎಂದು ಹೇಳುತ್ತೀರಾ ? ನೀವು ಎಷ್ಟು ಸಲ ಕೈಲಾಸಕ್ಕೆ, ವೈಕುಂಠಕ್ಕೆ ಹೋದಿರಿ ?............

ಶ್ರೀ ವೀರೇಂದ್ರ ಪಾಟೀಲ್.—ಕೈಲಾಸಕ್ಕೆ ಹೋಗಿದ್ದರೆ ತಿರುಗಿ ವಾಪಸು ಬರುತ್ತಿರಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೈಲಾಸಕ್ಕೆ ಹೋದಾಗಲೆಲ್ಲ ನೋಡಿ, ವೈಕುಂಠಕ್ಕೆ ಹೋದಾಗಲೆಲ್ಲ ನೋಡಿ ಮುಂದೆ ಯಾವ ಪದ್ಧತಿ ಹೊಂದಬಹುದು ಎಂದು ಯೋಚನೆಯಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ, ವೈಕುಂಠಕ್ಕೂ ಕೈಲಾಸಕ್ಕೂ ದಾರಿ ಎಲ್ಲಿದೆ ?

ಸಭಾಪತಿಯವರು.—'ಕೈಲಾಸ' ಮತ್ತು 'ವೈಕುಂಠ' ಗೆಸ್ಟ್ ಹೌಸ್ ವಿಚಾರವನ್ನು ಅವರು ಹೇಳುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಲ್ಲಿಗೆ ಹೋದ ಮೇಲೆ ಎಂಥೆಂಥ ವೈಭವಗಳಿವೆ, ಇಹಲೋಕ ಗಳಲ್ಲಿ ಮರೆಯುವಷ್ಟು ಸೌಲಭ್ಯಗಳಿವೆ. ಅಂಥ ಸೌಲಭ್ಯಗಳು ಎಲ್ಲಿಯೂ ಇಲ್ಲ. ಸ್ವರ್ಗಕ್ಕೆ ಸಮಾನ ವಾದ ಸಿದ್ಧತೆಗಳು ಅಲ್ಲಿ ಇವೆ. ಅಲ್ಲಿಗೆ ನೀರಾವರಿ ಜಾಸ್ತಿ ಮಾಡಬೇಕು, ನೀರಾವರಿ ವಿಷಯ ನೋಡ ಬೇಕು ಎಂದು ಹೋಗುವವರು, ಅದನ್ನೆಲ್ಲ ಮರೆಯುತ್ತಾರೆ, ಇಹಲೋಕವನ್ನು ಮರೆತು ಪರಲೋಕ ದಲ್ಲಿ ವಿಲೀನರಾಗುತ್ತಾರೆ.

ಸಣ್ಣಪುಟ್ಟ ಕೆರೆಗಳು, ಹತ್ತು ಎಕರೆಯೊಳಗೆ ಅಚ್ಚುಕಟ್ಟು ಇರುವ ಕೆರೆಗಳು ಇವುಗಳನ್ನು ತಾಲ್ಲೂಕು ಬೋರ್ಡಿನವರು ಮಾಡಬೇಕು, ಪಂಚಾಯಿತಿಯವರು ಮಾಡಬೇಕು ಎಂದು ಹೇಳುತ್ತಾರೆ. ಇದನ್ನೆಲ್ಲ ಯಾರೇ ಮಾಡಲಿ ರೈತನಿಗೆ ಅನುಕೂಲವಾಗುವಂಥ ಕೆಲಸಗಳು ಆಗಿವೆಯೋ ಇಲ್ಲವೋ ?

ಕೆಲಸ ಮುಗಿಯಿತೇ ಇಲ್ಲವೇ ಎನ್ನುವುದನ್ನು ನೋಡುವವರು ಯಾರು ? ನಮ್ಮ ತಾಲ್ಲೂಕಿನಲ್ಲಿರುವ ಕೆರೆಗಳ ರಿಪೇರಿಗಾಗಿ ತಾಲ್ಲೂಕು ಬೋರ್ಡಿಗೆ ಕೊಟ್ಟಿದ್ದರು. ಅವರು ಸಿಬ್ಬಂದಿ ಇಲ್ಲ blue-print ಇಲ್ಲ ಎಂದು ಅದನ್ನು ಖರ್ಚುಮಾಡಲಿಲ್ಲ.

ಸಣ್ಣ ನೀರಾವರಿ ಶಾಖೆಯ ಮಂತ್ರಿಗಳು ಈ ದೇಶದ ನೀರಾವರಿಯನ್ನೆಲ್ಲ ಇಷ್ಟರಲ್ಲಿಯೇ ಪೂರೈಸಿ ಬಿಟ್ಟು ಒಂದೇ ಸಮ ಮಾಡುತ್ತೇವೆಂದು ಅಲ್ಲಲ್ಲಿ ಭಾಷಣಗಳಲ್ಲಿ ಹೇಳಿದ್ದನ್ನು ಪತ್ರಿಕೆಗಳಲ್ಲಿ ನೋಡಿದ್ದೆ. ಯಾವಾಗ ಸಮ ಮಾಡುತ್ತಾರೆಂದು ನಮಗೆ ಅರ್ಥವಾಗುತ್ತಾ ಇಲ್ಲ. ಸಣ್ಣ ನೀರಾವರಿ ಮಂತ್ರಿಗಳು ಮೆಂಬರಾಗಿದ್ದಾಗ ಅನೇಕ ವಿಚಾರಗಳನ್ನು ಹೇಳುತ್ತಿದ್ದರು. ಅದನ್ನೆಲ್ಲ ಏಕೆ ಮರೆತುಬಿಟ್ಟರೋ ಗೊತ್ತಿಲ್ಲ. ಏನಾದರೂ ಒಂದು ಅರ್ಜಿಯನ್ನು ಕೊಟ್ಟರೆ ತಕ್ಷಣ ನಮ್ಮ ಎದುರಿಗೆ ಅದರ ಮೇಲೆ ಬರೆಯುತ್ತಾರೆ. ಆದರೆ ಅದು ಎಲ್ಲಿ ಹೋಯಿತು ಎನ್ನುವುದು ಗೊತ್ತಾಗುವುದೇ ಇಲ್ಲ ಏನು ಹೇಳಿದರೂ ಸಾವಧಾನದಿಂದ ಕೇಳುತ್ತಾರೆ. ಕೇಳುವುದಕ್ಕೆ ತಕ್ಕಂತೆ ಕಾರ್ಯಗತವಾಯಿತೇ ಎಂದು ನೋಡುವುದಕ್ಕೆ ಸಾಧ್ಯವಾಗಿಲ್ಲ. ಅವರು ಸ್ವಲ್ಪ ಬಿಗಿಯಾಗಬೇಕು ಎಂದು ನನಗನ್ನಿಸುತ್ತದೆ.

ನೀರಾವರಿ ವಿಷಯದಲ್ಲಿ ಹೆಚ್ಚು ತೆರಿಗೆ ರೈತನ ಮೇಲೆ ಹೊರಿಸುವ ಸರ್ಕಾರ ನಾನಾ ಬಾಬುಗಳಲ್ಲಿ ಹಾಕಿರುವ ನಾನಾ ವಿಧವಾದ ತೆರಿಗೆಗಳಲ್ಲಿ ನೂರಕ್ಕೆ ಎಂಬತ್ತು ಭಾಗ ರೈತರ ಮೇಲೆಯೇ ಬೀಳುತ್ತದೆ. ಆದರೆ ಇವರು ರೈತರಿಗೆ ಯಾವ ಸೌಲಭ್ಯವನ್ನು ಒದಗಿಸುತ್ತಾರೆ ? ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕಾದರೆ ಅದಕ್ಕೆ building grant ಕೊಡಲು local contribution ಬೇಕ ಎಂದು ಹೇಳುತ್ತಾರೆ, ವಿದ್ಯಾರ್ಥಿಗಳು ಓದಲು ಶಾಲಾ ಕಟ್ಟಡಗಳಿಲ್ಲ. ತೆರಿಗೆಗಳನ್ನು ಮಾತ್ರ ತೆಗೆದುಕೊಳ್ಳುತ್ತಾರೆ.

ಯುದ್ಧಕ್ಕೆ ಬೇಕಾದ ಪ್ರತಿಯೊಂದು ಸೌಲಭ್ಯವನ್ನು ಒದಗಿಸಿಕೊಳ್ಳಬೇಕಾದರೂ ಅದು ರೈತನ ಮುಖೇನ ಆಗಬೇಕ . ರೈತನು ಚೆನ್ನಾಗಿದ್ದರೆ ಅವನು ತನ್ನಿಂದ ಆಗುವ ಸಹಾಯವನ್ನು ಮಾಡುತ್ತಾನೆ. ಅನ್ನ ಮತ್ತು ವಸ್ತ್ರ ಒದಗಿಸಲು ದುಡಿಯುತ್ತಾನೆ. ಹೀಗಿರುವಾಗ ರೈತನ ಮೇಲೆ ಹೊರೆ ಬೀಳುವಂಥ ಪ್ರತಿಯೊಂದಕ್ಕೂ tax ಹಾಕುವುದು ತುಂಬ ಅನ್ಯಾಯವಾಗುತ್ತದೆ.

ಒಂದೊಂದು ಯೋಜನೆಯನ್ನು ಈಡೇರಿಸಬೇಕಾದರೆ ಹತ್ತಿಪ್ಪತ್ತು ವರ್ಷ ತೆಗೆದುಕೊಂಡರೆ ಅದರ ಅರ್ಥವೇನು ? ನಿಮ್ಮ ಇಲಾಖೆ ಏನು ಮಾಡುತ್ತಿದೆ ಎನ್ನುವುದನ್ನು ತಾವು ಸ್ವಲ್ಪ ನೋಡಬೇಕು. ಗೊರೂರು ಅಣೆಕಟ್ಟೆ ಇಂಥವು ನಮಗೆ ಹೊಸದಲ್ಲ. ನಮ್ಮ ಯಜಮಾನರ ಕಾಲದಿಂದ ಇದನ್ನು ಕೇಳುತ್ತಿದ್ದೇವೆ. ಈ ಅಣೆಕಟ್ಟನ್ನು ಬದಲಾಯಿಸುತ್ತೀರಿ. ಮತ್ತೊಂದನ್ನು ಮಾಡುತ್ತೀರಿ. ಈ ಮಂತ್ರಿಮಂಡಲ ಬಂತು, ಆ ಮಂತ್ರಿಮಂಡಲ ಹೋಯಿತು, ಇನ್ನೊಬ್ಬರು ಬಂದರು, ಜಾಗ ಬದಲಾಯಿಸಿದರು. ಮತ್ತೊಬ್ಬರು ಬಂದರು ಮತ್ತೊಂದು ಮಾಡಿದರು. ಅಷ್ಟರೊಳಗೆ ಅವರ ಜಾಗವೂ ಹೋಗಿರುತ್ತದೆ. ಹೊಸದಾಗಿ ಬರುವವರು ಹೊಸದಾಗಿ ಜಾಗ ಹುಡುಕಬೇಕು. ಹಾಗಾಗಬಾರದು. ನೀರಾವರಿ ವಿಷಯದಲ್ಲಿ ಧೈರ್ಯವಾಗಿ, ದಿಟ್ಟತನದ ತೀರ್ಮಾನ ತೆಗೆದುಕೊಳ್ಳಬೇಕು. ನೀವು ಯುವಕರಾಗಿದ್ದೀರಿ ಆದರೆ ಏಕೆ ಇಷ್ಟು weak ಆಗಿದ್ದೀರಿ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ.

ಸಣ್ಣ ಕೆರೆಗಳನ್ನು ತಾಲ್ಲೂಕು ಬೋರ್ಡಿಗೆ ವಹಿಸುತ್ತೇವೆಂದು ಹೇಳುತ್ತೀರಿ, ತಾಲ್ಲೂಕು ಬೋರ್ಡಿಗೆ ಕೊಡಬಾರದೆಂದಲ್ಲ. ಅಲ್ಲಿಗೆ ನಾನೇ ಬರಬಹುದು, ನೀವೇ ಬರಬಹುದು, ಯಾರಾದರೂ ಬರಬಹುದು. ಯಾವ ಏಜೆನ್ಸಿಗಾದರೂ ವಹಿಸಿ ಬಿಡಿ. ಆದರೆ P.W.D.ಯಿಂದ ಎಲ್ಲವನ್ನೂ ಸರಿ ಮಾಡಿಸಿ ಆಮೇಲೆ ಏನು ಬೇಕಾದರೂ ಮಾಡಿ. ನೀವು ಮಾಡಿರುವ ಉದ್ದೇಶ ನಮಗೆ ಚೆನ್ನಾಗಿ ಅರ್ಥವಾಗುತ್ತದೆ. ಶಂಖದಿಂದ ಬಿದ್ದರೆ ತೀರ್ಥ ಎನ್ನುವ ಹಾಗೆ ತಾಲ್ಲೂಕ್ ಬೋರ್ಡ್ ಈ ರೀತಿ ಖರ್ಚು ಮಾಡುತ್ತಿದೆ ಎಂದು ಹೇಳಿದರೆ ತಮ್ಮನ್ನು ಚುನಾಯಿಸಬಹುದು ಎಂದು ಭಾವಿಸಿರಬಹುದು. ಜನ ಬೇಡ ಎಂದು ಹೇಳಿದಾಗ, ಎಂಥ ಪ್ರವಾಹ ಹೊರಟರೂ ಕೂಡ ಯಾರು ಬರುವುದಕ್ಕೆ ಸಾಧ್ಯವಿಲ್ಲ.

ಅನೇಕ ಕಡೆ ಮೂರು ನಾಲ್ಕು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೂ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ನಿಮಗೆ ಕಷ್ಟವಾಗಿದೆ. ಆದುದರಿಂದ ನೀರಾವರಿ ವಿಷಯದಲ್ಲಿ ನೀವು ಕೈ ಹಾಕುವುದರಿಂದ ನಿಮಗೆ ಏನೇನೂ ಪ್ರಯೋಜನವಾಗುವುದಿಲ್ಲ. ಆ ದೃಷ್ಟಿಯಿಂದ ಜನರಿಗೆ ಉಪಕಾರವಾಗುವ ಕೆಲಸವನ್ನು ಮಾಡಿ ಒಳ್ಳೆಯ ಹೆಸರು ತೆಗೆದುಕೊಳ್ಳಿ ಎಂದು ನಾನು ಹೇಳುತ್ತೇನೆ. ಈ ವಿಷಯಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕಾಗಿ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ. ಎನ್. ಜಿ. ಓ.ಗಳು ಮತ್ತು ಇತರ ನೌಕರರುಗಳಿಂದ ನಿಮಗೆ ಸಂಬಳ ಜಾಸ್ತಿ ಕೊಡಿ ಎಂಬ ಬೇಡಿಕೆಗಳು ಬರುತ್ತವೆ, ರೈತನಿಗೆ ಉತ್ತೇಜನ ಕೊಟ್ಟು ಅವನು ಹೆಚ್ಚಿಗೆ ಆಹಾರ ಧಾನ್ಯವನ್ನು ಬೆಳೆದರೆ ಆಗ ಆ ಸಮಸ್ಯೆಯೇ ಇರುವುದಿಲ್ಲ. ಈಗ ಒಂದು ಉದಾಹರಣೆ ಕೊಡುವುದಾದರೆ ನೂರಕ್ಕೆ ನಲವತ್ತು ಜನ ವ್ಯವಸಾಯವನ್ನು ಬಿಟ್ಟು ನಿಮ್ಮ ಜವಾನಗಿರಿಗೆ ಬರುವುದಕ್ಕೆ ಸಿದ್ಧರಾಗಿದ್ದಾರೆ.

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಎಂದರೆ ವ್ಯವಸಾಯ ಜವಾನಗಿರಿಗಿಂತಲೂ ಕಡಿಮೆ ದರ್ಜೆ ಎಂದ ಹಾಗಾಯಿತು. ಸ್ವಾಮಿ, ಈಗ ನೋಡಿ ನಮ್ಮ ಪಬ್ಲಿಕ್ ವರ್ಕ್ಸ್ ಮಂತ್ರಿಗಳು ಇದ್ದಾರೆ ಯಾವುದಾದರೂ ಕೆಲಸ ಆಗಬೇಕಾದರೆ ನಮಗೆ ಸಿಬ್ಬಂದಿ ಇಲ್ಲ ಎಂದು ಹೇಳುತ್ತಾರೆ. ನನಗೆ ಸ್ವಲ್ಪ ಅನುಭವ ಇದೆ ಒಬ್ಬ ಇಂಜನಿಯರನ್ನು ವರ್ಗ ಮಾಡಿದರೆ ಅವನಿಗೆ ಇನ್ನೊಂದು ಜಾಗ ತೋರಿಸಬೇಕಾದರೆ ಕನಿಷ್ಟ ಪಕ್ಷ ನಾಲ್ಕು ತಿಂಗಳುಗಳಾದರೂ ಬೇಕಾಗುತ್ತದೆ. ಅವನು ಚೀಫ್ ಇಂಜನಿಯರ ಆಫೀಸಿಗೆ ಅಲ್ಲಿ ಸುತ್ತಿ ಇಲ್ಲಿ ಸುತ್ತಿ ಎಂ. ಎಲ್. ಎ.ಗಳಿಂದ ಹೇಳಿಸಿ ಯಾವುದಾದರೂ ಒಂದು ಜಾಗಕ್ಕೆ ಹಾಕಿಸಿಕೊಳ್ಳಬೇಕು. ಇದನ್ನು ದಯವಿಟ್ಟು ಅವರು ಸರಿಪಡಿಸಬೇಕೆಂದು ಹೇಳುತ್ತೇನೆ. 50 ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಯಾವುದೋ ಒಂದು ಜಾಗದಲ್ಲಿ ಕಟ್ಟುವುದರಿಂದ ನಮಗೆ ಬಂದ ಲಾಭವಾದರೂ ಏನು ? ಅನೇಕ ಊರುಗಳಲ್ಲಿ ಕೆರೆಗಳು ರಿಪೇರಿ ಆಗದೇ ಹಾಗೆಯೇ ಇವೆ, ಕೆರೆಯ ತೂಬು ಸೋರುವುದಕ್ಕೆ ಶುರುವಾಗಿ ತಿಂಗಳಾನುಗಟ್ಟಲೆ ಆದರೂ ಕೂಡ ಅದನ್ನು ಸರಿಮಾಡುವುದಿಲ್ಲ. ಈ ಸೌಲಭ್ಯಗಳನ್ನೆಲ್ಲಾ ಒದಗಿಸಿಕೊಟ್ಟ ಪಕ್ಷದಲ್ಲಿ ಹೆಚ್ಚು ಆಹಾರ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಆಗ ಈ ಇರಿಗೇಷನ್ ಬಿಲ್‌ನ ಪ್ರೊವಿಜನ್‌ಗಳೆಲ್ಲಾ ಜಾರಿಗೆ ಬಂದಂತೆಯೇ ಆಗುತ್ತದೆ, ಆ ರೀತಿ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಈ ಇರಿಗೇಷನ್ ಬಿಲ್ಲು ಬಹಳ ಹಿಂದೆಯೇ ಬರಬೇಕಾಗಿತ್ತು ಎಂದು ಹೇಳಬಯಸುತ್ತೇನೆ. ದೊಡ್ಡ ನೀರಾವರಿಯಾಗಿರತಕ್ಕ ವಿಶ್ವೇಶ್ವರಯ್ಯ ನಾಲೆ ಮತ್ತು ತುಂಗಭದ್ರಾ ಅಣೆಕಟ್ಟಿನ ಕೆಳಗೆ ಇರತಕ್ಕ ನಾಲೆಗಳಲ್ಲಿ ನೀರಿನ ವ್ಯವಸ್ಥೆ ಮಾಡಿದ್ದಾರೆ. ಬರ ಬರತಕ್ಕ ತಾಲ್ಲೂಕುಗಳಲ್ಲಿರತಕ್ಕ ಮೇಜರ್ ಮತ್ತು ಮೈನರ್ ಕೆರೆಗಳ ಕೆಳಗೆ ನಾವು ಅನುಭವಿಸುತ್ತಿರುವ ಕಷ್ಟ ಈಶ್ವರನಿಗೇ ಗೊತ್ತು. ಇದರಲ್ಲಿ ಡ್ಯೂಯಲ್ ಸಿಸ್ಟಂ ಆಫ್ ಅಡ್ಮಿನಿಸ್ಟ್ರೇಷನ್ ಇದೆ, ಕೆರೆ ಕಟ್ಟುವುದು ಇಂಜನಿಯರುಗಳು, ಕಟ್ಟಿ ಆದ ತಕ್ಷಣ ಅದರ ಆಗುಹೋಗುಗಳನ್ನು ನೋಡಿಕೊಳ್ಳತಕ್ಕವರು ರೆವಿನ್ಯೂ ಇಲಾಖೆಯವರು, ಈಗಾಗಲೇ ನಮ್ಮ ಸ್ನೇಹಿತರಾದ ಶ್ರೀಮಾನ್ ಬಸಪ್ಪನವರು ಹೇಳಿದ ಹಾಗೆ ಕೆರೆಗಳ ರಿಪೇರಿಯನ್ನು ರೆವಿನ್ಯೂ ಇಲಾಖೆಯವರು ಮಾಡಬೇಕೆಂದರೆ ಆ ಕೆಲಸಕ್ಕೆ ಆಗತಕ್ಕ ಖರ್ಚಿನ ಪಟ್ಟಿಯನ್ನು ತಯಾರು ಮಾಡಿ, ಡೆಪ್ಯೂಟಿ ಕಮೀಷನರ ಕೌಂಟರ್‌ಸಿಗ್ನೇಚರ್ ಆಗಿ ಇಷ್ಟೆಲ್ಲಾ ಆಗುವ ಹೊತ್ತಿಗೆ ದುಡ್ಡೇ ಇಲ್ಲ ಎಂದು ಹೇಳುವ ಪರಿಸ್ಥಿತಿ ಬರುತ್ತದೆ. ಇದರಲ್ಲಿ ಇರಿಗೇಷನ್ ಆಫೀಸರ್ಸ್ ಎಂದು ಯಾರನ್ನು ಗೊತ್ತು ಮಾಡುತ್ತೀರಿ ಅವರು ಇಂಜನಿಯರಿಂಗ್ ಇಲಾಖೆಯ ಅಧಿಕಾರಿಯೇ ಅಥವಾ ರೆವಿನ್ಯೂ ಇಲಾಖೆಯ ಅಧಿಕಾರಿಯೇ ಎಂಬುದನ್ನು ತಿಳಿಸಬೇಕು, ಇದು ಅನುಮಾನಕ್ಕೆ ಬಂದಿದೆ. ದಯವಿಟ್ಟು ಎರಡು ಆಡಳಿತ ಮಾತ್ರ ಮಾಡಬೇಡಿ. ಯಾರಿಗೆ ಕೆಲಸಗಳನ್ನು ಮಾಡಿಸಲಿಕ್ಕೆ ಶಕ್ತಿ ಇದೆಯೋ, ಯಾರು ಅಂದಾಜು ಮುಂತಾದುವುಗಳನ್ನು ಮಾಡಿ ಆ ಕೆಲಸಗಳನ್ನು ತೆಗೆದುಕೊಳ್ಳುತ್ತಾರೆಯೋ ಅವರಿಗೆ ಈ ಅಧಿಕಾರ ಇರತಕ್ಕದ್ದು ಸೂಕ್ತ. ಆದ್ದರಿಂದ ಇಂಜನಿಯರಿಂಗ್ ಇಲಾಖೆಗೇ ಈ ಅಧಿಕಾರವನ್ನು ಕೊಡಬೇಕೆಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈಗ ನಮ್ಮ ತಾಲ್ಲೂಕಿನಲ್ಲಿ ನೂರಾರು ವರ್ಷಗಳಿಂದ ಇರತಕ್ಕ ಒಂದೆರಡು ಕೆರೆಗಳಿವೆ. ಈ ಪೈಕಿ ಒಂದು ಕೆರೆಗೆ 900 ವರ್ಷ ವಯಸ್ಸಾಗಿದೆ ಎಂದು ಹೇಳುತ್ತಾರೆ. ಏರಿ ಒಂದು ಮುಂಕರಿ ಮಣ್ಣನ್ನೂ ಕೂಡ ನೋಡಿಲ್ಲ. ಆದರೆ ಇಲ್ಲಿಯವರೆಗೂ ಅಲ್ಲಿ ಮೀನು ಹಿಡಿಯತಕ್ಕವರು ಆ ಕೆರೆ ಏರಿಯ ಮಣ್ಣು ಕಾಂಗಾರಿಯನ್ನು ಮಾಡುತ್ತಿದ್ದರು. ಅದರ ಇತ್ತೀಚೆಗೆ ಅದು ತಪ್ಪಿಹೋಗಿದೆ. ಎಲ್ಲಿಯೋ ಇರತಕ್ಕ ಯಾರೋ ಒಬ್ಬ ಅಧಿಕಾರಿ ಲೈಸೆನ್ಸ್ ಕೊಡುತ್ತಾನೆ. ಅವರು ಬಂದು ಅಲ್ಲಿ ಮೀನು ಹಿಡಿದುಕೊಂಡು ಹೋಗುತ್ತಿದ್ದಾರೆ. ಆದುದರಿಂದ ಅಲ್ಲಿ ಈಗ ರೈತರು ಈ ಕೆರೆ ರಿಪೇರಿ ಕೆಲಸವನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಸಲಹೆ ಮಾಡುವುದೇನೆಂದರೆ: ಅಲ್ಲಿ ಮೀನುಗಾರಿಕೆಯಿಂದ ವಸೂಲಾಗತಕ್ಕ ಹಣವೇನಿದೆ ಅದನ್ನು ಈ ಕೆರೆ ರಿಪೇರಿಗಾಗಿ ಮೀಸಲಾಗಿಡಬೇಕು. ಆರೀತಿ ಒಂದು ಕಡ್ಡಾಯವಾದ ನೇಮವನ್ನು ಮಾಡಬೇಕೆಂದು ಸಲಹೆಮಾಡುತ್ತೇನೆ. ಹಿಂದಿನ ಕಾಲದಲ್ಲಿ ಈ ಏರಿಗಳ ರಿಪೇರಿಯನ್ನು ಆ ಏರಿಗಳಮೇಲೆ ಬೆಳೆಯುತ್ತಿದ್ದ ಹುಲ್ಲನ್ನು ಹರಾಜುಮಾಡಿ ಅದರಿಂದ ಬರುತ್ತಿದ್ದ ಹಣದಿಂದಲೂ ಮತ್ತು ಈ ಮೀನುಗಾರಿಕೆಯಿಂದಲೂ ಬರುತಿದ್ದ ಹಣದಿಂದ ಈ ಕೆಲಸವನ್ನು ನಡೆಸುತ್ತಿದ್ದರು.

5-30 P.M.

ಇನ್ನು ಈ ಹಿಂದೆ ಮಾತನಾಡುತ್ತಿದ್ದ ಶ್ರೀ ರೇವಣಸಿದ್ದಯ್ಯನವರು ಒಂದು ಮಾತನ್ನು ಹೇಳಿದರು. ಅದು ಬಹಳ ಸಾಧುವಾಗಿದೆ. ಅದೇನೆಂದರೆ ಸರ್ಕಾರದವರಿಗೆ ಅಗತ್ಯವಾಗಿ ಬೇಕಾದಂಥ

ಭಾವಲ್ಲಿನ ಹಾಗೂ ಇನ್ನಿತರ ಹಿಕರ್‌ಗಳನ್ನು ತೆಗೆಯುವುದಕ್ಕೆ ಬೇಕಾದ ಜಮೀನನ್ನು ಮೊದಲು ಅಕ್ವೈರ್ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ; ಇದು ಬಹಳ ಸಾಧುವಾದ ಅಭಿಪ್ರಾಯ. ಇಂಥ ಅಗತ್ಯವಾಗಿ ಬೇಕಾಗಿರತಕ್ಕ ಜಮೀನನ್ನು ಸರ್ಕಾರದವರ ಸ್ವಾಧೀನ ಇಟ್ಟುಕೊಳ್ಳುವುದು ಬಹಳ ಅತ್ಯಗತ್ಯ. ಇಲ್ಲದೇ ಹೋದರೆ ಇತರರಿಗೆ ಅನುಕೂಲವಾಗಬಾರದೆಂಬ ದುರುದ್ದೇಶದಿಂದ ಅನೇಕ ತೊಂದರೆಗಳನ್ನು ತಂದೊಡ್ಡುತ್ತಾರೆ ಅವಕ್ಕೆ ಅವಕಾಶಕೊಡಬಾರದು ಎಂದು ಹೇಳುತ್ತೇನೆ. ಇಂಥಾ ಜನೋಪಯುಕ್ತವಾದ ಕೆಲಸಗಳಿಗೆ ಯಾರಿಂದಲೂ ಅಡ್ಡಿ ಬರಬಾರದು. ಇದಕ್ಕೆ ಅಗತ್ಯವಾಗಿ ಬೇಕಾದ ಕಲಂಅನ್ನು ಕಾನೂನಿನಲ್ಲಿ ಅಳವಡಿಸಬೇಕೆಂದು ಹೇಳುತ್ತೇನೆ. ಇಲ್ಲವಾದರೆ ಮುಂದೆ ಬಹಳ ತೊಂದರೆಗಳಾಗಬಹುದು.

ಸರ್ಕಾರದವರು ಪ್ರಪ್ರಥಮವಾಗಿ ಕೆರೆ, ಅಣೆಕಟ್ಟು ಇತ್ಯಾದಿಗಳನ್ನು ಕಟ್ಟತಕ್ಕ ಕಾಲದಲ್ಲಿ ಮೊದಲೇ ಒಂದು ಯೋಜನೆಯನ್ನು ಹಾಕಿಕೊಂಡು ಒಂದು ಕೆರೆಯನ್ನು ಕಟ್ಟಿದರೆ ಅದಕ್ಕೆ ಎಷ್ಟು ಅಚ್ಚುಕಟ್ಟಿರಬೇಕು, ಅದರಲ್ಲಿ ಎಷ್ಟು ನೀರು ಇರುತ್ತದೆ, ಎಂಬುದನ್ನು ಮೊದಲೇ ನಿರ್ಧರಿಸಬೇಕು. ಇಂಥಾ ಒಂದು ವ್ಯವಸ್ಥೆ ಇಲ್ಲದಿದ್ದರೆ ಮುಂದೆ ಬಹಳ ತೊಂದರೆ ಬರುತ್ತದೆ. ಈ ದಿವಸ ನಮ್ಮ ತಾಲ್ಲೂಕಿನಲ್ಲಿ ಒಂದು ಕೆರೆ ಇದೆ, ಅದಕ್ಕೆ ಪ್ರಥಮದಲ್ಲಿ 100 ಎಕರೆ ಮಾತ್ರ ಅಚ್ಚುಕಟ್ಟಿತ್ತು. ಈ ದಿವಸ ಯಾರು ಬೇಕಾದರೂ ಬರಲಿ, ನಾನು ತೋರಿಸುತ್ತೇನೆ. ಆ ಕೆರೆ ಕೆಳಗೆ ಈಗ 300 ಎಕರೆ ಭೂಮಿ ಸಾಗುವಳಿಯಾಗುತ್ತಿದೆ. ಮೊನ್ನೆ ತಾನೆ ಉಪಮಂತ್ರಿಗಳಾದ ಆಲೂರು ಹನುಮಂತಪ್ಪನವರೂ ನಾನೂ ಒಂದು ಕೆರೆಯನ್ನು ನೋಡಿದೆವು. ಅದರ ಅಚ್ಚುಕಟ್ಟೆಲ್ಲಾ 230 ಎಕರೆಗಳಿದ್ದರೆ ಹಾಲಿ ಆ ಕೆರೆಯ ಕೆಳಗೆ, ಇಂದು 530 ಎಕರೆ ಸಾಗುವಳಿಯಾಗುತ್ತಿದೆ. ಹೀಗೆ ಕ್ಲುಪ್ತವಾದ ಕೆಪ್ಯಾಸಿಟಿಗಿಂತ ಅಚ್ಚುಕಟ್ಟನ್ನು ಜಾಸ್ತಿ ಮಾಡುವುದರಿಂದ ಮಳೆಗೆ ಅಭಾವವಿರುವ ಪ್ರದೇಶವಲ್ಲಿರತಕ್ಕ ಪ್ರದೇಶದಲ್ಲಿ ಪ್ರೈಪೋಟಿ ಮೇಲೆ ಬೇಸಾಯಗಳನ್ನು ಮಾಡಿ ಎಲ್ಲರೂ ಬೆಳೆಗಳನ್ನು ಕಳೆದುಕೊಳ್ಳುತ್ತಾರೆ. ಅತ್ತ ರೈತನಿಗೂ ಪ್ರಯೋಜನವಿಲ್ಲ, ಇತ್ತ ಸರ್ಕಾರದವರಿಗೂ ಪ್ರಯೋಜನವಿಲ್ಲ ಹೀಗಾಗಬಾರದು. ಕೆಲವರು ನೀರಿನ ಹಕ್ಕು ಇಲ್ಲದಿದ್ದರೂ ಬಗರ್ ಹುಕುಂನಿಂದ ನೀರನ್ನು ಬಳಸಿಬಿಡುತ್ತಾರೆ. ಅಂಥವರಿಗೆ ಮೊದಲು ಟಿ.ಟಿ. ಕೊಡುತ್ತಾರೆ. ಹಾಗೆ 2-3 ವರ್ಷ ಟಿ.ಟಿ. ಕೊಟ್ಟನಂತರ ಅವರಿಗೆ ಒಂದು ಹಕ್ಕುಂಟಾಗಿ ಕೊನೆಗೆ ಅವರ ಭೂಮಿ ಸಹ ನೀರಾವರಿಯಾಗುವ ಸಂಭವಗಳಿವೆ. ಇದರಿಂದ ಕಡೆ ಸರಹದ್ದಿನ ಭೂಮಿಗಳಿಗೆ ನೀರು ದೊರೆಯದೆ ಅವರಿಗೆ ತುಂಬಾ ತೊಂದರೆಯಾಗುತ್ತದೆ. ಅದರಿಂದ ಒಂದು ಸಾರ್ತಿ ಅಚ್ಚುಕಟ್ಟನ್ನು ನಿರ್ಧರಮಾಡಿದ ಮೇಲೆ ಅದನ್ನು ಮತ್ತೆ ಬದಲಾಯಿಸಬಾರದು. ಇಂಥ ಸಂದರ್ಭದಲ್ಲಿ ಕಾನೂನು ಭಂಗಮಾಡತಕ್ಕವರಿಗೆ ಕ್ರೂರವಾದ ಶಿಕ್ಷೆ ವಿಧಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ ನಮ್ಮಲ್ಲಿ ಒಂದು ಬೆಳೆಗೆ ಸಹಾ ನೀರು ಸಿಕ್ಕುವುದು ದುರ್ಲಭವಾಗಿರುವಾಗ ಕಲವು ಅಂಥಾ ಕೆರೆಗಳಿವೆ, ಈ ದಿವಸ ಕುಡಿಯುವುದಕ್ಕೆ ನೀರಿಲ್ಲ ಎಂದು ಹೇಳುತ್ತಿರುವಾಗ ಆ ಮಾರನೇ ಬೆಳಗ್ಗೆಯೇ ಮಳೆಹೊಯ್ದು ಒಂದೇ ದಿನದಲ್ಲಿ ಕೆರೆಗಳೆಲ್ಲಾ ತುಂಬಿ ಬಿಡುತ್ತವೆ. ಆದರೆ ಆ ಕೆರೆಯ ಅಚ್ಚುಕಟ್ಟಿಗೆ ಸಾಕಾಗುವಷ್ಟು ನೀರು ಆ ಕೆರೆಯಲ್ಲಿರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಜನರು ಈ ಭತ್ತದ ಮೇಲಿನ ವ್ಯಾಮೋಹದಿಂದ ಎಲ್ಲರೂ ಬೆಳೆಯಿಟ್ಟು ಎಲ್ಲರೂ ಅವನ್ನು ಕಳೆದುಕೊಳ್ಳುತ್ತಾರೆ. ಯಾರಿಗೂ ಬೆಳೆ ಕೈಸೇರುವುದಿಲ್ಲ. ಆ ದೃಶ್ಯವನ್ನು ನೋಡಿದರೆ ನಮಗೂ ಬಹಳ ಸಂಕಟವಾಗುತ್ತದೆ. ಇಂಥಾ ಒಂದು ನಿದರ್ಶನವನ್ನು ನಾವು ಕಣ್ಣಾರ ನೋಡಿದೆವು. ನಾವು ಅವರಿಗೆ ಇದು ಅಕಾಲ ಭತ್ತ ಹಾಕಬೇಡಿ ಎಂದು ಎಷ್ಟೋ ಹೇಳಿದೆವು. ಆದರೂ ಅವರು ಭತ್ತದ ಮೇಲಿನ ವ್ಯಾಮೋಹದಿಂದ ಭತ್ತ ಹಾಕಿಬಿಟ್ಟರು. ಈಗ ಅದೆಲ್ಲಾ ಹುಳ ಬಿದ್ದು ಸುಮಾರು 500 ಎಕರೆಗಳಲ್ಲಿ ಬೆಳೆ ಸಂಪೂರ್ಣವಾಗಿ ನಿರ್ನಾಮವಾಗಿದೆ. ಆದುದರಿಂದ ಯಾವ ಯಾವ ಕಾಲದಲ್ಲಿ ಯಾವ ಯಾವ ಬೆಳೆಯನ್ನು ಇಡಬೇಕು ಎಂಬ ಬಗ್ಗೆ ತಿಳಿವಳಿಕೆಯನ್ನು ಕೊಡಬೇಕಾದ್ದು ಅವಶ್ಯಕ. ಈ ಇಷ್ಟಬಂದ ಬೆಳೆಯನ್ನು ಇಡತಕ್ಕ ಅಧಿಕಾರವನ್ನು ರೈತರಿಗೆ ಬಿಡಬಾರದೆಂದು ಹೇಳುತ್ತೇನೆ. ಇದಕ್ಕಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ವ್ಯವಸಾಯದ ತಜ್ಞರನ್ನು ಹಾಗೂ ಇಂಜಿನಿಯರಿಂಗ್ ಇಲಾಖೆಯ ಅಧಿಕಾರಿಗಳನ್ನು ಇಟ್ಟು ರೈತರಿಗೆ ಸೂಕ್ತ ತಿಳುವಳಿಕೆ ಕೊಡಬೇಕಾದ್ದು ಅತ್ಯಗತ್ಯ. ಇದನ್ನು ಸರ್ಕಾರದವರು ಕಡ್ಡಾಯವಾಗಿ ಜಾರಿಗೆ ತರಬೇಕು. ಇಲ್ಲದಿದ್ದರೆ ತೊಂದರೆಯಾಗುತ್ತದೆ.

ಇನ್ನು ವಾಟರ್ ರೇಟನ್ನು ಹಾಕುವಾಗ್ಗೆ ರೂಪಾಯಿಗಳನ್ನು ಉಸ್ತುವಾರಿ ಬಗ್ಗೆ ಮತ್ತು ಇದನ್ನೆಲ್ಲಾ ನೋಡಿಕೊಳ್ಳತಕ್ಕ ಬಗ್ಗೆ ಹಾಕುತ್ತೇವೆಂದು ಹೇಳಿದ್ದಾರೆ. ಆದರೆ ಈ ಮೊಬಲಗು ಜಾಸ್ತಿಯಾದಾಗ್ಗೂ ಇದರ ಬಗ್ಗೆ ಬರತಕ್ಕ ಖರ್ಚುವೆಚ್ಚಗಳನ್ನೆಲ್ಲಾ ಆ ಚ್ಯಾನಲಿನಲ್ಲಿರತಕ್ಕ ಜಮೀನುಗಳ ಮೇಲೆಲ್ಲಾ ಹಾಕಬೇಕಾದ್ದು ನ್ಯಾಯ. ಇದರಲ್ಲಿ ರೈತರೇ ಮಾಡಿಕೊಳ್ಳಬೇಕಾದ ಕೆಲವು ಕೆಲಸಗಳೂ ಇರುತ್ತವೆ. ಸಣ್ಣ ಪುಟ್ಟ ನಾಲೆಗಳಲ್ಲಿ ಹೂಳು ತೆಗೆಯುವುದು ಇತ್ಯಾದಿ ಕೆಲಸಗಳನ್ನೆಲ್ಲಾ ರೈತರೇ ಮಾಡಬೇಕು. ಆದರೆ ಈ ದಿವಸ ಅತ ಮಾಡುತ್ತಿಲ್ಲ. ನೀರನ್ನೂ ಸಹಾ ಅವನು ಸರಿಯಾಗಿ

(ಶ್ರೀ ಟಿ. ಎಚ್. ಮಾದಪ್ಪಗೌಡ)

ಹಿಡಿತವಾಗಿ ಉಪಯೋಗಿಸುತ್ತಿಲ್ಲ. ತನ್ನ ಜಮೀನಿನಲ್ಲಿ 24 ಗಂಟೆಯೂ ನೀರಿರಬೇಕೆಂದು ನೀರನ್ನು ವೃಥಾ ಹಾಳುಮಾಡುತ್ತಾರೆ. ಮೊತಬಾಯಿಗಳನ್ನು ಸರಿಯಾಗಿ ಕಟ್ಟುವುದಿಲ್ಲ. ನಳ್ಳಿ ಮತ್ತು ಇಲಿಗಳು ಬಗಾವಾತಿ ನೀರು ಸರಾ ಹಳ್ಳಕ್ಕೆ ಬಿದ್ದು ಹೋಗುತ್ತಿರುತ್ತದೆ. ಹೀಗಾಗಿ ಕಡೆ ಸರಹದ್ದಿನ ರೈತನಿಗೆ ನೀರೇ ಸಿಕ್ಕುವುದಿಲ್ಲ. ಈ ವಿಚಾರದಲ್ಲಿ ಬರುವ ತಕ್ಸೀರಿಗೆ 6 ತಿಂಗಳು ಸಜಾ ಮತ್ತು ಜುಲ್ಮಾನೆ ಎಂದು ಹೇಳಿದ್ದಾರೆ. ಇದಕ್ಕೆ ಮೂರುಪಟ್ಟು ಜಾಸ್ತಿಮಾಡಿದರೂ ನನಗೆ ಬಹಳ ಸಂತೋಷ. ಇಂಥಾ ಪೋಕರೀ ಜನರಿಗೆ ನಾವು ಕಾನೂನಿನ ಸಡಿಲ ತೋರಿಸಬಾರದು. ಅವರಿಗೆ ಉಗ್ರವಾದ ಶಿಕ್ಷೆ ವಿಧಿಸಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಯಾರೂ ಮರುಕ ತೋರಿಸಬಾರದು.

ಇನ್ನು ನೀರಾವರಿಗಾಗಿ ಬಾವಿಗಳನ್ನು ಕೊಡುವುದರ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಬಾವಿಗಳನ್ನು ತೆಗೆಯದೇ ಹೋದರೆ, ಬೈಲು ಇರುವ ಕಡೆಗಳಲ್ಲಿ ಎಂದರೆ ಬೆಂಗಾಡಾಗಿರುವಂತಹ ನಮ್ಮ ಪ್ರದೇಶದಲ್ಲಿ ನೀರಿನ ಸಹಾಯ ಸಿಗುವುದಿಲ್ಲ. ಅನೇಕ ಸಾರಿ ಕೆರೆಗಳಲ್ಲಿ ನೀರು ನಿಗದಿಯಾಗಿರುವುದಿಲ್ಲ. ಆದುದರಿಂದ ಸೂಕ್ತ ಕಂಡ ಕಡೆ ಬಾವಿ ತೆಗೆಯುವುದಕ್ಕೆ ಅವಕಾಶ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮತ್ತೆ ಅನೇಕ ಸಾರಿ ಹೆಚ್ಚು ಮಳೆ ಬಂದ ಸಂದರ್ಭದಲ್ಲಿ ನಾವೇ ಕಣ್ಣಾರೆ ನೋಡಿರುತ್ತೇವೆ. ಕೆರೆ ಕೋಡಿ ಮೇಲೆ ನೀರು ಹರಿದು ಕೆರೆಗೆ ಅಪಾಯ ಬಂದು ಹಾಳಾಗಿ ಹೋಗುತ್ತಿರುವ ಸಮಯದಲ್ಲಿ ಅಲ್ಲಿರುವ ಹಳ್ಳಿಯ ಜನ ನಿಂತು ನೋಡುವುದಕ್ಕೆ ಬದಲಾಗಿ ಅರ್ಧಗಂಟೆ ಸ್ವಲ್ಪ ಕಷ್ಟಪಟ್ಟರೆ ಲಕ್ಷಾಂತರ ರೂಪಾಯಿಗಳ ಬೆಲೆಯುಳ್ಳ ಕೆರೆಯನ್ನುಳಿಸಲು ಶಕಷ್ಟು ಶಕ್ತಿಯೂ ಇರುತ್ತದೆ, ಆದರೆ ಈಗೇನಾಗುತ್ತಿದೆ ಎಂದರೆ ಯಾವುದಾದರೂ ಕೆರೆ ಒಡೆದು ಹೋದರೆ ಇಪ್ಪತ್ತು ಮೈಲಿ ದೂರದಲ್ಲಿರುವ ಇಂಜಿನೀರನ್ನು ಹುಡುಕಿಕೊಂಡು ಹೋಗುವ ಪದ್ಧತಿ ಮತ್ತು ಈ ಕೆಲಸ ಸರಕಾರ ಮಾಡಲಿ ಎಂಬ ಒಂದು ಮನೋಭಾವನೆ ನಮ್ಮಲ್ಲಿ ಬೆಳೆಯುತ್ತ ಬಂದಿದೆ. ಇದರಿಂದ ಹತ್ತಾರು ದೊಡ್ಡ ದೊಡ್ಡ ಕೆರೆಗಳು ನಾಶಗಳು ಹಾಳಾಗಿ ಹೋಗುತ್ತಿರುವುದನ್ನು ಕಣ್ಣಾರೆ ನೋಡುತ್ತಿರುತ್ತೇವೆ. ತಾವು ಅಲ್ಲಿ ಕೆಲಸ ಮಾಡತಕ್ಕವರಿಗೆ ಯೋಗ್ಯತೆ ಇರುವವರನ್ನು ಬಲವಂತದಿಂದ ಅವರಿಂದ ಕೆಲಸಗಳನ್ನು ತೆಗೆದುಕೊಳ್ಳಲು ಬಲವಂತ ಮಾಡುವುದು ಅವಶ್ಯಕ. ನಿನ್ನೆ ದಿನ ಮಾನ್ಯ ಮಂತ್ರಿಗಳು ಈ ಬಿಲ್ಲನ್ನು ಈ ಸಭೆಯ ಮುಂದೆ ಇಟ್ಟಾಗ ನರೆಯ ವಿಚಾರವಾಗಿ ಹೇಳುತ್ತಾ ಯಾರಾದರೂ ಹಗಲು ಕೆಲಸಮಾಡಿದರೆ 25 ಪರ್ಸೆಂಟ್ ಜಾಸ್ತಿ ಕೂಲಿ, ರಾತ್ರಿ ಕೆಲಸ ಮಾಡಿದರೆ ಸೆಂಟು ಪರ್ಸೆಂಟ್ ಕೂಲಿ ಜಾಸ್ತಿಯಾಗಿ ಸೇರಿಸಿ ಕೊಡುತ್ತೇವೆಂದು ಹೇಳಿರುವುದರಿಂದ ಕೆಲಸಮಾಡಲು ಇಲ್ಲಿ ಕಷ್ಟವೇನೂ ಇರುವುದಿಲ್ಲ. ಕಷ್ಟಪಟ್ಟವರಿಗೆ ಕೂಲಿ ಸಿಕ್ಕೇ ಸಿಗುತ್ತದೆ. ಇದರಿಂದ ಕೆಲಸಗಳೂ ಬೇಗ ಆಗುತ್ತವೆ. ಇದು ಸರಿಯಾದ ಕ್ರಮ ಎಂದು ನನಗೆ ಕಾಣಿಸುತ್ತದೆ.

ಇನ್ನೊಂದು ಇವರು ಈ ಬಿಲ್ಲಿನಲ್ಲಿ ಹೇಳಿದ್ದಾರೆ. ಅದು ಪಂಚಾಯಿತಿಗಳಿಗೆ ತಾಲ್ಲೂಕು ಬೋರ್ಡುಗಳಿಗೆ ಕೆರೆ ಕಟ್ಟೆಗಳ ಕೆಲಸವನ್ನೆಲ್ಲಾ ವಹಿಸುವುದಾದರೆ ಬರೀ ಭ್ರಮೆಯಾಗುತ್ತದೆ. ಇದರ ಅಧಿಕಾರ ಸರಕಾರದ ಕೈಯಲ್ಲಿದ್ದರೆ, ಕೆಲವು ವೇಳೆ ಕೆಲಸ ಮಾಡುವುದು ಕಷ್ಟ ಎಂದು ಮಾಡುವುದರಿಂದ ಬರೀ ಒಂದು ಭ್ರಾಂತಿಗಾಗಿ ಈ ಟ್ಯಾಂಕುಗಳ, ಥಾನಲ್ಲುಗಳ ಕೆಲಸಗಳನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸಿಕೊಡುವುದು ಸರಿಯಲ್ಲ ಎಂದು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಬೆಳೆ ತೆಗೆಯುವ ಕಾಲಕ್ಕೆ ಇರಿಗೇಷನ್ನು ಆಫೀಸರು ಎಂದು ಯಾರು ಬರುತ್ತಾರೋ ಅವರ ತೀರ್ಮಾನಕ್ಕೆ ಬಿಟ್ಟರೆ ಅವರಿಗೆ ಯಾವ ಬೆಳೆ ಬರುತ್ತದೆ ಎನ್ನುವುದು ಚೆನ್ನಾಗಿ ತಿಳಿದಿರುವುದಿಲ್ಲ. ಅವರ ಜೊತೆಯಲ್ಲಿ ಅಲ್ಲಿರುವ ತಾಲ್ಲೂಕು ಬೋರ್ಡಿನ ರೈತರು ಮತ್ತು ಆಯಾ ತಾಲ್ಲೂಕಿನಲ್ಲಿರುವ ಅಗ್ರಿಕಲ್ಚರಲ್ ಎಕ್ಸ್‌ಟೆನ್ಷನ್ನು ಆಫೀಸರು ಇವರುಗಳೂ ಇದ್ದರೆ ಅವರು ಎಲ್ಲಿ ಯಾವ ಮಳೆ ಬರುತ್ತದೆ ಅಲ್ಲಿ ಇಂತಿಂಥಹ ಬಿತ್ತನೆ ಬೀಜಗಳನ್ನು ಮಾಡಿ ಇಂತಹ ಬೆಳೆ ಮಾಡಬೇಕೆಂದು ಸಲಹೆ ಕೊಡಲು ಅನುಕೂಲವಾಗುತ್ತದೆ. ಎಲ್ಲಿಯಾದರೂ ಕೆರೆ ನೀರು ಇಲ್ಲದೆ ಹೋದರೆ ಅಲ್ಲಿಗೆ ನೀರನ್ನು ಕೊಡುವ ವ್ಯವಸ್ಥೆಯನ್ನು ಕೂಡ ಇವರು ಮಾಡಬೇಕಾಗಿ ಬರುತ್ತದೆ.

ಇದರಲ್ಲಿರುವ financial memorandum ನಲ್ಲಿ,

"It is proposed to take over the maintenance of tanks gradually and over a period of years......"

ಎಂದಿದೆ—ಹೀಗಾದರೆ ಇನ್ನು ಯಾವ ಕಾಲಕ್ಕೆ ಇದಾಗುತ್ತದೆ? ಇದನ್ನೆಲ್ಲಾ ಸಮಾಧಾನವಾಗಿ ಬರುವಂತೆ ರೈತನಿಗೆ ಅನುಕೂಲವಾಗುವ ಸ್ಥಿತಿ ಬರಬೇಕಾದರೆ ಬಹಳ ಕಾಲವಾಗುತ್ತದೆ.

ಇದಕ್ಕಾಗಿ ಏನೇ ಖರ್ಚಾಗಲೀ, ಏನೇ ತೊಂದರೆ ಬರಲಿ ಈಗ ಇರತಕ್ಕ ಡ್ಯೂಯಲ್ ಸಿಸ್ಟಂ ತಪ್ಪಿಸಿ ಇಲ್ಲಿರುವ ಎಲ್ಲ ಮೇಜರು ಹಾಗೂ ಮೈನರು ಕೆರೆಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ನಿಮ್ಮ ಷೋಡಿಗಳನ್ನು ಇಟ್ಟುಕೊಂಡು ಮಾಡಿದರೆ ಅವರ ಸಂಬಳವನ್ನು ಕೊಡುವುದಕ್ಕೆ ರೈತರಾದ ನಾವೆಲ್ಲರೂ ಒಪ್ಪುತ್ತೇವೆ. ಈಗಲೂ ಕೂಡ ನಮ್ಮಲ್ಲಿ ನೀರಗಂಟಿಗಳೆಂದು ರೈತರಾದ ನಾವು ನೇಮಿಸಿ ಕೊಂಡಿದ್ದೇವೆ. ಅವನಿಗೆ ಒಂದು ಎಕರೆಗೆ ಒಂದು ಹೊರೆ ಭತ್ತದ ಹುಲ್ಲು, ಕಾಳಿರುವುದು ಮತ್ತು ಒಂದು ಕೊಳಗದಷ್ಟು ಭತ್ತ ಎಂದು ಈಗಲೂ ಕೊಡುತ್ತೇವೆ. ಒಂದು ಹೊರೆ ಭತ್ತ ಎಂದರೆ ಕನಿಷ್ಠ ಪಕ್ಷ ಹತ್ತು ಹದಿನೈದು ಸೇರಿನಷ್ಟು ಭತ್ತ ಬರುತ್ತದೆ. ಎಂದರೆ ಸುಮಾರು ಒಟ್ಟು 25 ಸೇರು ಭತ್ತ ಸಿಕ್ಕಿದಂತಾಗುತ್ತದೆ. ಹೀಗೆ 25 ಸೇರು ಭತ್ತಕ್ಕೆ ಈಗಿರುವ ಮಾರ್ಕೆಟ್ಟು ರೇಟು ನೋಡಿಕೊಂಡರೆ ನಿಮಗೇ ಅದು ಅರ್ಥವಾಗುತ್ತದೆ. ಹಳ್ಳಿಗಳಲ್ಲಿ ನಿಮಗೇ ತಿಳಿದಂತೆ ಪಾರ್ಟಿ, ಪಂಗಡಗಳಿರುವ ಕಾಲದಲ್ಲಿ ಹೊಡೆದಾಟ ಬಡಿದಾಟಗಳಾಗುತ್ತಿರುವುದನ್ನು ನಾವೇ ನೋಡುತ್ತಿರುತ್ತೇವೆ. ಆದುದರಿಂದ ಇದಕ್ಕಾಗಿ ನೀವೇ ಒಂದು ವ್ಯವಸ್ಥೆ ಮಾಡಿ ರೈತರಿಗೆ ಅವರ ಭೂಮಿಗೆ ಯಾವ ರೀತಿಯಲ್ಲಿ ನೀರು ಹಂಚಿ ಎಲ್ಲ ಜಮೀನಿಗೂ ಬರುವಂತೆ ಮಾಡಿಸಿಕೊಟ್ಟರೆ ಅದಕ್ಕೆ ತಕ್ಕ ಪ್ರತಿಫಲವನ್ನು ಕೊಡಲು ನಮ್ಮ ರೈತರು ಯಾರೂ ಹಿಂದೇಟು ಹಾಕುವುದಿಲ್ಲ ಎಂದು ನನಗನಿಸುತ್ತದೆ. ಸಣ್ಣ ಪುಟ್ಟ ವಿಚಾರಗಳಿದ್ದರೆ ಕಾನೂನು ಪ್ರಸಂಗದಲ್ಲಿ ಏನಾದರೂ ಬದಲಾವಣೆಯಾಗಬೇಕಾಗಿದ್ದರೆ ಈಗಾಗಲೇ ಜಾಯಿಂಟ್ ಸೆಲೆಕ್ಟ್ ಕಮಿಟಿ ಈ ಬಿಲ್ಲಿಗೆ ಹೋಗುತ್ತದೆ ಎಂದು ಹೇಳುತ್ತಾರೆ. ಅಲ್ಲಿ ಕೂಲಂಕಷವಾಗಿ ವಿಚಾರಮಾಡಿ ಬರಲಿ. ಬದಲಾವಣೆಗಳನ್ನು ಮಾಡಿ ಬರತಕ್ಕ ಬಡ್ಜೆಟ್ಟು ಅಧಿವೇಶನದಲ್ಲಿಯೇ ಈ ಬಿಲ್ಲು ಸಭೆಯ ಮುಂದೆ ಬಂದು ಬಿಲ್ಲಿಗೆ ಪಾಸು ಪಡೆದು ರೈತರಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಮಾಡುತ್ತಾರೆಂದು ಭಾವಿಸಿ ನನ್ನ ಈ ಎರಡು ಮಾತುಗಳನ್ನು ಹೇಳಲು ಅವಕಾಶಮಾಡಿ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

[MR. SPEAKER in the Chair.]

MR. SPEAKER.—Some of the members have reported to me that there is mosquito nuisance in the Hall. I am sorry members did not mention it previously. I am issuing instructions that the Hall should be sprayed D.D.T. three hours before we sit in order to avoid such nuisance. Let us see how it works.

I think we will have the half an hour Debate fixed for today on next Wednesday.

† ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮಿ, ಮೈಸೂರು ಇರಿಗೇಷನ್ ಬಿಲ್ಲು ಎಂದು ಇಲ್ಲಿ ತಂದಿರುವುದು ಸ್ತುತ್ಯಾರ್ಹವಾಗಿದೆ. ಆದರೆ ಈ ಬಿಲ್ಲನ್ನು ತರಬೇಕಾದರೆ High Power Irrigation Committee ಎನ್ನುವ ಒಂದು ತಜ್ಞರ ಕಮಿಟಿ ನೇಮಿಸಿಬಿಟ್ಟು ಕೂಲಂಕಷವಾಗಿ ನಮ್ಮ ದೇಶದ ನಾನಾ ಭಾಗಗಳಲ್ಲಿ ತಕ್ಕ ನ್ಯೂನತೆಗಳನ್ನು, ಅವಶ್ಯಕತೆಗಳನ್ನು ವಿಮರ್ಶೆ ಮಾಡಿ ಖಚಿತವಾಗಿ ಒಂದು ಅಭಿಪ್ರಾಯಕ್ಕೆ ಬಂದುದನ್ನು ಗಮನದಲ್ಲಿಟ್ಟುಕೊಂಡು ಕಾನೂನುಗಳ ವಿಭಾಗದವರು ನಿಧಾನವಾಗಿ ಎಲ್ಲವನ್ನು ಯೋಚನೆ ಮಾಡಿ ಈ ಕಾನೂನನ್ನು ತಂದು ಈ ಸಭೆಯ ಮುಂದಿಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಈವಾಗ ನೀವು ತಂದಿರತಕ್ಕಂಥ ಬಿಲ್ಲು. ಇಷ್ಟು ಆಳವಾಗಿ ಪರಿಶೋಧನ ಮಾಡಿ ತಂದ ಬಿಲ್ಲು ಅಂತ ಹೇಳುವುದಕ್ಕೆ ಸಾಧ್ಯವಿಲ್ಲ. ಎಷ್ಟೋ ವಿಷಯಗಳಲ್ಲಿ ಅನೇಕ ಜಿಜ್ಞಾಸೆಗಳಿಗೆ ಎಡೆ ಕೊಡತಕ್ಕಂಥ ಬಿಲ್ಲು ಎಂದು ಹೇಳುತ್ತೇನೆ. ಆದರೆ ಇದು ಬಹಳ ಮುಖ್ಯವಾದ ಬಿಲ್ಲು. ದೇಶಾದ್ಯಂತ ವಿಸ್ತರಿಸಿ, ದೇಶದಲ್ಲಿ ಎಲ್ಲ ವಿಧವಾದ ಜನಗಳ, ಬಡವರ ಬಲ್ಲಿದರ ಅಸ್ತಿತ್ವವನ್ನು ಹೀರತಕ್ಕ ಬಿಲ್ಲು. ಇದು ದುಡ್ಡನ್ನು ಎಳೆಯುವ ಮತ್ತು ಅದಕ್ಕೆ ಪ್ರತಿಫಲವಾಗಿ ತಕ್ಕ ಉಪಕಾರವನ್ನು ಮಾಡತಕ್ಕಂಥ ಬಿಲ್ಲು ಆದ್ದರಿಂದ ಕೇವಲ ಅತ್ಯಲ್ಪ ಖರ್ಚಿನಲ್ಲಿ ಹೆಚ್ಚು ಉಪಯೋಗವನ್ನು ಉಂಟು ಮಾಡತಕ್ಕಂಥ ಕಲಮ್ಮುಗಳನ್ನು ಆಳವಾಗಿ ವಿಮರ್ಶೆ ಮಾಡಿ, ಇದರಲ್ಲಿ ಸೇರಿಸಿ ಈ ಸಭೆಯ ಮುಂದೆ ತಂದಿದ್ದರೆ ಈ ಸಂಸ್ಥಾನಕ್ಕೆ ಎಷ್ಟೋ ಮಹದುಪಕಾರ, ಪ್ರಯೋಜನವಾಗುತ್ತಿತ್ತು. ಈವಾಗ ಈ ಬಿಲ್ಲಿನಲ್ಲಿ (ಮುಂದೆ ನಾನು ತೋರಿಸುತ್ತೇನೆ) ಕೆಲವು ಕ್ಲಾಜುಗಳನ್ನು ತೆಗೆದುಬಿಟ್ಟರೂ ಕಷ್ಟ, ಇಟ್ಟರೂ ಕಷ್ಟ. ದೀರ್ಘವಾಗಿ, ಆಳವಾಗಿ ಆಲೋಚನೆ ಮಾಡಿ ಅವುಗಳನ್ನು ಇನ್ಸರ್ಟ್ ಮಾಡಿಲ್ಲ. ಇದು ತಜ್ಞರ ಮುಂದೆ ಸೆಲೆಕ್ಟ್ ಕಮಿಟಿಗೆ ಹೋಗುವುದಿದೆ. ಅಲ್ಲಿ ಪರಿಶೀಲಿಸುವುದು ನಿಧಾನವಾದರೂ ಪರವಾಗಿಲ್ಲ. ದೀರ್ಘವಾಗಿ ಯೋಚನೆ ಮಾಡಿ, ಈ ಮಸೂದೆಯನ್ನು ಈ ಸಭೆಯ ಮುಂದೆ ಮತ್ತೆ ತರಬೇಕೆಂದು ನಾನು ಬೇಡಿಕೊಳ್ಳುತ್ತೇನೆ.

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಈ ಬಿಲ್ಲನ್ನು ವಿಮರ್ಶೆ ಮಾಡುತ್ತಾ ಹೋದರೆ ಮೊಟ್ಟ ಮೊದಲು ಇದರಲ್ಲಿ ಎದ್ದು ಏನು ಕಾಣು ತ್ತದೆಂದರೆ ಚೀಫ್ ಇರ್ರಿಗೇಷನ್ ಅಫೀಸರ್ ಅನ್ನುವುದು. ಇದರಲ್ಲಿ ಎಲ್ಲಿಲ್ಲೂ ಇದಕ್ಕೆ ಡೆಫಿನಿಶನ್ನಿಲ್ಲ, ಡೆಫಿನಿಶನ್ ಇದಕ್ಕೆ ಅದೃಶ್ಯವಾಗಿಬಿಟ್ಟಿದೆ. ದಯಮಾಡಿಟ್ಟು ಅದಕ್ಕೆ ಡೆಫಿನಿಶನ್ ಮಾಡಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಪೇಜ್ 4 ರಲ್ಲಿ Irrigation Officer ಅನ್ನುವುದಕ್ಕಿದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ,—Land holder, owner, occupier, patel, ಇವಕ್ಕೆಲ್ಲಾ ಡೆಫನಿಶನ್ ಇದೆ, ಆದರೆ Chief Irrigation Officer ಅನ್ನುವುದನ್ನು ಕೈ ಬಿಟ್ಟುಬಿಟ್ಟಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—Chief Irrigation Officer ಅನ್ನುವುದು ಎಲ್ಲಿದೆ ?

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಆ Irrigation Officer ಅನ್ನುವುದಕ್ಕೇ ಒಂದು comprehensive definition ಬೇಕು. ಏಕೆಂದರೆ He is almost a dictator in this Bills ಅವನಿಗೆ ಎಲ್ಲಾ ಪವರ್ಸ್ ಕೊಟ್ಟಿರುವುದರಿಂದ, ಅವನು ಬಹಳ ಪ್ರಾಮುಖ್ಯವಾಗಿದ್ದಾನೆ.

ಇನ್ನು 8ನೇ ಕ್ಲಾಜಿಗೆ ಬಂದರೆ, any person may enter upon any land adjacent to or in the neighbourhood to prevent accidents. ಅಕ್ಕಪಕ್ಕದ ಲಾಂಡು ಅಂತ ಸಮ್ಮನೆ ಅಂದರೆ ಅದಕ್ಕೆ ಲಿಮಿಟ್ ಇಲ್ಲ. ಕಾನೂನಿನಲ್ಲಿ ಹೀಗೆ ಸ್ವಲ್ಪ ಅವಕಾಶ ಕೊಟ್ಟರೆ ಆಕ್ಸಿಡೆಂಟ್ ಆದಾಗ ಮಂದು ಜನಗಳು ಅದನ್ನು ದುರುಪಯೋಗಪಡಿಸಿಕೊಂಡು, ಅಕ್ಕ ಪಕ್ಕದ ಜಮೀನುದಾರರಿಗೆ ಬಹಳ ನಷ್ಟ ಮಾಡುತ್ತಾರೆ. ಅವರನ್ನು ಶಿಕ್ಷೆ ಮಾಡುವುದಕ್ಕೂ ಅವಕಾಶವಿರುವುದಿಲ್ಲ. ಸೂಪರ್ವೈಸರುಗಳು, ಅಧಿಕಾರಿಗಳು ಒಳ್ಳೆಯವರಾಗಿದ್ದರೆ ಪರವಾಗಿಲ್ಲ, ಅವರಲ್ಲಿ ಕೆಟ್ಟ ಅಧಿಕಾರಿಗಳು ಬಂದರೆ, ಅವರೂ ಮುಂದು ಪೋಕರಿಗಳ ಜೊತೆ ಸೇರಿಕೊಂಡು ಬಿಟ್ಟರೆ, ಅಕ್ಕ ಪಕ್ಕದ ಜಮೀನುದಾರರಿಗೆ ಬಹಳ ನಷ್ಟ ಉಂಟು ಮಾಡುತ್ತಾರೆ. ಅವರ ಜಮೀನಿನಲ್ಲಿ ಇರತಕ್ಕಂಥ ಮರಗಳು ಮತ್ತಿತರ ಸಾಮಾನುಗಳಿಗೆ ನಷ್ಟ ಮಾಡಬಹುದು, ಮನೆಗಳನ್ನು ಕಟ್ಟಲು ಬೇಕಾದ ಹಂಚು, ಗಳಗಳು ಇವುಗಳನ್ನು ಕಿತ್ತುಕೊಂಡು ಬಂದು ಬಿಡಬಹುದು. ಆದ್ದರಿಂದ ಈ ಕ್ಲಾಜನ್ನು ಸರಿಯಾಗಿ ಪರಿವರ್ತಿಸಬೇಕು. ಅಕ್ಕ ಪಕ್ಕದಲ್ಲಿರತಕ್ಕಂಥ ಜಮೀನುದಾರರಗಳಿಗೆ ಹೆಚ್ಚು ನಷ್ಟವಾಗದ ರೀತಿಯಲ್ಲಿ ಎಷ್ಟು ಸಾಮಾನುಗಳು ಬೇಕೋ ಅಷ್ಟನ್ನು ಮಾತ್ರ ತೆಗೆದುಕೊಳ್ಳಬಹುದು ಎಂದಿರಬೇಕು. ಒಂದು ಕೆರೆ ಅಥವ ಇರಿಗೇಷನ್ ವರ್ಕ್ ಒಡೆದು ಹೋದಾಗ, ಅಥವ ಡ್ಯಾಮೇಜ್ ಆದಾಗ, ಅವುಗಳನ್ನು ಸರಿಪಡಿಸಲು ಬೇಕಾದ ಗಳ, ಮರಗಳು, ಮಣ್ಣು ಮುಂತಾದುವನ್ನು adjacent ಅಂದರೆ ಅಕ್ಕಪಕ್ಕದ ಜಮೀನಿನಿಂದಲೇ ಏಕೆ ತರಬೇಕು. ಎಲ್ಲಿಯಾದರೂ ತೆಗೆದುಕೊಂಡು ಬನ್ನಿ. adjacent ಮತ್ತು neighbourh od ಎಂಬ ಪದಗಳನ್ನು ಈ ಕ್ಲಾಜಿನಿಂದ omit ಮಾಡಬೇಕು.

ಲ್ಯಾಂಡ್ ಅಕ್ವಯರ್ ಮಾಡಿಕೊಳ್ಳುವ ಅಧಿಕಾರವನ್ನು ತಾವು ಡೆಪ್ಯುಟಿ ಕಮೀಶನರಿಗೆ ಕೊಟ್ಟಿದ್ದೀರಿ. ಸಾಮಾನ್ಯವಾಗಿ ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿ ಈ ಅಧಿಕಾರವನ್ನು ಸರ್ಕಾರ ಚಲಾಯಿಸುತ್ತದೆ. ಇದನ್ನು ಇಲ್ಲಿ ಡೆಪ್ಯುಟಿ ಕಮೀಶನರಿಗೆ ಕೊಟ್ಟಿರುವುದು ಸಾಧುವಲ್ಲ. ಏಕೆಂದರೆ ಸಾಮಾನ್ಯವಾಗಿ ಡೆಪ್ಯುಟಿ ಕಮೀಶನರುಗಳು ಸ್ಥಳೀಯ ಪ್ರಭಾವಕ್ಕೆ ಒಳಗಾಗಿಬಿಟ್ಟು ನ್ಯಾಯವನ್ನು ಎತ್ತಿ ಹಿಡಿಯುವುದಕ್ಕೆ, ಇರುವ ಸನ್ನಿವೇಶ ಅವಕಾಶವನ್ನು ಕೊಡುವುದಿಲ್ಲ. ಬಲಿಷ್ಠರು ಯಾರಿರುತ್ತಾರೋ ಅವರ ಕಡೆ ತೀರ್ಪನ್ನು ಕೊಡಬೇಕಾಗುತ್ತದೆ. ಸರಕಾರದವರು ಈ ಅಧಿಕಾರವನ್ನು ಇಟ್ಟುಕೊಂಡರೆ ನಿದಾಕ್ಷಿಣ್ಯವಾಗಿ ಸತ್ಯವನ್ನೂ, ನ್ಯಾಯವನ್ನೂ ಎತ್ತಿ ಹಿಡಿಯಬಹುದು. ಆದ್ದರಿಂದ ಸರಕಾರದವರು ಈ ಅಧಿಕಾರವನ್ನು ಉಳಿಸಿಕೊಳ್ಳಲಿ.

ಕ್ಲಾಜು 16 ರಲ್ಲಿ ಫೀಲ್ಡ್ ಚಾನಲ್ಲಿಗೆ ಲ್ಯಾಂಡ್ ಅಕ್ವಯರ್ ಮಾಡಿಕೊಳ್ಳಬಹುದು. ಆವಾಗ ಕಂಪನ್ಸೇಶನ್ ಕೊಡಬೇಕಾದ್ದು wet land ಗೆ 100 times the land revenue, dry land ಗೆ 200 times the land revenne ಅಂತ ಹೇಳಿದ್ದೀರಿ. ನಾನು ತಮಗೆ ಅರಿಕೆ ಮಾಡಿಕೊಳ್ಳುವುದು, ಇದು ಓಬೀರಾಯನ ಕಾಲದಲ್ಲಿ ಹಾಕಿರುವ ಕಂದಾಯ. ಈ ಕಂದಾಯ ಕೇವಲ ಕಡಿಮೆ ದರದಲ್ಲಿದೆ. ಖುಷ್ಕಿಯಾದರೆ 1—2 ರೂಪಾಯಿ, ತರಿಯಾದರೆ 3 ರಿಂದ 5 ರೂಪಾಯಿವರೆಗೆ ಇದೆ. ಇವತ್ತಿನ ದಿವಸ ಎಷ್ಟೋ ಜಮೀನಿನ ಬೆಲೆ ಸಾವಿರಾರು ರೂಪಾಯಿಯಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳುವುದನ್ನು ಕೇಳುವುದಕ್ಕೆ ಬಹಳ ಸಂತೋಷವಾಗುತ್ತದೆ. ಓಬೀರಾಯನ ಕಾಲದ ಕಂದಾಯವಿದ್ದೂ, ನಾವು 100 times compensation award ಮಾಡಿದರೂ, it is criminal on the part of the Government to do so

ಅಂದಿದ್ದಾರೆ. ತಾವು ಹೇಳುವುದು ಒಪ್ಪಿಕೊಳ್ಳುತ್ತೇನೆ. ತಮ್ಮಗಳಲ್ಲಿಯೇ ಭಿನ್ನಾಭಿಪ್ರಾಯವಾದರೆ ಏನು ಮಾಡುವುದು ?

ಶ್ರೀ ಎಚ್. ಆರ್. ಕೇಶವ ಮೂರ್ತಿ.—Difference of opinion ಇದ್ದರೆ, ಸತ್ಯ ಯಾವುದು ಮಿಥ್ಯ ಯಾವುದು ಎಂದು ಪರಿಶೀಲಿಸಿ, ಅರಿಸಿಕೊಳ್ಳಿ. ಇವತ್ತು ಮಾರ್ಕೆಟ್ ವ್ಯಾಲ್ಯು ಹಿಂದಿನದಕ್ಕಿಂತ ಎಷ್ಟು ಹೆಚ್ಚಾಗಿದೆ ಅನ್ನುವುದನ್ನೂ ಗಣನೆಗೆ ತೆಗೆದುಕೊಳ್ಳಿ. ಈ ತರಹ ಕಾಂಪನ್ಸೇಶನ್ ಲಿಮಿಟ್ ಮಾಡುವುದಕ್ಕಿಂತ ಒಂದು ಆಲ್ಟರ್‌ನೇಟೀವ್ ಕೊಡಬೇಕು. ಆ ಜಮೀನಿಗೆ ಬದಲಾಗಿ, ಅದೇ ಪ್ರದೇಶದಲ್ಲಿ ಅಥವ ಅಕ್ಕ ಪಕ್ಕದಲ್ಲಿ ಜಮೀನು ಇಲ್ಲದ ಪಕ್ಷದಲ್ಲಿ, ಪಾರ್ಟಿಗಳು ಒಪ್ಪುವುದಾದರೆ, ಬೇರೆ ಜಮೀನನ್ನು ಕೊಡಿ. ಇದರಿಂದ ಸರಕಾರಕ್ಕೆ ದುಡ್ಡು ಉಳಿಯುತ್ತದೆ, ಆ ಪಾರ್ಟಿಗೂ ಜಮೀನು ಸಿಗುತ್ತದೆ. ಈ ಕ್ಲಾಜಿನಲ್ಲಿ ಈ alternate suggestion ಅನ್ನು ಕೊಡಬೇಕು. ದುಡ್ಡಿಗೆ ಬದಲಾಗಿ ಜಮೀನನ್ನಾದರೂ ಕೊಡುವುದಕ್ಕೆ ಪ್ರಾವಿಶನ್ ಮಾಡಿಕೊಳ್ಳಬೇಕು.

17 ನೇ ಕ್ಲಾಜಿನಲ್ಲಿ ಹೀಗೆ ಹೇಳಿದ್ದಾರೆ :

> "17. Such acquired land to remain as property of Government.—On possession of the land being taken, the Irrigation Officer shall fix the boundary maks in the prescribed manner, and thereupon ownerslip of such land shall vest in the State Government."

6-00 P.M.

ಈ ರೀತಿ ಆರ್ಡರ್ ಮಾಡಿ ಅದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆ. ಇದರಲ್ಲಿ ಎಷ್ಟೋ ಕಡೆ ಬೇಕಾದಷ್ಟು ಜಿಜ್ಞಾಸೆಬಂದಿದೆ. ಲೋಕೋಪಯೋಗಿ ಇಲಾಖೆಯವರು ಜಮೀನನ್ನೂ ತೆಗೆದುಕೊಂಡು ನಾಲೆಗಳನ್ನು ಮಾಡಿ ಬೌಂಡರಿ ಗುರ್ತುಗಳನ್ನು ಹಾಕುತ್ತಾರೆ. ರೆವೆನ್ಯೂ ಇಲಾಖೆಯ ಲೆಕ್ಕ ಪತ್ರಗಳಲ್ಲಿ index of land ಇರುತ್ತದೆ. ಅದರಲ್ಲಿ ಈ ವಿಚಾರವನ್ನು in corporate ಮಾಡಬೇಕು, ಯಾವತ್ತಿಗೂ ಕೂಡ ಅದನ್ನು ಯಾರೂ ದುರುಪಯೋಗಪಡಿಸಿಕೊಳ್ಳಕೂಡದು. ಅದು ರಿಸರ್ವ್ ಜಮೀನು. ಇದಕ್ಕೆ ಅವಕಾಶ ಕಲ್ಪಿಸುವಂಥ ಕ್ಲಾಜನ್ನು ಇದರಲ್ಲಿ ಹಾಕಬೇಕು.

ಕ್ಲಾಜ್ 18 ರಿಂದ 22ರ ವರೆವಿಗೂ ಎಲ್ಲವನ್ನೂ ಪೂರ್ತಿ ತೆಗೆದುಹಾಕಬೇಕು. ಇದರಲ್ಲಿ ಏನು ಮಾಡಿದ್ದಾರೆಂದರೆ ಒಂದು ಪ್ರದೇಶದಲ್ಲಿ ನಾಲೆ ಅಥವಾ ಕಾಲುವೆ ಯಾರಿಗಾದರೂ ಬೇಕಾದರೆ ಅವರು apply ಮಾಡಿ ಪರ್ಮಿಷನ್ ತೆಗೆದುಕೊಂಡು ಅವರೇ ಕಾಲುವೆಯನ್ನು ಮಾಡಿಕೊಳ್ಳಬಹುದು ಅಥವಾ ಸರ್ಕಾರದಲ್ಲಿ ಹಣ ಡಿಪಾಜಿಟ್ ಮಾಡಿದರೆ ಕೆಲಸ ಮಾಡಿಕೊಡುತ್ತಾರೆ. ಬಾಕಿಯಾಗುವ ಹಣವನ್ನು ಭೂಕಂದಾಯದ ಬಾಕಿಯಂತೆ ವಸೂಲ್ಮಾಡಲು ಕಾನೂನು ಮಾಡಿದ್ದಾರೆ. ಇದು ಒಳ್ಳೆಯದು. ಆದರೆ ಮುಂದೆ ಏನು ಮಾಡಿದ್ದಾರೆಂದರೆ ಅಂಥ ಕಾಲುವೆಯೊಳಗೆ ನೀರು ಕೊಡಬೇಕೆಂದು ಅರ್ಜಿ ಹಾಕಿದರೆ ಅವನಿಗೆ ಜಾಯಿಂಟ್ ಹಕ್ಕನ್ನುಕೊಡಬೇಕು ಎಂದು ಮಾಡಿದ್ದಾರೆ. ಇದರಿಂದ ಏನಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಇದರಿಂದ ತುಂಬ ಕಷ್ಟವಾಗುತ್ತದೆ. ಒಂದು ಮನೆಯಲ್ಲಿ ಅಣ್ಣ ತಮ್ಮಂದಿರಿರುತ್ತಾರೆ. ಅಣ್ಣ ತಮ್ಮಂದಿರಾದರೂ ಕೂಡ ಬೆಳೆಯುತ್ತ ವೈರಿಗಳಾಗುತ್ತಾರೆ. ಒಟ್ಟಿನಲ್ಲಿ ಸಂಸಾರ ಮುಂದುವರೆಸುವುದಕ್ಕೆ ಅವಕಾಶವಿಲ್ಲದೆ ಬೇರೆ ಬೇರೆಯಾಗುತ್ತಾರೆ. ಒಬ್ಬನು ಒಂದು ಕಾಲುವೆಗೆ ಅರ್ಜಿ ಹಾಕಿ ಅದರ ಮೇಲೆ ತನ್ನ ಹಕ್ಕನ್ನು ಸ್ಥಾಪನೆ ಮಾಡಿಕೊಂಡಿರುತ್ತಾನೆ. ನಾನು ಕಟ್ಟಿಸಿದ ಕಾಲುವೆ, ಅದರಲ್ಲಿ ಇನ್ನೊಬ್ಬರಿಗೆಕೊಡುವುದಿಲ್ಲ ಎಂದು ಹೇಳುತ್ತಾನೆ. ಒಬ್ಬರಿಗೊಬ್ಬರಿಗೆ ಜಗಳವಾಗುತ್ತದೆ. ನೀವು ಪರ್ಮಿಷನ್‌ಕೊಟ್ಟರೂ ಕೂಡ ಕೋರ್ಟಿಗೆ ಹೋಗುವ ಸಂಭವವಿರುತ್ತದೆ. ಇದಕ್ಕೆ ನನ್ನ ಸಲಹೆ ಏನೆಂದರೆ ಈ ಕ್ಲಾಜನ್ನು ತೆಗೆದು ಇದಕ್ಕೆ ಬದಲಾಗಿ field channel ಎಲ್ಲಿ ಬರುತ್ತದೆ ಅದನ್ನು ಸರ್ವೆ ಮಾಡಿ ಅದರಿಂದ ಅನುಕೂಲವಾಗುವ ಜಮೀನು ಯಾರ್ಯಾರಿಗೆ ಇದೆ, ಎಷ್ಟೆಷ್ಟು ವಿಸ್ತೀರ್ಣ ಇದೆ ಎನ್ನುವ ಸಮಾಚಾರವನ್ನು ತಿಳಿದುಕೊಂಡು ಸರ್ಕಾರದವರೇ ನಾಲೆಯನ್ನು ಮಾಡಿಸಿ ಅದಕ್ಕೆ ತಗಲುವ ಖರ್ಚನ್ನು ಜಮೀನು ಮಾಲೀಕರಿಂದ ಕಂಟ್ರಿಬ್ಯೂಷನ್ ರೂಪದಲ್ಲಿ ವಸೂಲ್ಮಾಡಬಹುದು. ಹಾಗೆ ಮಾಡದೆ ಒಬ್ಬನ ಹೆಸರಿಗೆ ಮೊದಲುಕೊಟ್ಟು ಆನಂತರ ಇನ್ನೊಬ್ಬನಿಗೆ ಜಾಯಿಂಟ್ responsibility ಕೊಡುತ್ತೇವೆನ್ನುವುದು ಸರಿಯಲ್ಲ. ದಯವಿಟ್ಟು ಈ ಕ್ಲಾಜನ್ನೂ ತೆಗೆದು ಹಾಕಬೇಕು ಅಥವಾ ಸೂಕ್ತ ರಿತಿಯಲ್ಲಿ ಬದಲಾವಣೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಈ chapter ನ್ನೆಲ್ಲ condense ಮಾಡಿ ಸರಿಯಾದ ರೀತಿಯಲ್ಲಿ ಪರಿವರ್ತನೆ ಮಾಡತಕ್ಕದ್ದು ಮುಖ್ಯವಾದ ವಿಚಾರ.

(ಶ್ರೀ ಎಚ್. ಆರ್. ಕೇಶವಮೂರ್ತಿ)

28ನೆ ಕ್ಲಾಜಿಗೆಬಂದರೆ temporary water rate ಮತ್ತು permanent water rate ಎಂದು ಹೇಳಿದ್ದಾರೆ. ಮೊದಲು ನೀರನ್ನು ಒದಗಿಸಿದರೆ temporary water rate ಆರು ವರ್ಷ ಕಾಲ ಹಾಕಿ ಆಮೇಲೆ ಅದನ್ನು ಖಾಯಂ ಮಾಡುತ್ತೇವೆಂದು ಹೇಳಿದ್ದಾರೆ. ಇದು ಬಹಳ ಓಬೀರಾಯನ ಕಾಲದ ಪದ್ಧತಿ. ಇದನ್ನು ನಾವು ಪರಿವರ್ತನೆ ಮಾಡಬೇಕು. ಹಿಂದಿನ ಕಾನೂನಿನಲ್ಲಿ ಐದು ವರ್ಷವಿದ್ದುದನ್ನು ಆರುವರ್ಷಕ್ಕೆ ಏರಿಸಿದ್ದಾರೆ. ಇದಕ್ಕೆ ನನ್ನ ಸಲಹೆ ಹೀಗಿದೆ. ಈಗಿನ ಕಾಲದಲ್ಲಿ ಎಷ್ಟು ನೀರು ಬರುತ್ತದೆ, ಅದನ್ನು ಎಷ್ಟು ಜಮೀನಿಗೆ ಒದಗಿಸಬಹುದು ಎಂಬುದಕ್ಕೆ you have got technical data. ಎಷ್ಟೆಷ್ಟು ನೀರುಬರುತ್ತದೆ, ಎಷ್ಟು ಜಮೀನಿಗೆಕೊಡತಕ್ಕ ನೀರು ಬರುತ್ತದೆ ಎಂದು ಗೊತ್ತಿರುತ್ತದೆ. ಹಿಂದೆ ಯಾವ measurement ಸಹ ಇರಲಿಲ್ಲ. ವಿಜ್ಞಾನ ಆಗ ಇಷ್ಟು ಮುಂದುವರೆದಿರಲಿಲ್ಲ. ಇಂಜಿನಿಯರಿಂಗ್ ಇಲಾಖೆಯವರು ಐದು ವರ್ಷ ನೀರನ್ನುಕೊಟ್ಟು ಆ ಕಾಲದಲ್ಲಿ ಆ ಜಮೀನಿಗೆ ಸಾಕಾಗುವಷ್ಟು ನೀರು ಸರಬರಾಯಿ ಆದರೆ ಆರನೆಯ ವರ್ಷದಿಂದ confirm ಮಾಡಬೇಕು ಎಂದು ಅಂದಾಜಿನ ಮೇಲೆ ನೀರನ್ನುಕೊಡುವ ಪದ್ಧತಿಯನ್ನು ಹಿಂದಿನ ಕಾಲದಲ್ಲಿ ಇಟ್ಟುಕೊಂಡಿದ್ದರು. ಈ ರೀತಿ ಏಕೆ ಮಾಡುತ್ತಿದ್ದರು ಎಂದರೆ ಐದುವರ್ಷ ಕಾಲ ನೀರನ್ನುಕೊಟ್ಟ ಮೇಲೆ ಎಷ್ಟು ವಿಸ್ತೀರ್ಣದ ಜಮೀನಿಗೆ ನೀರುಕೊಡಬಹುದು ಎಂದು ಗೊತ್ತು ಮಾಡುತ್ತಿದ್ದರು. ಆದ್ದರಿಂದ ಐದು ವರ್ಷ ಟೆಂಪೊರರಿ ರೇಟನ್ನು ಹಾಕಿ ಆ ಮೇಲೆ ಖಾಯಂ ರೇಟನ್ನು ಹಾಕುತ್ತಿದ್ದರು. ಮೊದಲೇ ಖಾಯಂ ಆಗಿ ನೀರುಕೊಡುವಂತೆ ವ್ಯವಸ್ಥೆ ಮಾಡಲು ಸಾಧ್ಯವಿಲ್ಲದೆ ಇದ್ದರೆ ಆರು ವರ್ಷ ಎಂದಿರುವುದನ್ನು ಐದು ವರ್ಷಕ್ಕೆ ಇಳಿಸಬೇಕು ಮತ್ತು ಆರನೆಯ ವರ್ಷದಿಂದ ಖಾಯಂ ಆಗಿ ನೀರನ್ನುಕೊಟ್ಟು permanent water rate ಹಾಕಿ ಎಂದು ಹೇಳುತ್ತೇನೆ.

ಕ್ಲಾಜ್ 28 (5) ರಲ್ಲಿ ಯಾರಾದರೂ ಅನಧಿಕೃತವಾಗಿ ನೀರನ್ನು ಬಳಸಿಕೊಂಡರೆ ಅವರಿಗೆ ಪೆನಾಲ್ಟಿ ಹಾಕುತ್ತೀರಿ. Land Revenue Act ನಲ್ಲಿ ಏನಿದೆ ಎಂದರೆ ಅವನು ಇಂಥ ಸಂದರ್ಭಗಳಲ್ಲಿ single water rate ಕೊಡಬೇಕು ಮತ್ತು double the differrence between the wet assessment and dry assessment ಕೊಡಬೇಕು ಎಂದು ಇದೆ. ಸರ್ಕಾರದ ಪರ್ಮಿಷನ್ ಪಡೆದರೆ single water rate ಕೊಡಬೇಕು ಎಂದು ಇದಕ್ಕೆ ಬದಲಾಗಿ ಈ ಕಾನೂನಿನಲ್ಲಿ ಅನಧಿಕೃತವಾಗಿ ನೀರನ್ನು ಬಳಸಿದರೆ not less than ten times and not exceeding thirty times ಎಂದು ಹೇಳಿದ್ದಾರೆ. ಕೆಲವು ಸಂದರ್ಭಗಳಲ್ಲಿ, emergency ಯಲ್ಲಿ ನೀರನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಅಂಥ ಸನ್ನಿವೇಶ ಬಂದರೆ ಇಂಥ ಕಠಿಣವಾದ ಕಾನೂನು ಜಾರಿಗೆ ಬಂದರೆ ಅಧಿಕಾರಿಗಳು ದಯಾಳುಗಳಾಗಿದ್ದರೆ ಪರವಾ ಇಲ್ಲ,ಆದರೆ ಅಧಿಕಾರಿಗಳ ವಕ್ರ ದೃಷ್ಟಿ ಪಾರ್ಟಿಗಳ ಮೇಲೆ ಬಿದ್ದರೆ ಅವನು ಮಟ್ಟವಾಗುತ್ತಾನೆ. ಒಟ್ಟಿನಲ್ಲಿ ರೈತರ ಮನೆ ಹಾಳು ಮಾಡತಕ್ಕ ಕಾನೂನು ಇದು. ದಯವಿಟ್ಟು ಇದನ್ನು ಪುನರ್ವಿಮರ್ಶೆ ಮಾಡಿ land revenue code ನಲ್ಲಿರುವ ಹಾಗೆ ಮಾಡಬೇಕು. ಒಂದು ವೇಳೆ ನಾಲ್ಕರಷ್ಟು ಮಾಡಿದರೂ ಬೇಡವೆನ್ನುವುದಿಲ್ಲ. ಹತ್ತರಿಂದ 30 ರಷ್ಟು ಕೊಡಬೇಕೆನ್ನುವುದು ಕಾನೂನಿನಲ್ಲಿ ನೋಡುವುದಕ್ಕೆ ಚೆನ್ನಾಗಿ ಕಾಣುತ್ತದೆ. This is not on scientific basis. ದಯವಿಟ್ಟು ಇದನ್ನು ತಾವು ಪರಿಶೀಲಿಸಬೇಕು. ಮನಸ್ಸಿಗೆ ಬಂದ ಹಾಗೆ ಹಾಕಿದರೆ ಒಳ್ಳೆಯದಲ್ಲ. ಎರಡರಷ್ಟು ಅಥವಾ ನಾಲ್ಕರಷ್ಟು ಹಾಕಿ, ಬೇಡವೆನ್ನುವುದಿಲ್ಲ.

ಕ್ಲಾಜ್ 31 (2) ರಲ್ಲಿ

> "If, in accordance with a decision of the Irrigation Officer under sub-section (1) any land entitled to supply of water under the irrigation work is not supplied with water, the holder of such land shall be liable to pay only the dry assessment of such land."

ಎಂದು ಹೇಳಿದ್ದಾರೆ. ಇದನ್ನು ಸ್ವಲ್ಪ ವಿಮರ್ಶೆ ಮಾಡಬೇಕು. ನೀರನ್ನು ಬಿಡುತ್ತೇವೆಂದು ಹೇಳಿದ್ದಾರೆ. ಕೆಲವು ಕಡೆ ನಾನು ನೋಡಿದ್ದೇನೆ, ತೋಟಿತಳವಾರರು, ಪಟೇಲರು ಇವರಿಗೂ ಜಮೀನ್ದಾರರಿಗೂ ಜಗಳ ಬಂದರೆ ನೀರನ್ನೇ ಬಿಡುವುದಿಲ್ಲ.

... ಆಫೀಸರುಗಳು ಶರೀಕಾಗಿ ರಿಪೋರ್ಟ್ ಮಾಡುವುದು ನಿಧಾನವಾದರೆ ನೀರು ಹೋಗುವುದಿಲ್ಲ. ಅಂತಹ ಸಂದರ್ಭದಲ್ಲಿ ಅವನಿಗೆ ಸರ್ಕಾರದಿಂದ ಪರಿಹಾರ ಕೊಡಬೇಕು, ಯಾರದು ತಪ್ಪು ಎಂಬು

ದನ್ನು ವಿಮರ್ಶೆ ಮಾಡಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ರೀತಿ ಮಾಡುವುದು ಸರ್ಕಾರದವರ ಕರ್ತವ್ಯವಾಗುತ್ತದೆ.

ಡೆಪ್ಯೂಟಿ ಕಮಿಷನರ ಕೋರ್ಟಿನಲ್ಲಿ ನೋಟಿಫಿಕೇಷನ್ ಹಾಕಿದರೆ ಹಳ್ಳಿಯಲ್ಲಿರತಕ್ಕ ಅನಕ್ಷರಸ್ಥ ರೈತನಿಗೆ ಹೇಗೆ ಗೊತ್ತಾಗಬೇಕು? ರೆವಿನ್ಯೂ ಇಲಾಖೆಯ ಅಧಿಕಾರಿಗಳು ಮತ್ತು ಇನ್ನು ಕೆಲವರು ಸೇರಿಕೊಂಡು ಒಂದು ಚೂರೂ ಪತ್ತೆ ಇಲ್ಲದ ಹಾಗೆ ಮಾಡುತ್ತಾರೆ. ಆದ್ದರಿಂದ ಕೊನೇಪಕ್ಷ 3 ತಿಂಗಳಾದರೂ ಟೈಂ ಕೊಡಬೇಕು, 7 ದಿವಸ ಸಾಲದು ಎಂದು ಹೇಳುತ್ತೇನೆ.

ಕ್ಲಾಜ್ 33 (ಡಿ) (2) ರಲ್ಲಿ ಹೇಳಿರುವಂತಹ ಕೆಲಸಗಳನ್ನು ಮಾಡಲು ಕೆಲವು ಅಧಿಕಾರಿಗಳು ನಿಧಾನ ಮಾಡುತ್ತಾರೆ. ಉದ್ದೇಶಪೂರ್ವಕವಾಗಿ ನಿಧಾನ ಮಾಡಿದರೆ ಅವರ ಜವಾಬ್ದಾರಿಯನ್ನು ಆ ಅಧಿಕಾರಿಗಳ ಮೇಲೆ ಹಾಕಬೇಕು ಮತ್ತು ರೈತನಿಗೆ ಅದಕ್ಕಾಗಿ ಪರಿಹಾರ ಕೊಟ್ಟೇ ಕೊಡಬೇಕಾಗುತ್ತವೆ ಇಲ್ಲದೇ ಇದ್ದರೆ ಅವನಿಗೆ ನೀವು ಒಂದು ಬಹಳ ದೊಡ್ಡ ತೊಂದರೆಯನ್ನು ತಂದೊಡ್ಡಿದ ಹಾಗಾಗುತ್ತದೆ.

ಕ್ಲಾಜ್ 34ರಲ್ಲಿ ಲಿಮಿಟೇಷನ್ ಕ್ಲೈಮ್ಸ್ ವಿಚಾರ ಹೇಳಿದ್ದೀರಿ. ಈ ಅಧಿಕಾರವನ್ನು ಡೆಪ್ಯೂಟಿ ಕಮಿಷನರಿಗೆ ಏಕೆ ಕೊಡಬೇಕು? ಒಂದು ವರ್ಷ ಟೈಂ ಕೊಟ್ಟಿದ್ದೀರಿ ಅದು ಸಾಕು. ನಾನು ಸರ್ಕಾರದ ಪರವಾಗಿಯೂ ಇಲ್ಲ, ರೈತರ ಪರವಾಗಿಯೂ ಇಲ್ಲ. ಡೆಪ್ಯೂಟಿ ಕಮಿಷನರ ಡಿಸ್ಕ್ರಿಷನ್ ಎಂದರೆ ಅಲ್ಲಿ ಪೊಲಿಟಿಕಲ್ ಅಥವಾ ಇನ್ನಾವುದಾದರೂ ಪ್ರಭಾವ ಬಂದು ಬಡವರಿಗೆ ನ್ಯಾಯ ಸರಿಯಾಗಿ ಸಿಕ್ಕುವುದಿಲ್ಲ.

ಕ್ಲಾಸ್ 41ರಲ್ಲಿ 25 ಪರ್ಸೆಂಟೇ ಇದ್ದರೂ ಪರವಾಗಿಲ್ಲ ಆದರೆ ಮಧ್ಯದಲ್ಲಿ ಇಲಾಖೆಯ ಅಧಿಕಾರಿಗಳು ಮಾಡತಕ್ಕ ಮಿಸ್‌ಚೀಫ್‌ನ್ನು ತಪ್ಪಿಸುವುದಕ್ಕೆ ಒಂದು ಅವಕಾಶವನ್ನು ಮಾಡಬೇಕು. ಒಂದು ವೇಳೆ ಯಾರಾದರೂ ಅಧಿಕಾರಿಗಳು ಅನ್ಯಾಯ ಮಾಡಿದ್ದಾರೆ ಎಂಬುದು ಸರ್ಕಾರದವರಿಗೆ ತಿಳಿದು ಬಂದರೆ ಅಂತಹವರಿಗೆ ಶಿಕ್ಷೆ ಮಾಡಬೇಕು ಅದಕ್ಕೆ ತಕ್ಕ ಒಂದು ಕ್ಲಾಜನ್ನೂ ಸಹ ಸೇರಿಸಬೇಕೆಂದು ಹೇಳುತ್ತೇನೆ. ಈಗಿರುವಂತೆ ಅಧಿಕಾರಿಗಳನ್ನು ಈ ಕಾನೂನನ್ನು ದುರುಪಯೋಗಪಡಿಸಿಕೊಂಡು ಸರ್ಕಾರದವರಿಗೂ ಮತ್ತು ದೇಶಕ್ಕೂ ದ್ರೋಹ ಮಾಡತಕ್ಕ ಒಂದು ಸನ್ನಿವೇಶಕ್ಕೆ ಇದರಲ್ಲಿ ಎಡೆ ಇದೆ. 25 ಪರ್ಸೆಂಟ್ ಎಂದು ಇರುವುದಕ್ಕೆ ಬದಲಾಗಿ 50 ಪರ್ಸೆಂಟ್ ಎಂದು ಹಾಕುವುದು ಸರಿ ಎಂದು ಕಾಣುತ್ತದೆ, ಇದು ಒಂದಕ್ಕೊಂದಕ್ಕೆ ಸರಿಯಾದ ಪ್ರಪೋರ್ಷನ್ ಎಂದು ನಾನು ಭಾವನೆ ಮಾಡುತ್ತೇನೆ.

ಕ್ಲಾಜ್ 44ರಲ್ಲಿ ಮೇನ್‌ಟೆನೆನ್ಸ್ ಅಂತ ಹೇಳಿ ಹೊಸದಾಗಿ ಒಂದು ಸುಂಕವನ್ನು ಜನಗಳ ಮೇಲೆ ಹಾಕುತ್ತಾ ಇದ್ದೀರಿ, ಶ್ರೀಮಾನ್ ಅಣ್ಣಾರಾಯರು ಹೇಳಿದ ಹಾಗೆ ಇದು ಹೊಸ ತೆರಿಗೆ. ಇದನ್ನು ಹಾಕತಕ್ಕ ಅವಶ್ಯಕತೆ ಏನಿತ್ತು ಎಂದು ಕೇಳುತ್ತೇನೆ. ಏಕೆಂದರೆ ಇವತ್ತಿನ ದಿವಸ ನೀರಾವರಿ ಪ್ರದೇಶದಲ್ಲಿರತಕ್ಕ ರೈತ ಎಷ್ಟೋ ತೆರಿಗೆಗಳನ್ನು ಕೊಡುತ್ತಾ ಇದ್ದಾನೆ, ಬೆಟರ್‌ಮೆಂಟ್ ಟ್ಯಾಕ್ಸ್, ವಾಟರ್ ಕಾಂಟ್ರಿಬ್ಯೂಷನ್, ವೆಟ್ ಅಸೆಸ್‌ಮೆಂಟ್, ಡ್ರೈ ಅಸೆಸ್‌ಮೆಂಟ್, ಇರಿಗೇಷನ್ ಸೆಸ್ ಇಷ್ಟೆಲ್ಲಾ ಹಾಕಿ ಕೊನೆಗೆ ಮೇನ್‌ಟೆನೆನ್ಸ್ ಸೆಸ್ ಹಾಕುತ್ತಾ ಇದ್ದೀರಿ, ಇದನ್ನು ಏಕೆ ಹಾಕಬೇಕು? ಈಗಾಗಲೇ ಅನೇಕ ಸೆಸ್ಸುಗಳನ್ನು ಅವನು ಕೊಡುತ್ತಾ ಇಲ್ಲವೇ ಎಂದು ಹೇಳುತ್ತೇನೆ. ಆದ್ದರಿಂದ ಈ ಮೇನ್‌ಟೆನೆನ್ಸ್ ಸೆಸ್ಸು ಹಾಕಬೇಕಾದ ಅವಶ್ಯಕತೆ ಇಲ್ಲ ಎಂದು ನಾನು ಭಾವನೆ ಮಾಡುತ್ತೇನೆ.

"The State Government shall levy a maintenance cess at Rupees five per acre per annum on all land in the area..."

ಹೀಗೆ ಹೇಳಿದ್ದಾರೆ. ಆ ಏರಿಯಾದಲ್ಲಿರತಕ್ಕ ಜಮೀನಿನ ಮೇಂಟನೆನ್ಸ್ ಚಾರ್ಜನ್ನೆಲ್ಲಾ ಈತನ ಮೇಲೆ ಹಾಕಿದರೆ ಅವನು ಖಂಡಿತಾ ಉಳಿಯುವುದಿಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ: ಆ ಅಚ್ಚುಕಟ್ಟು ಜಮೀನಿನ ಅನುಕೂಲವನ್ನು ಯಾರು ಯಾರು ಪಡೆಯುತ್ತಾರೋ ಅಂಥವರ ಮೇಲೆ ತಾವು ಇದನ್ನು ಒಂದು ಇರಿಗೇಷನ್ ಸೆಸ್ ಅಂತಾ ಹಾಕಿ ವಸೂಲ್ಮಾಡಿಕೊಳ್ಳಿ. ಯಾರೂ ಬೇಡ ಎನ್ನುವುದಿಲ್ಲ. ಆರೀತಿ ತಾವು ಇಲ್ಲಿ ಒಂದು ಪದವನ್ನು ಸೇರಿಸಿದರೆ ಒಳ್ಳೆಯದೆಂದು ಕಾಣುತ್ತದೆ. ಹಾಗೆ ತಾವು ಇದನ್ನು ಇಲ್ಲಿ ಖಚಿತವಾಗಿ ತಿಳಿಸದಿದ್ದರೆ ಅಧಿಕಾರಿಗಳು ಇದನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆಗ ಈ ಲಂಚಕ್ಕೆ ಸರ್ಕಾರದವರೇ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಆದುದರಿಂದ ಇಲ್ಲಿ ತಾವು ಒಂದು ಡೆಫನೆಟ್ಟಾದ ಪದವನ್ನು ಹಾಕಬೇಕೆಂದು ಹೇಳುತ್ತೇನೆ.

(ಶ್ರೀ ಎಚ್. ಆರ್. ಕೇಶವಮೂರ್ತಿ)

ಇನ್ನು ಕ್ಲಾಜ್ 53ರಲ್ಲಿ ಹೀಗೆ ಹೇಳಿದ್ದಾರೆ :

"Whoever voluntarily and without proper authority"

"(viii) causes or permits any animal to graze or be tethered upon the bank or border of any irrigation work."

ಹೀಗೆ ಇದರಲ್ಲಿ ಒಂದು ದನವನ್ನು ಕಟ್ಟಿಹಾಕಿದರೆ ಅಥವಾ ಮೇಯುವುದಕ್ಕೆ ಬಿಟ್ಟರೆ ಅದನ್ನು ಉದ್ದೇಶವಾಗಿಯೇ ಮಾಡಿದ್ದಾನೆಂದು ಆತನ ದನವನ್ನು ದೊಡ್ಡಿಗೆ ಹಾಕಿ ಆತನ ಮೇಲೆ ಮತ್ತೆ ಬೇರೆ ಕ್ರಮ ಕೈಗೊಂಡರೆ ಅವನ ಮನೆ ಹಾಳಾಗಿ ಹೋಗುತ್ತದೆ.

Please remove the words 'border of any irrigation work'. This conveys an indefinite idea.

ಇಲ್ಲಿ ಇಂಥಾ ಒಂದು ಡೆಫಿನಿಷನ್ನನ್ನು ಇಟ್ಟು ಇದರ ಪ್ರಕಾರ ನೋಡುತ್ತಾ ಹೋದರೆ ಕೆರೆ ನದಿ, ಹೊಳೆ ಇತ್ಯಾದಿಗಳು ಎಲ್ಲೆಲ್ಲಿವೆಯೋ ಅದೆಲ್ಲವೂ ಇರಿಗೇಷನ್ ಪ್ರಾಜೆಕ್ಟುಗಳೆಂತಲೇ ಆಗುತ್ತದೆ ಆದುದರಿಂದ ತಾವು ಹೀಗೆ ಮಾಡುವುದು ಸರಿಯೇ ಎಂದು ಕೇಳುತ್ತೇನೆ ? ಒಬ್ಬ ರೈತ ಒಂದು ನದೀ ದಡದಲ್ಲಿ ಒಂದು ಆಕಳನ್ನು ಕಟ್ಟಿದ್ದರೆ ಅದೂ ಒಂದು ಅಪರಾಧವೇ ? ಆದುದರಿಂದ ಈ ಕ್ಲಾಜನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ಹೇಳುತ್ತೇನೆ. ಅದು ಸಾಧ್ಯವಿಲ್ಲವೆನ್ನುವುದಾದರೆ ಕಡೆಗೆ ಈ ಬಾರ್ಡರ್ ಎಂಬ ಶಬ್ದವನ್ನಾದರೂ ತೆಗೆಯಬೇಕೆಂದು ಹೇಳುತ್ತೇನೆ.

ಅವೇ ರೀತಿ ಇಲ್ಲಿ ತಾವು 250 ರೂಪಾಯಿಗಳ ಪೆನಾಲ್ಟಿ ಎಂದು ಹೇಳಿದ್ದೀರಿ. ಇದೂ ಸಹಾ ಸೈಂಟಿಫಿಕ್ ಆಗಿಲ್ಲ. ಇದನ್ನೂ ಸಹಾ ಸರ್ಕಾರದವರು ಪುನರ್‌ಪರಿಶೀಲನೆ ಮಾಡಿ ಇದಕ್ಕೆ ಬೇರೆ ಪದ ಹಾಕಬೇಕೆಂದು ಹೇಳುತ್ತೇನೆ. ಇಲ್ಲಿ ಮೊದಲನೇ ತಪ್ಪಿಗೆ ಇಷ್ಟು, ಎರಡನೇ ತಪ್ಪಿಗಿಷ್ಟು ಮೂರನೆ ತಪ್ಪುಗಿಷ್ಟು ಎಂದು ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಇದನ್ನು ಈ ರೀತಿ ಮಾರ್ಪಾಡು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಈ 61ನೆಯ ಕ್ಲಾಜ್ ಪೂರ್ತಿ ಅನ್ಯಾಯ. ಇದು ದೊಡ್ಡ ಅನ್ಯಾಯವಾಗಿದೆ. ಇಲ್ಲಿ ಹೀಗೆ ಹೇಳಿದ್ದಾರೆ:

"Recovery of cost of repairing damage when the offender is unascertainable. When the person causing any damage, alteration, enlargement or obstruction to any irrigation work without proper authority cannot, after such enquiry as the Deputy Commissioner may deem sufficient, be ascertained or identified, the Deputy Commissioner may, on a requistion from the Irrigation Officer, after giving not less than one month's notice to the holders and occupiers of all lands benefited thereby, and after hearing their representations, if any recover from them as an arrear of land revenue, in such proportion as he thinks fit, the cost of repairing such damage, or of removing such alteration or obstruction."

ಹೀಗೆ ರೈತರಿಂದ ವಸೂಲ್ಮಾಡಿದ ದುಡ್ಡನ್ನೆಲ್ಲಾ ಏನು ಮಾಡುತ್ತೀರಿ ? ಈ ದುಡ್ಡನ್ನೆಲ್ಲಾ ಬರಿ ನೌಕರದಾರರ ಸಂಬಳಸಾರಿಗೆಗಳಿಗೇ ಉಪಯೋಗ ಮಾಡುತ್ತೀರಾ ಹೇಗೆ ? ಹೀಗೆಲ್ಲಾ ರೈತ ಸರ್ಕಾರಕ್ಕೆ ನಾನಾರೂಪದಲ್ಲಿ ತೆರಿಗೆ ಕೊಟ್ಟದ್ದಕ್ಕೇನು ಅತನಿಗೆ ಪ್ರಯೋಜನ ? ಇನ್ನು ದೈವದತ್ತವಾಗಿ ಬಂದ ಆ ಕೋಲಾರ ಚಿನ್ನದ ಗಣಿ ಸರ್ಕಾರದ್ದು, ಇತರ ಮೈನಿಂಗುಗಳೆಲ್ಲಾ ಸರ್ಕಾರದ್ದು. ಹೀಗೆಲ್ಲಾ ಮಾಡಿ ಪಟ್ಟಣದಲ್ಲಿರತಕ್ಕ ನೀವು ಆ ಜನರನ್ನು ಸುಲಿಗೆ ಮಾಡಿ ನಾಗರೀಕರೆಂದು ಹೇಳಿಕೊಂಡು ಮಜಾಮಾಡಬೇಕು, ಆ ರೈತ ಲಾಸ್ಟ್‌ಗ್ರೇಡಿನಲ್ಲಿದ್ದಾನೆ ಎಂದು ಅತನನ್ನು ಕೈಬಿಡುವುದು ನ್ಯಾಯವೇ ? ನೀವು ಆಲೋಚನೆ ಮಾಡಿ ಅನ್ಯಾಯಮಾಡಿ. ಆದರೆ ಈ ಬಿಲ್ಲನ್ನೂ ಸಲೆಕ್ಟ್ ಕಮಿಟಿಯ

ಮುಂದೆ ಹೋಗತಕ್ಕದ್ದಿದೆ, ಅಲ್ಲಿ ಇದನ್ನು ಇನ್ನೂ ಹೆಚ್ಚುಕಡಿಮೆ ಮಾಡುವುದಕ್ಕೆ ಅವಕಾಶವಿದೆ, ಅಲ್ಲಿಯೂ ಬುದ್ಧಿವಂತರಿರುತ್ತಾರೆಂದು ಇಷ್ಟನ್ನು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. **SPEAKER.**—The House now stands adjourned to meet again at 8-30 A.M. to-morrow.

---

*The House adjourned at Thirty Minutes past Six of the Clock to meet again at Thirty Minutes past Eight of the Clock on Saturday, the* 14*th December 1963.*

---